# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ¨sÀUÀ4<br>Part – IV | ಬೆಂಗಳೂರು, ಮಂಗಳವಾರ, 20, ಮೇ, 2025(ವೈಶಾಖ, 30, ಶಕವರ್ಷ, 1947)<br>**BENGALURU, TUESDAY, 20, MAY, 2025(VAISHAKHA, 30, SHAKAVARSHA, 1947)** | ನಂ. **295**<br>**No.295** |


**ಭಾಷಾಂತರ ನಿರ್ದೇಶನಾಲಯ**

**ಅಧಿಸೂಚನೆ**

ಸಂಖ್ಯೆ: ಭಾನಿ 10/ಆಮುಪ್ರಶಾ/ಇ-ಗೆಜೆಟ್/2025 ಬೆಂಗಳೂರು, ದಿನಾಂಕ:15-05-2025

ಭಾರತ ಸರ್ಕಾರದ Official Language Wing, Ministry of Law and Justice, Government of India ರವರ ಪತ್ರ ಸಂಖ್ಯೆ:F.No.10(iii)(IX)/Auth./Kannada/79-OL/33, ದಿನಾಂಕ:08-04-2025 ರ ಪತ್ರದಲ್ಲಿ ಸೂಚಿಸಿದಂತೆ The Authoritative Text (Central Laws) Act, 1973 (Central Act 50 of 1973)ರ ಪ್ರಕರಣ 2(ಎ)ರ ಅಡಿಯಲ್ಲಿ ದಿನಾಂಕ:26-03-2025 ರಂದು ಮಾನ್ಯ ರಾಷ್ಟ್ರಪತಿಯವರಿಂದ ಅನುಮೋದನೆಗೊಂಡ ಕೇಂದ್ರ ಅಧಿನಿಯಮವಾದ **ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ ಸಂಖ್ಯೆ 47)ರ** ಕನ್ನಡ ಆವೃತ್ತಿಯನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಲು ಆದೇಶಿಸಲಾಗಿದೆ,-

भारत का राजपत्र
The Gazette of India
ಭಾರತ ರಾಜಪತ್ರ

**(Extraordinary)**
**(ವಿಶೇಷ ಸಂಚಿಕೆ)**

**भाग IX अनुभाग 1**
**PART IX SECTION 1**
**ಭಾಗ IX ವಿಭಾಗ 1**

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ**

| | | |
|---|---|---|
| सं 1, नई दिल्ली, बुधवार, 26 मार्च, 2025 | फाल्गुन 27, 1946 (शक) | खंड.57 |
| No.1, New Delhi, Wednesday, March 26, 2025 | Phalguna 27, 1946 (saka) | Vol. 57 |
| ನಂ.1, ನವದೆಹಲಿ, ಬುಧವಾರ, ಮಾರ್ಚ್ 26, 2025 | ಫಾಲ್ಗುಣ 27, 1946 (ಶಕ) | ಸಂಪುಟ.57 |

**Ministry of Law and Justice**
(Legislative Department)
New Delhi, 26th March, 2025

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

(ವಿಧಾಯೀ ಇಲಾಖೆ)

**ನವದೆಹಲಿ, 26ನೇ ಮಾರ್ಚ್, 2025**

The Translation in Kannada of **THE BHARATIYA SAKSHYA ADHINIYAM, 2023 (No. 47 of 2023)** -is hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

**ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ ಸಂಖ್ಯೆ 47)** - ಇದರ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತೀಯ ಸಾಕ್ಷ್ಯ ಅಧಿನಿಯಮ, 2023

## (2023ರ ಸಂಖ್ಯೆ 47)

*[25ನೇ ಡಿಸೆಂಬರ್, 2023.]*

ನಿಷ್ಪಕ್ಷಪಾತವಾದ ಅಧಿವಿಚಾರಣೆಗಾಗಿ ಸಾಕ್ಷ್ಯದ ಸಾಮಾನ್ಯ ನಿಯಮಗಳನ್ನು ಹಾಗೂ ತತ್ವಗಳನ್ನು ಕ್ರೋಢೀಕರಿಸುವ ಮತ್ತು ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಎಪ್ಪತ್ತ-ನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಭಾಗ I

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಭಾರತೀಯ ಸಾಕ್ಷ್ಯ ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು, ಸೈನಿಕ ನ್ಯಾಯಾಲಯಗಳೂ ಒಳಗೊಂಡಂತೆ, ಯಾವುದೇ ನ್ಯಾಯಾಲಯದಲ್ಲಿ ಅಥವಾ ಅವುಗಳ ಮುಂದೆ ಇರುವ ಎಲ್ಲ ನ್ಯಾಯಿಕ ವ್ಯವಹರಣೆಗಳಿಗೆ ಅನ್ವಯಿಸುತ್ತದೆ. ಆದರೆ, ಇದು ಯಾವುದೇ ನ್ಯಾಯಾಲಯಕ್ಕೆ ಅಥವಾ ಅಧಿಕಾರಿಗೆ ಸಲ್ಲಿಸಿದ ಪ್ರಮಾಣಪತ್ರಗಳಿಗೆ ಅಥವಾ ಮಧ್ಯಸ್ಥಗಾರನ ಮುಂದಿರುವ ವ್ಯವಹರಣೆಗಳಿಗೆ ಅನ್ವಯಿಸುವುದಿಲ್ಲ.

(3) ಇದು, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ¹ನ್ಯಾಯಾಲಯ¹¹ ಎಂಬುದು ಮಧ್ಯಸ್ಥಗಾರರನ್ನು ಹೊರತುಪಡಿಸಿ, ಎಲ್ಲ ನ್ಯಾಯಾಧೀಶರನ್ನು ಮತ್ತು ಮ್ಯಾಜಿಸ್ಟ್ರೇಟರನ್ನು ಮತ್ತು ಸಾಕ್ಷ್ಯವನ್ನು ತೆಗೆದುಕೊಳ್ಳಲು ಕಾನೂನುಸಮ್ಮತವಾಗಿ ಅಧಿಕೃತರಾದ ಎಲ್ಲ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ;

(ಬಿ) ¹ನಿರ್ಣಾಯಕ ರುಜುವಾತು¹¹ ಎಂದರೆ, ಒಂದು ಸಂಗತಿಯನ್ನು, ಅದು ಮತ್ತೊಂದರ ನಿರ್ಣಾಯಕ ರುಜುವಾತು ಎಂದು ಈ ಅಧಿನಿಯಮದ ಮೂಲಕ ಘೋಷಿಸಿರುವಾಗ, ಒಂದು ಸಂಗತಿಯು ರುಜುವಾತಾದಲ್ಲಿ ಮತ್ತೊಂದು ಸಂಗತಿಯು ರುಜುವಾತಾಯಿತೆಂದು ನ್ಯಾಯಾಲಯವು ಪರಿಗಣಿಸತಕ್ಕದ್ದು ಮತ್ತು ಅದನ್ನು ರುಜುವಾತು ಆಗದುದು ಎಂದು ತೋರಿಸುವ ಉದ್ದೇಶಕ್ಕಾಗಿ ಸಾಕ್ಷ್ಯ ಕೊಡಲು ಅವಕಾಶ ಕೊಡತಕ್ಕದ್ದಲ್ಲ;

(ಸಿ) ಸಂಗತಿಗೆ ಸಂಬಂಧಿಸಿದಂತೆ, ¹ರುಜುವಾತಾಗದುದು¹¹ ಎಂದರೆ, ನ್ಯಾಯಾಲಯವು ತನ್ನ ಮುಂದಿರುವ ವಿಷಯಗಳನ್ನು ಪರ್ಯಾಲೋಚಿಸಿದ ತರುವಾಯ, ಒಂದು ಸಂಗತಿಯು ಅಸ್ತಿತ್ವದಲ್ಲಿಲ್ಲವೆಂದು ನಂಬಿದರೆ ಅಥವಾ ಒಂದು ವಿಶಿಷ್ಟ ಸಂದರ್ಭದ ಪರಿಸ್ಥಿತಿಗಳಲ್ಲಿ ಅದು ಅಸ್ತಿತ್ವದಲ್ಲಿಲ್ಲವೆಂಬ ಊಹೆಯ ಮೇಲೆ ಒಬ್ಬ ವಿವೇಕವುಳ್ಳ ವ್ಯಕ್ತಿಯು ಕಾರ್ಯಪ್ರವೃತ್ತನಾಗಬೇಕಾದಷ್ಟು ಅದು ಅಸ್ತಿತ್ವದಲ್ಲಿಲ್ಲದಿರುವ ಸಾಧ್ಯತೆ ಇದೆ ಎಂದು ಪರ್ಯಾಲೋಚಿಸಿದರೆ ಆ ಸಂಗತಿಯು ರುಜುವಾತಾಗದುದು ಎಂದರ್ಥ;

(ಡಿ) ¹ದಸ್ತಾವೇಜು¹¹ ಎಂದರೆ, ಯಾವ ವಿಷಯವನ್ನು ದಾಖಲಿಸುವುದಕ್ಕಾಗಿ ಯಾವ ಅಕ್ಷರಗಳು, ಅಂಕಿಗಳು ಅಥವಾ ಗುರುತುಗಳನ್ನು ಅಥವಾ ಯಾವುದೇ ಇತರ ಸಾಧನಗಳನ್ನು ಅಥವಾ ಅವುಗಳಲ್ಲಿ ಒಂದಕ್ಕಿಂತ ಹೆಚ್ಚು ಸಾಧನಗಳನ್ನು ಮತ್ತು ವಿದ್ಯುನ್ಮಾನ ಮತ್ತು ಡಿಜಿಟಲ್ ದಾಖಲೆಗಳನ್ನು ಒಳಗೊಂಡಂತೆ ಉಪಯೋಗಿಸಲು ಉದ್ದೇಶಿಸಲಾಗಿದೆಯೋ ಅಥವಾ

ಉಪಯೋಗಿಸಬಹುದಾಗಿದೆಯೋ ಆ ಸಾಧನಗಳ ಮೂಲಕ ಯಾವುದೇ ವಸ್ತುವಿಷಯದ ಮೇಲೆ ಅಭಿವ್ಯಕ್ತಪಡಿಸಲಾದ ಅಥವಾ ವಿವರಿಸಲಾದ ಅಥವಾ ಅನ್ಯಥಾ ದಾಖಲಿಸಲಾದ ಯಾವುದೇ ವಿಷಯ.

*ದೃಷ್ಟಾಂತಗಳು*

(i) ಬರಹವು ಒಂದು ದಸ್ತಾವೇಜು ಆಗಿರುತ್ತದೆ.

(ii) ಮುದ್ರಿತ, ಕಲ್ಲಚ್ಚು ಅಥವಾ ಛಾಯಾಚಿತ್ರಿತ ಪದಗಳು ದಸ್ತಾವೇಜುಗಳಾಗಿರುತ್ತವೆ.

(iii) ಒಂದು ನಕಾಶೆ ಅಥವಾ ನಕ್ಷೆಯು ದಸ್ತಾವೇಜು ಆಗಿರುತ್ತದೆ.

(iv) ಒಂದು ಲೋಹ ಪಟ್ಟಿಯ ಮೇಲೆ ಅಥವಾ ಶಿಲೆಯ ಮೇಲೆ ಕೆತ್ತಿದ ಬರಹವು ದಸ್ತಾವೇಜು ಆಗಿರುತ್ತದೆ.

(v) ಒಂದು ವ್ಯಂಗ್ಯ ಚಿತ್ರವು ದಸ್ತಾವೇಜು ಆಗಿರುತ್ತದೆ.

(vi) ಗಣಕಯಂತ್ರ, ಲ್ಯಾಪ್‌ಟಾಪ್ ಅಥವಾ ಸ್ಮಾರ್ಟ್‌ಫೋನ್‌ಗಳಲ್ಲಿನ ಇ-ಮೇಲ್, ಸರ್ವರ್ ಲಾಗ್‌ಗಳು, ದಸ್ತಾವೇಜುಗಳ ಕುರಿತ ವಿದ್ಯುನ್ಮಾನ ದಾಖಲೆ ಅಥವಾ ಡಿಜಿಟಲ್ ಸಾಧನಗಳಲ್ಲಿ ಸಂಗ್ರಹಿಸಲಾದ ಸಂದೇಶಗಳು, ವೆಬ್‌ಸೈಟ್‌ಗಳು, ಸ್ಥಳ ನಿರ್ದೇಶನ ಸಾಕ್ಷ್ಯ ಮತ್ತು ಧ್ವನಿ ಸಂದೇಶಗಳು ದಸ್ತಾವೇಜುಗಳಾಗಿರುತ್ತವೆ;

(ಇ) ̀ಸಾಕ್ಷ್ಯ̀̀ ಎಂದರೆ:-

(i) ವಿಚಾರಣೆಯಲ್ಲಿರುವ ಸಂಗತಿಯ ವಿಷಯಗಳಿಗೆ ಸಂಬಂಧಿಸಿ ಸಾಕ್ಷಿದಾರರು ತನ್ನ ಮುಂದೆ ಹೇಳಲು ನ್ಯಾಯಾಲಯವು ಅನುಮತಿ ಕೊಡುವ ಅಥವಾ ಅಗತ್ಯಪಡಿಸುವ ವಿದ್ಯುನ್ಮಾನ ರೂಪದಲ್ಲಿ ನೀಡಲಾದ ಹೇಳಿಕೆಗಳೂ ಸೇರಿದಂತೆ ಎಲ್ಲ ಹೇಳಿಕೆಗಳು ಮತ್ತು ಅಂಥ ಹೇಳಿಕೆಗಳು ಮೌಖಿಕ ಸಾಕ್ಷ್ಯವೆನಿಸುತ್ತವೆ;

(ii) ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಲಾದ ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಗಳನ್ನು ಒಳಗೊಂಡಂತೆ ಎಲ್ಲ ದಸ್ತಾವೇಜುಗಳು ಮತ್ತು ಅಂಥ ದಸ್ತಾವೇಜುಗಳು ದಸ್ತಾವೇಜಿನ ಸಾಕ್ಷ್ಯವೆನಿಸುತ್ತವೆ

- ಎಂದು ಅರ್ಥ ಮತ್ತು ಅದು ಇವುಗಳನ್ನು ಒಳಗೊಳ್ಳುತ್ತದೆ;

(ಎಫ್) ̀ಸಂಗತಿ̀̀ ಎಂದರೆ:-

(i) ಇಂದ್ರಿಯವೇದ್ಯವಾಗುವಂಥ ಯಾವುದೇ ವಿಷಯ, ವಸ್ತುಸ್ಥಿತಿ ಅಥವಾ ವಸ್ತುಗಳ ನಡುವಣ ಗುಣಲಕ್ಷಣ ಸಂಬಂಧ;

(ii) ಯಾರೇ ವ್ಯಕ್ತಿಗೆ ಅರಿವಿರುವ ಯಾವುದೇ ಮಾನಸಿಕ ಸ್ಥಿತಿ

- ಎಂದು ಅರ್ಥ ಮತ್ತು ಅದು ಇವುಗಳನ್ನು ಒಳಗೊಳ್ಳುತ್ತದೆ.

*ದೃಷ್ಟಾಂತಗಳು*

(i) ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ಯಾವುದೇ ಒಂದು ನಿರ್ದಿಷ್ಟ ಕ್ರಮದಲ್ಲಿ ಕೆಲವು ವಸ್ತುಗಳನ್ನು ವ್ಯವಸ್ಥೆಗೊಳಿಸಲಾಗಿದೆ ಎಂಬುದು ಒಂದು ಸಂಗತಿ.

(ii) ಒಬ್ಬ ವ್ಯಕ್ತಿಯು ಏನನ್ನಾದರೂ ಕೇಳಿದನು ಅಥವಾ ನೋಡಿದನು ಎಂಬುದು ಒಂದು ಸಂಗತಿ.

(iii) ಒಬ್ಬ ವ್ಯಕ್ತಿಯು ಕೆಲವು ಮಾತುಗಳನ್ನು ಆಡಿದನು ಎಂಬುದು ಒಂದು ಸಂಗತಿ.

(iv) ಒಬ್ಬ ವ್ಯಕ್ತಿಯು ನಿರ್ದಿಷ್ಟ ಅಭಿಪ್ರಾಯವುಳ್ಳವನಾಗಿದ್ದಾನೆ, ನಿರ್ದಿಷ್ಟ ಉದ್ದೇಶವುಳ್ಳವನಾಗಿದ್ದಾನೆ, ಸದ್ಭಾವನೆಯಿಂದ ಅಥವಾ ಮೋಸದಿಂದ ವರ್ತಿಸುತ್ತಾನೆ ಅಥವಾ ಒಂದು ವಿಶಿಷ್ಟ ಪದವನ್ನು ಒಂದು ವಿಶಿಷ್ಟ ಅರ್ಥದಲ್ಲಿ ಉಪಯೋಗಿಸುತ್ತಾನೆ ಅಥವಾ ಒಂದು ನಿರ್ದಿಷ್ಟ ಸಮಯದಲ್ಲಿ ಒಂದು ವಿಶಿಷ್ಟ ಭಾವನೆಯ ಅರಿವುಳ್ಳವನಾಗಿದ್ದಾನೆ ಅಥವಾ ಆಗಿದ್ದನು ಎಂಬುದು ಒಂದು ಸಂಗತಿ.

(ಜಿ) “ವಿವಾದಿತ ಸಂಗತಿಗಳು” ಎಂಬ ಪದಾವಳಿಗೆ, ಸ್ವತಃ ಅದರಿಂದಲೇ ಅಥವಾ ಇತರ ಸಂಗತಿಗಳ ಸಂಬಂಧದಿಂದ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಸಮರ್ಥಿಸಲಾದ ಅಥವಾ ನಿರಾಕರಿಸಲಾದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಅಸಮರ್ಥತೆ, ಇರುವಿಕೆ, ಇಲ್ಲದಿರುವಿಕೆ, ಸ್ವರೂಪ ಅಥವಾ ವ್ಯಾಪ್ತಿಯು ಅವಶ್ಯವಾಗಿ ತಿಳಿದುಬರುವಂಥ ಯಾವುದೇ ಸಂಗತಿ ಎಂದು ಅರ್ಥ ಮತ್ತು ಅದು ಇವುಗಳನ್ನು ಒಳಗೊಳ್ಳುತ್ತದೆ.

*ವಿವರಣೆ.-* ಸಿವಿಲ್ ಪ್ರಕ್ರಿಯೆಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಪಬಂಧಗಳ ಮೇರೆಗೆ ಯಾವುದೇ ನ್ಯಾಯಾಲಯವು ಒಂದು ಸಂಗತಿಯ ವಿವಾದಾಂಶವನ್ನು ದಾಖಲಿಸಿದಾಗ, ಅಂಥ ವಿವಾದಾಂಶಕ್ಕೆ ಉತ್ತರವಾಗಿ ಸಮರ್ಥಿಸಬೇಕಾದ ಅಥವಾ ನಿರಾಕರಿಸಬೇಕಾದ ಯಾವುದೇ ಸಂಗತಿಯು ವಿವಾದಿತ ಸಂಗತಿಯಾಗಿರುತ್ತದೆ.

*ದೃಷ್ಟಾಂತಗಳು*

“ಎ”ಯು “ಬಿ”ಯ ಕೊಲೆಯ ಬಗ್ಗೆ ಆಪಾದಿತನಾಗಿದ್ದಾನೆ. ಆತನ ಅಧಿವಿಚಾರಣೆಯಲ್ಲಿ ಕೆಳಕಂಡ ಸಂಗತಿಗಳು ವಿವಾದಿತ ಸಂಗತಿಗಳಾಗಿರಬಹುದು:-

(i) “ಎ”ಯು “ಬಿ”ಯ ಮರಣವನ್ನುಂಟು ಮಾಡಿದನು;

(ii) “ಎ”ಯು “ಬಿ”ಯ ಮರಣವುಂಟು ಮಾಡುವ ಉದ್ದೇಶ ಹೊಂದಿದ್ದನು;

(iii) “ಎ” ಯು “ಬಿ” ನಿಂದ ಗಂಭೀರ ಮತ್ತು ಹಠಾತ್ ಪ್ರಚೋದನೆಗೆ ಒಳಗಾಗಿದ್ದನು;

(iv) “ಎ”ಯು “ಬಿ”ಯ ಮರಣವನ್ನುಂಟು ಮಾಡುವ ಕೃತ್ಯವನ್ನು ಮಾಡುವ ಕಾಲದಲ್ಲಿ, ಮಾನಸಿಕ ಅಸ್ವಸ್ಥತೆಯ ಕಾರಣದಿಂದ, ಅದರ ಸ್ವರೂಪವನ್ನು ತಿಳಿಯಲು ಆತನು ಅಸಮರ್ಥನಾಗಿದ್ದನು.

(ಹೆಚ್) “ಪೂರ್ವಭಾವನೆ ಮಾಡಬಹುದು”.- ನ್ಯಾಯಾಲಯವು ಒಂದು ಸಂಗತಿಯನ್ನು ಪೂರ್ವಭಾವನೆ ಮಾಡಬಹುದೆಂದು ಈ ಅಧಿನಿಯಮದ ಮೂಲಕ ರುಜುವಾತು ಮಾಡಿದಾಗಲೆಲ್ಲಾ, ಅದು ರುಜುವಾತಾಗದುದು ಎಂದು ತಿಳಿಯದ ಹೊರತು ಮತ್ತು ಹಾಗೆ ತಿಳಿಯುವವರೆಗೆ ಆ ಸಂಗತಿಯು ರುಜುವಾತಾದುದೆಂದು ಪರಿಗಣಿಸಬಹುದು ಅಥವಾ ಆ ಬಗ್ಗೆ ರುಜುವಾತು ಕೇಳಬಹುದು;

(ಐ) “ರುಜುವಾತಾಗದೇ ಇರುವುದು”.- ಒಂದು ಸಂಗತಿಯು ರುಜುವಾತಾಗದಿದ್ದರೆ ಅಥವಾ ರುಜುವಾತಾಗದೇ ಇರುವುದಾದರೆ ಅದನ್ನು ರುಜುವಾತಾಗದೇ ಇರುವುದು ಎಂದು ಹೇಳಲಾಗುತ್ತದೆ;

(ಜೆ) “ರುಜುವಾತಾದುದು”.- ನ್ಯಾಯಾಲಯವು ತನ್ನ ಮುಂದಿರುವ ವಿಷಯಗಳನ್ನು ಪರ್ಯಾಲೋಚಿಸಿದ ತರುವಾಯ, ಒಂದು ಸಂಗತಿಯು ಅಸ್ತಿತ್ವದಲ್ಲಿದೆ ಎಂದು ನಂಬಿದರೆ ಅಥವಾ ಒಂದು ವಿಶಿಷ್ಟ ಸಂದರ್ಭದ ಪರಿಸ್ಥಿತಿಗಳಲ್ಲಿ ಅದು ಅಸ್ತಿತ್ವದಲ್ಲಿದೆ ಎಂಬ ಊಹೆಯ ಮೇಲೆ ಒಬ್ಬ ವಿವೇಕವುಳ್ಳ ವ್ಯಕ್ತಿಯು ಕಾರ್ಯಪ್ರವೃತ್ತನಾಗಬೇಕಾದಷ್ಟು ಅದರ ಅಸ್ತಿತ್ವದ ಸಾಧ್ಯತೆ ಇದೆ ಎಂದು ಪರ್ಯಾಲೋಚಿಸಿದರೆ, ಆ ಸಂಗತಿಯು ರುಜುವಾತಾದುದು ಎಂದು ಹೇಳಲಾಗುತ್ತದೆ;

(ಕೆ) “ಸುಸಂಬದ್ಧ”.- ಸಂಗತಿಗಳ ಸುಸಂಬದ್ಧತೆಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಉಪಬಂಧಗಳಲ್ಲಿ ಉಲ್ಲೇಖಿಸಲಾದ ಯಾವುದೇ ರೀತಿಯಲ್ಲಿ ಒಂದು ಸಂಗತಿಯು ಮತ್ತೊಂದಕ್ಕೆ ಸಂಬಂಧಿಸಿದಾಗ, ಆ ಒಂದು ಸಂಗತಿಯು ಮತ್ತೊಂದಕ್ಕೆ ಸುಸಂಬದ್ಧವಾಗಿದೆ ಎಂದು ಹೇಳಲಾಗುತ್ತದೆ;

(ಎಲ್) “ಪೂರ್ವಭಾವನೆ ಮಾಡತಕ್ಕದ್ದು”.- ನ್ಯಾಯಾಲಯವು ಒಂದು ಸಂಗತಿಯನ್ನು ಪೂರ್ವಭಾವನೆ ಮಾಡತಕ್ಕದ್ದೆಂದು ಈ ಅಧಿನಿಯಮದ ಮೂಲಕ ನಿರ್ದೇಶಿಸಿರುವಾಗಲೆಲ್ಲಾ, ಅದು ರುಜುವಾತಾಗದುದು ಎಂದು ತಿಳಿಯುವ ಹೊರತು ಮತ್ತು ಹಾಗೆ ತಿಳಿಯುವವರೆಗೆ ಆ ಸಂಗತಿಯು ರುಜುವಾತಾದುದೆಂದು ಪರಿಗಣಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ, ಆದರೆ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ 21), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ನ್ಯಾಯ ಸಂಹಿತೆ, 2023ರಲ್ಲಿ ಪರಿಭಾಷಿಸಲಾಗಿರುವ ಪದಗಳು ಮತ್ತು ಪದಾವಳಿಗಳು ಸದರಿ ಅಧಿನಿಯಮ ಮತ್ತು ಸಂಹಿತೆಗಳಲ್ಲಿ ಅವುಗಳಿಗೆ ನೀಡಲಾಗಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಭಾಗ II

## ಅಧ್ಯಾಯ II

## ಸಂಗತಿಗಳ ಸುಸಂಬದ್ಧತೆ

**3. ವಿವಾದಿತ ಸಂಗತಿಗಳ ಮತ್ತು ಸುಸಂಬದ್ಧ ಸಂಗತಿಗಳ ಬಗ್ಗೆ ಸಾಕ್ಷ್ಯ ಕೊಡಬಹುದು.-** ಪ್ರತಿಯೊಂದು ವಿವಾದಿತ ಸಂಗತಿಯ ಇರುವಿಕೆ ಅಥವಾ ಇಲ್ಲದಿರುವಿಕೆಯ ಬಗ್ಗೆ ಮತ್ತು ಸುಸಂಬದ್ಧವೆಂದು ಈ ಮುಂದೆ ಘೋಷಿಸಿರುವಂಥ ಇತರ ಸಂಗತಿಗಳ ಬಗ್ಗೆ ಯಾವುದೇ ದಾವೆಯಲ್ಲಿ ಅಥವಾ ವ್ಯವಹರಣೆಯಲ್ಲಿ ಸಾಕ್ಷ್ಯವನ್ನು ಕೊಡಬಹುದು ಮತ್ತು ಬೇರೆ ಯಾವ ಸಂಗತಿಯ ಬಗ್ಗೆಯೂ ಅಲ್ಲ.

*ವಿವರಣೆ.-* ಸಿವಿಲ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಯಾವುದೇ ಉಪಬಂಧದ ಮೂಲಕ ಸಂಗತಿಯನ್ನು ರುಜುವಾತುಪಡಿಸಲು ಹಕ್ಕಿಲ್ಲದವನನ್ನಾಗಿ ಮಾಡಲಾದ ಯಾರೇ ವ್ಯಕ್ತಿಯನ್ನು, ಆ ಸಂಗತಿಯ ಬಗ್ಗೆ ಸಾಕ್ಷ್ಯ ಕೊಡಲು ಈ ಪ್ರಕರಣವು ಶಕ್ತನನ್ನಾಗಿ ಮಾಡತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) “ಬಿ”ಗೆ ಮರಣವುಂಟು ಮಾಡುವ ಉದ್ದೇಶದಿಂದ ಅವನಿಗೆ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದಕ್ಕಾಗಿ “ಎ”ಯು ಅಧಿವಿಚಾರಣೆಗೆ ಗುರಿಯಾಗಿದ್ದಾನೆ.

“ಎ”ಯ ಅಧಿವಿಚಾರಣೆಯಲ್ಲಿ ಕೆಳಕಂಡ ಸಂಗತಿಗಳು ವಿವಾದಿತವಾಗಿವೆ:-

“ಎ”ಯು “ಬಿ”ಯನ್ನು ದೊಣ್ಣೆಯಿಂದ ಹೊಡೆಯುವುದು;

ಹಾಗೆ ಹೊಡೆದು “ಎ”ಯು “ಬಿ”ಯ ಮರಣವನ್ನುಂಟು ಮಾಡುವುದು;

“ಬಿ”ಯ ಮರಣವುಂಟುಮಾಡಬೇಕೆಂಬುದು “ಎ”ನ ಉದ್ದೇಶ.

(ಬಿ) ಒಬ್ಬ ದಾವೆದಾರನು ಮೊಕದ್ದಮೆಯ ಮೊದಲ ವಿಚಾರಣೆಯಲ್ಲಿ ಹಾಜರುಪಡಿಸಲು ತಾನು ಅವಲಂಬಿಸಿರುವ ಬಾಂಡನ್ನು ಜೊತೆಗೆ ತಂದಿರುವುದಿಲ್ಲ ಮತ್ತು ಸಿದ್ಧವಾಗಿಟ್ಟುಕೊಂಡಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೂಲಕ ನಿಯಮಿಸಲಾದ ಷರತ್ತುಗಳಿಗೆ ಅನುಸಾರವಾಗಿಯಲ್ಲದೇ, ಅನ್ಯಥಾ ವ್ಯವಹರಣೆಗಳ ತರುವಾಯದ ಹಂತದಲ್ಲಿ ಬಾಂಡನ್ನು ಹಾಜರುಪಡಿಸಲು ಅಥವಾ ಅದರ ಒಳಾಂಶಗಳನ್ನು ರುಜುವಾತುಪಡಿಸಲು ಈ ಪ್ರಕರಣವು ಅವನನ್ನು ಶಕ್ತಗೊಳಿಸುವುದಿಲ್ಲ.

***ನಿಕಟವಾಗಿ ಸಂಬಂಧಪಟ್ಟ ಸಂಗತಿಗಳು***

**4. ಅದೇ ವ್ಯವಹಾರದ ಭಾಗವಾಗಿರುವ ಸಂಗತಿಗಳ ಸುಸಂಬದ್ಧತೆ.-** ಸಂಗತಿಗಳು ವಿವಾದಿತವಾಗಿರದಿದ್ದರೂ ಅದೇ ವ್ಯವಹಾರದ ಭಾಗವಾಗುವಂತೆ ವಿವಾದಿತ ಸಂಗತಿಗೆ ಸಂಬಂಧಿಸಿದ್ದರೆ, ಅವು ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ ಅಥವಾ ಬೇರೆ ಬೇರೆ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಂಭವಿಸಿದ್ದರೂ ಸುಸಂಬದ್ಧವಾಗಿರುತ್ತವೆ.

*ದೃಷ್ಟಾಂತಗಳು*

(ಎ) ಓಿಯು ಬಿಿಯನ್ನು ಹೊಡೆದು ಕೊಲೆ ಮಾಡಿದನೆಂದು ಆಪಾದಿತನಾಗಿದ್ದಾನೆ. ಹಾಗೆ ಹೊಡೆಯುವಾಗ ಅಥವಾ ಅದಕ್ಕಿಂತ ಸ್ವಲ್ಪ ಮುಂಚೆ ಅಥವಾ ಅದಾದ ಕೂಡಲೇ ಆ ಕೃತ್ಯದ ಭಾಗವಾಗುವಂತೆ ಓಿಯು ಅಥವಾ ಬಿಿಯು ಅಥವಾ ಹೊಡೆಯುವುದನ್ನು ನೋಡುತ್ತಿದ್ದವರು ಹೇಳಿದ ಅಥವಾ ಮಾಡಿದ ಯಾವುದೇ ವಿಷಯವು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಬಿ) ಸ್ವತ್ತನ್ನು ನಾಶಗೊಳಿಸಿರುವ, ಸೈನ್ಯದ ಮೇಲೆ ದಾಳಿ ಮಾಡಿರುವ ಮತ್ತು ಸೆರೆಮನೆಗಳನ್ನು ಒಡೆದು ತೆರೆದಿರುವ ಸಶಸ್ತ್ರ ದಂಗೆಯಲ್ಲಿ ಭಾಗವಹಿಸುವ ಮೂಲಕ ಭಾರತ ಸರ್ಕಾರದ ವಿರುದ್ಧ ಯುದ್ಧ ಹೂಡಿದ್ದಾನೆಂದು ಓಿಯು ಆಪಾದಿತನಾಗಿದ್ದಾನೆ. ಇವೆಲ್ಲವೂ ನಡೆಯುವಾಗ ಓಿಯು ಹಾಜರಿಲ್ಲದಿರಬಹುದಾಗಿದ್ದರೂ, ಇವೆಲ್ಲ ಆ ವ್ಯಾಪಕ ಕೃತ್ಯದ ಭಾಗವಾಗಿದ್ದು, ಈ ಸಂಗತಿಗಳು ನಡೆದಿರುವುದು ಸುಸಂಬದ್ಧವಾಗಿರುತ್ತದೆ.

(ಸಿ) ಪತ್ರ ವ್ಯವಹಾರದ ಭಾಗವಾಗಿರುವ ಒಂದು ಪತ್ರದಲ್ಲಿನ ಮಾನಹಾನಿ ಲೇಖನಕ್ಕಾಗಿ ಓಿಯು ಬಿಿಯ ಮೇಲೆ ದಾವೆ ಹೂಡುತ್ತಾನೆ. ಈ ಮಾನಹಾನಿ ಬರಹವು ಉದ್ಭವಿಸಿದ ವಿಷಯಕ್ಕೆ ಸಂಬಂಧಿಸಿದ ಮತ್ತು ಅದು ಒಳಗೊಂಡಿರುವ ಪತ್ರ ವ್ಯವಹಾರದ ಭಾಗವಾಗಿರುವ ಅವರಿಬ್ಬರ ನಡುವಿನ ಪತ್ರಗಳು ಅವುಗಳಲ್ಲಿಯೇ ಮಾನಹಾನಿ ಬರಹಗಳಿದ್ದರೂ, ಸುಸಂಬದ್ಧ ಸಂಗತಿಗಳಾಗಿರುತ್ತದೆ.

(ಡಿ) ಬಿಿಯಿಂದ ಕೋರಲ್ಪಟ್ಟ ಕೆಲವು ಸರಕುಗಳನ್ನು ಓಿಗೆ ಕೊಡಲಾಗಿದೆಯೇ ಎಂಬ ಪ್ರಶ್ನೆ. ಆ ಸರಕುಗಳನ್ನು ಒಬ್ಬರ ಅನಂತರ ಮತ್ತೊಬ್ಬರಂತೆ ಹಲವಾರು ಮಧ್ಯವರ್ತಿಗಳಿಗೆ ಕೊಡಲಾಗಿದೆ. ಅಂಥ ಪ್ರತಿಯೊಂದು ವಿತರಣೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

**5. ವಿವಾದಿತ ಸಂಗತಿಗಳ ಅಥವಾ ಸುಸಂಬದ್ಧ ಸಂಗತಿಗಳ ಸಂದರ್ಭ, ಕಾರಣ ಅಥವಾ ಪರಿಣಾಮವಾಗಿರುವಂಥ ಸಂಗತಿಗಳು.-** ಯಾವ ಸಂಗತಿಗಳು ಸುಸಂಬದ್ಧ ಸಂಗತಿಗಳ ಅಥವಾ ವಿವಾದಿತ ಸಂಗತಿಗಳ ತಕ್ಷಣದ ಅಥವಾ ಅನ್ಯಥಾ ಸಂದರ್ಭ, ಕಾರಣ ಅಥವಾ ಪರಿಣಾಮ ಆಗಿರುತ್ತವೆಯೋ ಆ ಸಂಗತಿಗಳು ಅಥವಾ ಯಾವ ವಸ್ತುಸ್ಥಿತಿಯಲ್ಲಿ ಅವು ಸಂಭವಿಸಿದವೋ ಆ ವಸ್ತುಸ್ಥಿತಿಯನ್ನು ರೂಪಿಸುವಂಥ ಸಂಗತಿಗಳು ಅಥವಾ ಅವುಗಳು ಸಂಭವಿಸುವುದಕ್ಕೆ ಅಥವಾ ಅವುಗಳ ವ್ಯವಹರಣೆಗೆ ಒಂದು ಅವಕಾಶವನ್ನು ಒದಗಿಸಿರುವವೋ ಆ ಸಂಗತಿಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

*ದೃಷ್ಟಾಂತಗಳು*

(ಎ) ಓಿಯು ಬಿಿ ಯನ್ನು ಸುಲಿಗೆ ಮಾಡಿದನೇ ಎಂಬುದು ಪ್ರಶ್ನೆ. ಸುಲಿಗೆಯಾಗುವುದಕ್ಕಿಂತ ಸ್ವಲ್ಪ ಮುಂಚೆ ಬಿಿಯು ಹಣವಿಟ್ಟುಕೊಂಡು ಜಾತ್ರೆಗೆ ಹೋದನು ಮತ್ತು ಬೇರೆ ವ್ಯಕ್ತಿಗಳಿಗೆ ಅದನ್ನು ತೋರಿಸಿದನು ಅಥವಾ ಅದು ತನ್ನಲ್ಲಿ ಇದೆಯೆಂಬ ಸಂಗತಿಯನ್ನು ಹೇಳಿದನು ಎಂಬ ಸಂಗತಿಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಬಿ) ಓಿಯು ಬಿಿ ಯನ್ನು ಕೊಲೆ ಮಾಡಿದನೇ ಎಂಬುದು ಪ್ರಶ್ನೆ. ಕೊಲೆಯಾದ ಸ್ಥಳದಲ್ಲಿ ಅಥವಾ ಅದರ ಹತ್ತಿರ ನಡೆದ ಹೋರಾಟದಿಂದ ಭೂಮಿಯ ಮೇಲೆ ಆದ ಗುರುತುಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಸಿ) ಓಿಯು ಬಿಿಗೆ ವಿಷ ಹಾಕಿದನೇ ಎಂಬುದು ಪ್ರಶ್ನೆ. ವಿಷ ಪ್ರಯೋಗದಿಂದುಂಟಾದ ಚಿಹ್ನೆಗಳು ಕಾಣಿಸಿಕೊಳ್ಳುವುದಕ್ಕೆ ಮುಂಚಿನ ಬಿಿಯ ಆರೋಗ್ಯ ಸ್ಥಿತಿ ಮತ್ತು ಓಿಗೆ ಗೊತ್ತಿದ್ದ ವಿಷ ಪ್ರಯೋಗ ಮಾಡಲು ಅವಕಾಶವೀಯುವಂಥ ಬಿಿಯ ಅಭ್ಯಾಸಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

**6. ಉದ್ದೇಶ, ಸಿದ್ಧತೆ ಮತ್ತು ಹಿಂದಿನ ಅಥವಾ ತರುವಾಯದ ನಡತೆ.-** (1) ಯಾವುದೇ ವಿವಾದಿತ ಸಂಗತಿಯ ಅಥವಾ ಸುಸಂಬದ್ಧ ಸಂಗತಿಯ ಬಗ್ಗೆ ಯಾವುದೇ ಉದ್ದೇಶವನ್ನು ಅಥವಾ ಸಿದ್ಧತೆಯನ್ನು ತೋರಿಸುವ ಅಥವಾ ಉಂಟುಮಾಡುವ ಯಾವುದೇ ಸಂಗತಿಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(2) ಯಾವುದೇ ದಾವೆಯ ಅಥವಾ ವ್ಯವಹರಣೆಯ ಸಂಬಂಧದಲ್ಲಿ ಅಥವಾ ಅದರಲ್ಲಿನ ವಿವಾದಿತ ಅಥವಾ ಅದಕ್ಕೆ ಸುಸಂಬದ್ಧವಾದ ಯಾವುದೇ ಸಂಗತಿಯ ಸಂಬಂಧದಲ್ಲಿ ಅಂಥ ಯಾವುದೇ ದಾವೆಯ ಅಥವಾ ವ್ಯವಹರಣೆಯ ಯಾರೇ ಪಕ್ಷಕಾರನ ಅಥವಾ ಅವನ ಯಾರೇ ಏಜೆಂಟನ ನಡತೆಯು ಮತ್ತು ಯಾವ ವ್ಯಕ್ತಿಯ ವಿರುದ್ಧದ ಅಪರಾಧವು ಯಾವುದೇ ವ್ಯವಹರಣೆಯ ವಿಷಯವಾಗಿದೆಯೋ ಆ ವ್ಯಕ್ತಿಯ ನಡತೆಯು, ಅದು ಯಾವುದೇ ವಿವಾದಿತ ಸಂಗತಿಯ ಮೇಲೆ ಪ್ರಭಾವ ಬೀರುವುದಾದರೆ ಅಥವಾ ಅದರಿಂದ ಪ್ರಭಾವಿತವಾಗುವುದಾದರೆ ಮತ್ತು ಅದು ಮುಂಚಿತವಾಗಿ ನಡೆದಿರಲಿ ಅಥವಾ ಅನಂತರ ನಡೆದಿರಲಿ, ಅಂಥ ನಡತೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

*ವಿವರಣೆ 1.-* ಈ ಪ್ರಕರಣದಲ್ಲಿಯ “ನಡತೆ” ಎಂಬ ಪದವು, ಹೇಳಿಕೆಗಳನ್ನು, ಆ ಹೇಳಿಕೆಗಳು ಆ ಕಾರ್ಯಗಳೊಡನೆ ಹೊಂದಿಕೊಂಡಿದ್ದು ಅವುಗಳನ್ನು ವಿವರಿಸುವಂತಿದ್ದ ಹೊರತು ಒಳಗೊಳ್ಳುವುದಿಲ್ಲ; ಆದರೆ, ಈ ವಿವರಣೆಯು ಈ ಅಧಿನಿಯಮದ ಯಾವುದೇ ಇತರ ಪ್ರಕರಣದ ಮೇರೆಗಿನ ಹೇಳಿಕೆಗಳ ಸುಸಂಬದ್ಧತೆಯ ಮೇಲೆ ಪರಿಣಾಮವನ್ನುಂಟುಮಾಡುವುದಿಲ್ಲ.

*ವಿವರಣೆ 2.-* ಯಾರೇ ವ್ಯಕ್ತಿಯ ನಡತೆಯು ಸುಸಂಬದ್ಧವಾಗಿರುವಾಗ ಅಂಥ ನಡತೆಯ ಮೇಲೆ ಪರಿಣಾಮ ಬೀರುವ ಮತ್ತು ಅವನಿಗೆ ಅಥವಾ ಅವನ ಮುಂದೆ ಮತ್ತು ಅವನಿಗೆ ಕೇಳಿಸುವಂತೆ ಮಾಡಿದ ಯಾವುದೇ ಹೇಳಿಕೆಯು ಸುಸಂಬದ್ಧವಾಗಿರುತ್ತದೆ.

*ದೃಷ್ಟಾಂತಗಳು*

(ಎ) “ಬಿ”ಯ ಕೊಲೆಗಾಗಿ “ಎ”ಯನ್ನು ಅಧಿವಿಚಾರಣೆಗೆ ಒಳಪಡಿಸಲಾಗಿದೆ. “ಎ”ಯು “ಸಿ”ಯನ್ನು ಕೊಲೆ ಮಾಡಿದನೆಂಬ, “ಎ”ಯು “ಸಿ”ಯನ್ನು ಕೊಲೆ ಮಾಡಿದ್ದ ಎಂಬುದು “ಬಿ”ಗೆ ಗೊತ್ತಿದ್ದಿತೆಂಬ ಮತ್ತು “ಬಿ”ಯು ತನಗೆ ಗೊತ್ತಿರುವ ವಿಷಯವನ್ನು ಬಹಿರಂಗಪಡಿಸುವುದಾಗಿ ಬೆದರಿಸಿ “ಎ”ಯಿಂದ ಹಣವನ್ನು ಬಲಾದ್ಗ್ರಹಣ ಮಾಡಲು ಪ್ರಯತ್ನಿಸಿದ್ದನೆಂಬ ಸಂಗತಿಗಳು ಸುಸಂಬದ್ಧವಾದುವುಗಳಾಗಿವೆ.

(ಬಿ) ಹಣ ಸಂದಾಯಕ್ಕಾಗಿ ಬಾಂಡ್‌ನ ಆಧಾರದ ಮೇಲೆ “ಎ”ಯು “ಬಿ”ಯ ಮೇಲೆ ದಾವೆ ಹೂಡುತ್ತಾನೆ. ಅಂಥ ಬಾಂಡನ್ನು ಬರೆದುಕೊಟ್ಟಿರುವುದನ್ನು “ಬಿ”ಯು ನಿರಾಕರಿಸುತ್ತಾನೆ. ಬಾಂಡನ್ನು ಬರೆದುಕೊಡಲಾಗಿದೆಯೆಂದು ಹೇಳಲಾದ ಸಮಯದಲ್ಲಿ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ “ಬಿ”ಗೆ ಹಣ ಅಗತ್ಯವಿತ್ತೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

(ಸಿ) “ಬಿ”ಗೆ ವಿಷಕೊಟ್ಟು ಕೊಲೆ ಮಾಡಿದ ಬಗ್ಗೆ “ಎ” ಯನ್ನು ಅಧಿವಿಚಾರಣೆಗೆ ಒಳಪಡಿಸಲಾಗಿದೆ. “ಬಿ”ಗೆ ಕೊಟ್ಟಂಥ ವಿಷವನ್ನೇ “ಬಿ”ಯ ಮರಣಕ್ಕೆ ಮುಂಚೆ “ಎ”ಯು ಪಡೆದುಕೊಂಡಿದ್ದನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

(ಡಿ) ಒಂದು ನಿರ್ದಿಷ್ಟ ದಸ್ತಾವೇಜು “ಎ”ಯ ಮರಣಶಾಸನವೇ ಎಂಬುದು ಪ್ರಶ್ನೆ. ಮೇಲೆ ಹೇಳಲಾದ ಮರಣ ಶಾಸನದ ದಿನಾಂಕಕ್ಕೆ ಸ್ವಲ್ಪ ಸಮಯದ ಹಿಂದೆ, ಆ ಮರಣ ಶಾಸನದ ಉಪಬಂಧಗಳಿಗೆ ಸಂಬಂಧಿಸಿರುವ ವಿಷಯಗಳ ಬಗ್ಗೆ “ಎ”ಯು ವಿಚಾರಿಸಿದ್ದನು, ಎಂದರೆ ಮರಣಶಾಸನವನ್ನು ಮಾಡುವುದಕ್ಕೆ ಸಂಬಂಧಿಸಿದಂತೆ ಅವನು ನ್ಯಾಯವಾದಿಗಳೊಂದಿಗೆ ಸಮಾಲೋಚಿಸಿದ್ದನೆಂಬ ಮತ್ತು ಅವನು ಅಥವಾ ಇತರ ಮರಣ ಶಾಸನಗಳ ಕರಡನ್ನು ತಯಾರು ಮಾಡಿಸಿದ್ದನು, ಅವನು ಅವುಗಳನ್ನು ಅನುಮೋದಿಸಿರಲಿಲ್ಲ ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತದೆ.

(ಇ) “ಎ”ಯು ಒಂದು ಅಪರಾಧಕ್ಕಾಗಿ ಆಪಾದಿತನಾಗಿದ್ದಾನೆ. ಮೊಕದ್ದಮೆಯ ಸಂಗತಿಗಳನ್ನು ತನ್ನ ಪರವಾಗಿಯೇ ಇವೆಯೆಂದು ತೋರಿಬರುವಂತೆ ಮಾಡುವ ಸಾಕ್ಷ್ಯವನ್ನು ಮೇಲೆ ಹೇಳಲಾದ ಅಪರಾಧಕ್ಕೆ ಮುಂಚೆ ಅಥವಾ ಆ ಸಮಯದಲ್ಲಿ ಅಥವಾ ಅನಂತರ

‘ಎ’ಯು ಒದಗಿಸಿದ್ದಾನೆಂಬ ಅಥವಾ ಅವನು ಸಾಕ್ಷ್ಯವನ್ನು ನಾಶಪಡಿಸಿದ್ದಾನೆಂಬ ಅಥವಾ ಮುಚ್ಚಿಟ್ಟಿದ್ದಾನೆಂಬ ಅಥವಾ ಸಾಕ್ಷಿಗಳಾಗಬಹುದಾಗಿದ್ದ ವ್ಯಕ್ತಿಗಳು ಹಾಜರಾಗದಂತೆ ಅಥವಾ ಅವರು ಗೈರುಹಾಜರಾಗುವಂತೆ ಮಾಡಿದ್ದಾನೆಂಬ ಅಥವಾ ತತ್ಸಂಬಂಧದಲ್ಲಿ ಸುಳ್ಳು ಸಾಕ್ಷ್ಯ ನೀಡುವಂತೆ ವ್ಯಕ್ತಿಗಳನ್ನು ತಯಾರು ಮಾಡಿದ್ದನೆಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

(ಎಫ್) ‘ಎ’ಯು ‘ಬಿ’ಯನ್ನು ಸುಲಿಗೆ ಮಾಡಿದನೇ ಎಂಬುದು ಪ್ರಶ್ನೆ. ‘ಬಿ’ಯ ಸುಲಿಗೆಯಾದ ನಂತರ ‘ಬಿ’ಯನ್ನು ಸುಲಿಗೆ ಮಾಡಿದ ವ್ಯಕ್ತಿಯನ್ನು ಪತ್ತೆ ಹಚ್ಚಲು ಪೊಲೀಸರು ಬರುತ್ತಿದ್ದಾರೆ ಎಂದು ‘ಸಿ’ಯು ‘ಎ’ಯ ಸಮಕ್ಷಮದಲ್ಲಿ ಹೇಳಿದನು ಮತ್ತು ಆ ಕೂಡಲೇ ‘ಎ’ಯು ಓಡಿಹೋದನು ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

(ಜಿ) ‘ಎ’ಯು ‘ಬಿ’ಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದೆಯೇ ಎಂಬುದು ಪ್ರಶ್ನೆ. ‘ಎ’ಯು ತನಗೆ ಹಣವನ್ನು ಸಾಲ ಕೊಡುವಂತೆ ‘ಸಿ’ ಯನ್ನು ಕೇಳಿದನೆಂಬ ಮತ್ತು ‘ಡಿ’ಯು ‘ಎ’ಯ ಸಮಕ್ಷಮ ಮತ್ತು ಅವನಿಗೆ ಕೇಳಿಸುವಂತೆ “ಅವನು ‘ಬಿ’ಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದೆ. ‘ಎ’ಯನ್ನು ನೀನು ನಂಬಬೇಡ ಎಂದು ನಾನು ನಿನಗೆ ಸಲಹೆ ಮಾಡುತ್ತೇನೆ” ಎಂದು ‘ಸಿ’ಗೆ ಹೇಳಿದನೆಂಬ ಮತ್ತು ‘ಎ’ಯು ಯಾವುದೇ ಪ್ರತ್ಯುತ್ತರವನ್ನು ಕೊಡದೆ ಹೊರಟುಹೋದನೆಂಬ ಸಂಗತಿಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಹೆಚ್) ‘ಎ’ಯು ಅಪರಾಧ ಮಾಡಿದನೇ ಎಂಬುದು ಪ್ರಶ್ನೆ. ಅಪರಾಧಿಯ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ‘ಎ’ಗೆ ಎಚ್ಚರಿಕೆ ಕೊಡುವ ಪತ್ರ ಬಂದ ತರುವಾಯ ಆತನು ತಲೆಮರೆಸಿಕೊಂಡಿದ್ದಾನೆಂಬ ಸಂಗತಿಯು ಮತ್ತು ಪತ್ರದಲ್ಲಿರುವ ಅಂಶಗಳು ಸುಸಂಬದ್ಧವಾಗಿರುತ್ತವೆ.

(ಐ) ‘ಎ’ಯು ಒಂದು ಅಪರಾಧಕ್ಕಾಗಿ ಆಪಾದಿತನಾಗಿದ್ದಾನೆ. ಮೇಲೆ ಹೇಳಿದ ಅಪರಾಧವು ನಡೆದ ತರುವಾಯ ಅವನು ತಲೆಮರೆಸಿಕೊಂಡಿದ್ದಾನೆ ಅಥವಾ ಆ ಅಪರಾಧದಿಂದ ದೊರಕಿದ ಸ್ವತ್ತನ್ನು ಅಥವಾ ಆ ಸ್ವತ್ತಿನ ಉತ್ಪನ್ನಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನು ಅಥವಾ ಆ ಅಪರಾಧವನ್ನು ಮಾಡುವಲ್ಲಿ ಉಪಯೋಗಿಸಿದ್ದ ಅಥವಾ ಉಪಯೋಗಿಸಿರಬಹುದಾದ ವಸ್ತುಗಳನ್ನು ಬಚ್ಚಿಡಲು ಪ್ರಯತ್ನಿಸಿದ್ದಾನೆ ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

(ಜೆ) ‘ಎ’ ಎಂಬವಳು ಅತ್ಯಾಚಾರಕ್ಕೆ ಗುರಿಯಾಗಿದ್ದಾಳೆ ಎಂಬುದು ಪ್ರಶ್ನೆ. ಮೇಲೆ ಹೇಳಲಾದ ಅತ್ಯಾಚಾರ ನಡೆದ ಸ್ವಲ್ಪ ಸಮಯದ ನಂತರ, ಅವಳು ಆ ಅಪರಾಧಕ್ಕೆ ಸಂಬಂಧಿಸಿದಂತೆ ಒಂದು ದೂರು ಕೊಟ್ಟಳೆಂಬ ಮತ್ತು ದೂರನ್ನು ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ಪದಗಳನ್ನು ಉಪಯೋಗಿಸಿ ಕೊಡಲಾಗಿತ್ತು ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ. ದೂರನ್ನು ಕೊಡದೆಯೆ, ‘ಎ’ ಅತ್ಯಾಚಾರಕ್ಕೆ ಗುರಿಯಾಗಿದ್ದೇನೆಂದು ‘ಎ’ ಹೇಳಿದಳೆಂಬ ಸಂಗತಿಯು, ಈ ಪ್ರಕರಣದ ಮೇರೆಗೆ ನಡತೆಯಾಗಿ ಸುಸಂಬದ್ಧವಲ್ಲ; ಆದಾಗ್ಯೂ, 26ನೇ ಪ್ರಕರಣದ (ಎ) ಖಂಡದ ಮೇರೆಗಿನ ಮರಣ ಕಾಲದ ಹೇಳಿಕೆಯಾಗಿ ಅಥವಾ 160ನೇ ಪ್ರಕರಣದ ಮೇರೆಗಿನ ಪುಷ್ಟೀಕರಣ ಸಾಕ್ಷ್ಯವಾಗಿ ಅದು ಸುಸಂಬದ್ಧವಾಗಿರಬಹುದು.

(ಕೆ) ‘ಎ’ಯನ್ನು ಸುಲಿಗೆ ಮಾಡಲಾಯಿತೇ ಎಂಬುದು ಪ್ರಶ್ನೆ. ಮೇಲೆ ಹೇಳಲಾದ ಸುಲಿಗೆಯಾದ ಕೂಡಲೇ ‘ಎ’ನು ಅಪರಾಧಕ್ಕೆ ಸಂಬಂಧಿಸಿದಂತೆ ಒಂದು ದೂರು ಕೊಟ್ಟನೆಂಬ ಮತ್ತು ದೂರನ್ನು ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ಪದಗಳನ್ನು ಉಪಯೋಗಿಸಿ ಕೊಡಲಾಗಿತ್ತು ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ. ಯಾವುದೇ ದೂರನ್ನು ಕೊಡದೆಯೇ, ತನ್ನ ಸುಲಿಗೆಯಾಯಿತೆಂದು ಆತನು ಹೇಳಿದನೆಂಬ ಸಂಗತಿಯು, ಈ ಪ್ರಕರಣದ ಮೇರೆಗೆ ನಡತೆಯಾಗಿ ಸುಸಂಬದ್ಧವಲ್ಲ; ಆದಾಗ್ಯೂ, 26ನೇ ಪ್ರಕರಣದ (ಎ) ಖಂಡದ ಮೇರೆಗಿನ ಮರಣ ಕಾಲದ ಹೇಳಿಕೆಯಾಗಿ ಅಥವಾ 160ನೇ ಪ್ರಕರಣದ ಮೇರೆಗಿನ ಪುಷ್ಟೀಕರಣ ಸಾಕ್ಷ್ಯವಾಗಿ ಅದು ಸುಸಂಬದ್ಧವಾಗಿರಬಹುದು.

**7. ವಿವಾದಿತ ಸಂಗತಿಗಳನ್ನು ಅಥವಾ ಸುಸಂಬದ್ಧ ಸಂಗತಿಗಳನ್ನು ವಿವರಿಸಲು ಅಥವಾ ಮಂಡಿಸಲು ಅವಶ್ಯಕವಾದ ಸಂಗತಿಗಳು.-** ಒಂದು ವಿವಾದಿತ ಸಂಗತಿಯನ್ನು ಅಥವಾ ಸುಸಂಬದ್ಧ ಸಂಗತಿಯನ್ನು ವಿವರಿಸಲು ಅಥವಾ ಮಂಡಿಸಲು ಅವಶ್ಯಕವಿರುವ ಅಥವಾ ಒಂದು ವಿವಾದಿತ ಸಂಗತಿಯಿಂದ ಅಥವಾ ಸುಸಂಬದ್ಧ ಸಂಗತಿಯಿಂದ ಸೂಚಿತವಾದ ಒಂದು ಊಹೆಯನ್ನು ಸಮರ್ಥಿಸುವ ಅಥವಾ ಖಂಡಿಸುವ ಅಥವಾ ಯಾವ ವಸ್ತುವಿನ ಅಥವಾ ವ್ಯಕ್ತಿಯ ಗುರುತು ಸುಸಂಬದ್ಧವಾಗಿದೆಯೋ ಅದರ ಅಥವಾ ಅವನ ಗುರುತನ್ನು ಸ್ಥಾಪಿಸುವ ಅಥವಾ ಯಾವುದೇ ವಿವಾದಿತ ಸಂಗತಿಯು ಅಥವಾ ಸುಸಂಬದ್ಧ ಸಂಗತಿಯು ನಡೆದ ಕಾಲ ಅಥವಾ ಸ್ಥಳವನ್ನು ಗೊತ್ತುಮಾಡುವ ಅಥವಾ ಯಾವುದೇ

ಅಂಥ ಸಂಗತಿಯ ಬಗ್ಗೆ ವ್ಯವಹರಿಸಿದ ಪಕ್ಷಕಾರರ ಸಂಬಂಧವನ್ನು ತೋರಿಸುವ ಸಂಗತಿಗಳು ಆ ಉದ್ದೇಶಕ್ಕೆ ಅವಶ್ಯವಿರಬಹುದಾದಷ್ಟರ ಮಟ್ಟಿಗೆ ಸುಸಂಬದ್ಧವಾಗಿರುತ್ತವೆ.

*ದೃಷ್ಟಾಂತಗಳು*

(ಎ) ಒಂದು ನಿರ್ದಿಷ್ಟ ದಸ್ತಾವೇಜು ‘ಎ’ಯ ಮರಣಶಾಸನವೇ ಎಂಬುದು ಪ್ರಶ್ನೆ. ಮೇಲೆ ಹೇಳಿದ ಮರಣಶಾಸನದ ದಿನಾಂಕದಂದು ಇದ್ದ ‘ಎ’ಯ ಸ್ವತ್ತಿನ ಮತ್ತು ಅವನ ಕುಟುಂಬದ ಪರಿಸ್ಥಿತಿಗಳು ಸುಸಂಬದ್ಧ ಸಂಗತಿಗಳಾಗಬಹುದು.

(ಬಿ) ತನಗೆ ಅಪಕೀರ್ತಿ ತರುವಂಥ ಮಾನಹಾನಿ ಬರಹ ಪ್ರಕಟಿಸಿದನೆಂದು ಆಪಾದಿಸಿ, ‘ಎ’ಯು ‘ಬಿ’ಯ ಮೇಲೆ ದಾವೆ ಹೂಡುತ್ತಾನೆ. ಮಾನಹಾನಿ ಎಂದು ಆಪಾದಿಸಲಾದ ವಿಷಯವು ಸತ್ಯವೆಂದು ‘ಬಿ’ಯು ದೃಢಪಡಿಸುತ್ತಾನೆ. ಮಾನಹಾನಿ ಬರಹವನ್ನು ಪ್ರಕಟಿಸಿದ ಕಾಲದಲ್ಲಿದ್ದ ಪಕ್ಷಕಾರರ ಸ್ಥಾನಮಾನ ಮತ್ತು ಸಂಬಂಧಗಳು, ವಿವಾದಿತ ಸಂಗತಿಗಳಿಗೆ ಪೀಠಿಕೆಯಾಗಿ ಸುಸಂಬದ್ಧವಾಗಬಹುದು. ಮೇಲೆ ಹೇಳಿದ ಮಾನಹಾನಿ ಬರಹಕ್ಕೆ ಸಂಬಂಧಿಸಿರದ ವಿಷಯವನ್ನು ಕುರಿತ ‘ಎ’ ಮತ್ತು ‘ಬಿ’ಯ ನಡುವಣ ವಿವಾದದ ವಿವರಗಳು ಸುಸಂಬದ್ಧವಲ್ಲ; ಆದಾಗ್ಯೂ ವಿವಾದವಿದ್ದಿತೆಂಬ ಸಂಗತಿಯು, ಅದು ‘ಎ’ ಮತ್ತು ‘ಬಿ’ಯ ನಡುವಣ ಸಂಬಂಧಗಳಿಗೆ ಬಾಧಕವಾಗಿದ್ದರೆ ಸುಸಂಬದ್ಧವಾಗಬಹುದು.

(ಸಿ) ‘ಎ’ಯು ಒಂದು ಅಪರಾಧಕ್ಕಾಗಿ ಆಪಾದಿತನಾಗಿದ್ದಾನೆ. ಅಪರಾಧವು ನಡೆದ ಕೂಡಲೇ ‘ಎ’ಯು ತನ್ನ ಮನೆಯಿಂದ ತಲೆಮರೆಸಿಕೊಂಡು ಹೋದನೆಂಬುದು, ವಿವಾದಿತ ಸಂಗತಿಗಳ ಅನಂತರದ ಮತ್ತು ಅವುಗಳಿಂದ ಬಾಧಿತವಾಗಿರುವ ನಡತೆಯಾಗಿ, 6ನೇ ಪ್ರಕರಣದ ಮೇರೆಗೆ ಸುಸಂಬದ್ಧ ಸಂಗತಿಯಾಗಿರುತ್ತದೆ. ಅವನು ಮನೆ ಬಿಟ್ಟ ಸಮಯದಲ್ಲಿ, ಅವನು ಹೋದ ಸ್ಥಳದಲ್ಲಿ ಅವನಿಗೆ ಹಠಾತ್ ಮತ್ತು ತುರ್ತು ವ್ಯವಹಾರವಿದ್ದಿತೆಂಬ ಸಂಗತಿಯು, ಅವನು ಹಠಾತ್ತಾಗಿ ಮನೆ ಬಿಟ್ಟನೆಂಬ ಸಂಗತಿಯನ್ನು ವಿವರಿಸುವಂತಿರುವುದರಿಂದ ಸುಸಂಬದ್ಧವಾಗಿದೆ. ಅವನಿಗೆ ಹಠಾತ್ ಮತ್ತು ತುರ್ತು ವ್ಯವಹಾರವಿದ್ದಿತೆಂಬುದನ್ನು ತೋರಿಸುವುದಕ್ಕೆ ಅವಶ್ಯಕವಾಗಿರುವಷ್ಟರಮಟ್ಟಿಗೆ ಹೊರತು, ಅವನು ಯಾವ ವ್ಯವಹಾರಕ್ಕೆ ಹೋಗಿದ್ದನೋ ಆ ವ್ಯವಹಾರದ ವಿವರಗಳು ಸುಸಂಬದ್ಧವಲ್ಲ.

(ಡಿ) ‘ಸಿ’ಯು ‘ಎ’ ಯೊಂದಿಗೆ ಮಾಡಿಕೊಂಡಿದ್ದ ಸೇವಾ ಕರಾರನ್ನು ಮುರಿಯುವಂತೆ ಪ್ರೇರೇಪಿಸಿದ್ದಕ್ಕಾಗಿ ‘ಎ’ಯು ‘ಬಿ’ಯ ವಿರುದ್ಧ ದಾವೆ ಹೂಡುತ್ತಾನೆ. ‘ಸಿ’ಯು ‘ಎ’ಯ ಸೇವೆಯನ್ನು ಬಿಡುವಾಗ, ‘ಬಿ’ಯು ನನಗೆ ಇದಕ್ಕಿಂತ ಉತ್ತಮವಾದ ಪ್ರಸ್ತಾವವನ್ನು ನೀಡಿರುವುದರಿಂದ ನಾನು ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ ಎಂದು ‘ಎ’ಗೆ ಹೇಳುತ್ತಾನೆ. ವಿವಾದಿತ ಸಂಗತಿಯಾಗಿ ಸುಸಂಬದ್ಧವಿರುವಂಥ ‘ಸಿ’ಯ ನಡತೆಯನ್ನು ವಿವರಿಸುವ ಈ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಇ) ಕಳವಿನ ಆಪಾದನೆಗೆ ಗುರಿಯಾದ ‘ಎ’ಯು ಕಳವು ಮಾಲನ್ನು ‘ಬಿ’ಗೆ ಕೊಡುತ್ತಿರುವುದನ್ನು ನೋಡಲಾಗಿದೆ; ‘ಬಿ’ಯು ಅದನ್ನು ‘ಎ’ನ ಹೆಂಡತಿಗೆ ಕೊಡುತ್ತಿರುವುದನ್ನು ನೋಡಲಾಗಿದೆ; ಅದನ್ನು ಕೊಡುತ್ತಿರುವಾಗ, “ಇದನ್ನು ನೀನು ಬಚ್ಚಿಡಬೇಕೆಂದು ‘ಎ’ಯು ಹೇಳಿದ್ದಾನೆ” ಎಂದು ‘ಬಿ’ಯು ಹೇಳುತ್ತಾನೆ. ‘ಬಿ’ಯ ಹೇಳಿಕೆಯು ಈ ವ್ಯವಹಾರದ ಭಾಗವಾಗಿರುವಂಥ ಸಂಗತಿಯ ವಿವರಣೆಯಾಗಿರುವುದರಿಂದ ಸುಸಂಬದ್ಧವಾಗಿರುತ್ತದೆ.

(ಎಫ್) ‘ಎ’ಯು ದೊಂಬಿ ಮಾಡಿದ ಬಗ್ಗೆ ಅಧಿವಿಚಾರಣೆಗೆ ಗುರಿಯಾಗಿದ್ದಾನೆ ಮತ್ತು ಅವನು ಗುಂಪಿನ ಮುಂಚೂಣಿಯಲ್ಲಿದ್ದನೆಂಬುದು ರುಜುವಾತಾಗಿದೆ. ಗುಂಪಿನ ಕೂಗಾಟಗಳು ಈ ವ್ಯವಹಾರದ ಸ್ವರೂಪವನ್ನು ವಿವರಿಸುವುದರಿಂದ ಸುಸಂಬದ್ಧವಾಗಿರುತ್ತವೆ.

**8. ಏಕೋದ್ದೇಶವುಳ್ಳ ಸಂಚಿನ ಸಂಬಂಧದಲ್ಲಿ ಒಳಸಂಚುಕಾರನು ಹೇಳಿದ ವಿಷಯಗಳು ಅಥವಾ ಮಾಡಿದ ಕೃತ್ಯಗಳು.-** ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಒಂದು ಅಪರಾಧವನ್ನು ಅಥವಾ ಕ್ರಮಾರ್ಹವಾದ ಒಂದು ತಪ್ಪನ್ನು ಮಾಡಲು ಒಟ್ಟಿಗೆ ಒಳಸಂಚು ಮಾಡಿದ್ದಾರೆಂದು ನಂಬಲು ಯುಕ್ತ ಕಾರಣವಿರುವಲ್ಲಿ, ಅವರ ಏಕೋದ್ದೇಶವನ್ನು ಅವರಲ್ಲಿ ಯಾರಾದರೊಬ್ಬನು ಮೊದಲು ಭಾವಿಸಿದ

ಸಮಯದ ಅನಂತರ, ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಗಳಲ್ಲೊಬ್ಬನು ಹೇಳಿದ, ಮಾಡಿದ ಅಥವಾ ಬರೆದ ಯಾವುದೇ ವಿಷಯವು ಅಥವಾ ಕೃತ್ಯವು, ಹಾಗೆ ಒಳಸಂಚು ಮಾಡಿದ್ದಾರೆಂದು ನಂಬಲಾದ ವ್ಯಕ್ತಿಗಳಲ್ಲಿ ಪ್ರತಿಯೊಬ್ಬನ ವಿರುದ್ಧವಾಗಿ ಮತ್ತು ಒಳಸಂಚಿನ ಅಸ್ತಿತ್ವವನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಮತ್ತು ಅಂಥ ಯಾರೇ ವ್ಯಕ್ತಿಯು ಅದರಲ್ಲಿ ಭಾಗವಹಿಸಿದ್ದನೆಂದು ತೋರಿಸುವ ಉದ್ದೇಶಕ್ಕಾಗಿಯೂ ಸುಸಂಬದ್ಧ ಸಂಗತಿಯಾಗಿರುತ್ತದೆ.

*ದೃಷ್ಟಾಂತ*

'ಎ'ಯು ರಾಷ್ಟ್ರದ ವಿರುದ್ಧ ಯುದ್ಧ ಹೂಡುವ ಒಳಸಂಚಿನಲ್ಲಿ ಸೇರಿದ್ದಾನೆಂದು ನಂಬಲು ಸೂಕ್ತ ಆಧಾರವಿದೆ.

'ಬಿ'ಯು ಆ ಒಳಸಂಚಿನ ಉದ್ದೇಶಕ್ಕಾಗಿ ಯುರೋಪಿನಲ್ಲಿ ಶಸ್ತ್ರಾಸ್ತ್ರಗಳನ್ನು ದೊರಕಿಸಿಕೊಂಡನು, 'ಸಿ'ಯು ಅಂಥದೇ ಉದ್ದೇಶಕ್ಕಾಗಿ ಕೋಲ್ಕತ್ತಾದಲ್ಲಿ ಹಣ ಸಂಗ್ರಹಿಸಿದನು, 'ಡಿ'ಯು ಆ ಒಳಸಂಚಿನಲ್ಲಿ ಸೇರುವಂತೆ ಮುಂಬಯಿಯಲ್ಲಿ ಜನಗಳನ್ನು ಪ್ರೇರೇಪಿಸಿದನು, 'ಇ'ಯು ಆ ಉದ್ದೇಶವನ್ನು ಪ್ರತಿಪಾದಿಸುವ ಲೇಖನಗಳನ್ನು ಆಗ್ರಾದಲ್ಲಿ ಪ್ರಕಟಿಸಿದನು ಮತ್ತು 'ಎಫ್'ನು 'ಸಿ'ಯು ಕೋಲ್ಕತ್ತಾದಲ್ಲಿ ಸಂಗ್ರಹಿಸಿದ ಹಣವನ್ನು ದೆಹಲಿಯಿಂದ ಸಿಂಗಾಪುರದಲ್ಲಿರುವ 'ಜಿ' ನಿಗೆ ಕಳುಹಿಸಿದನು ಮತ್ತು 'ಹೆಚ್'ನು ಬರೆದ ಆ ಒಳಸಂಚಿನ ಪತ್ರದಲ್ಲಿನ ಅಂಶಗಳು- ಇವು ಪ್ರತಿಯೊಂದು, ಒಳಸಂಚು ಇರುವುದೆಂಬುದನ್ನು ರುಜುವಾತುಪಡಿಸಲು ಮತ್ತು ನಡೆದುದೆಲ್ಲವೂ 'ಎ'ಗೆ ಗೊತ್ತಿರದಿದ್ದರೂ ಕೂಡ ಮತ್ತು ಅವುಗಳನ್ನು ಮಾಡಿದ ವ್ಯಕ್ತಿಗಳು ಅವನಿಗೆ ಅಪರಿಚಿತರಾದರೂ ಕೂಡ ಮತ್ತು ಅವೆಲ್ಲವೂ ಅವನು ಒಳಸಂಚಿನಲ್ಲಿ ಸೇರುವುದಕ್ಕಿಂತ ಮುಂಚೆ ಅಥವಾ ಅದನ್ನು ಅವನು ಬಿಟ್ಟ ಅನಂತರ ನಡೆದಿದ್ದರೂ ಕೂಡ ಅವನು ಅದರಲ್ಲಿ ಭಾಗಿಯಾಗಿದ್ದಾನೆಂಬುದನ್ನು ರುಜುವಾತುಪಡಿಸಲು ಸುಸಂಬದ್ಧವಾದ ಸಂಗತಿಗಳಾಗಿರುತ್ತವೆ.

**9. ಅನ್ಯಥಾ ಸುಸಂಬದ್ಧವಾಗಿರದ ಸಂಗತಿಗಳು ಸುಸಂಬದ್ಧವಾಗುವುದು.-** ಅನ್ಯಥಾ ಸುಸಂಬದ್ಧವಾಗಿರದ ಸಂಗತಿಗಳು,-

(1) ಯಾವುದೇ ವಿವಾದಿತ ಸಂಗತಿಗೆ ಅಥವಾ ಸುಸಂಬದ್ಧ ಸಂಗತಿಗೆ ಅಸಂಗತವಾಗಿದ್ದರೆ;

(2) ಸ್ವತಃ ಅಥವಾ ಇತರ ಸಂಗತಿಗಳ ಸಂಬಂಧದಿಂದ ಯಾವುದೇ ವಿವಾದಿತ ಸಂಗತಿಯ ಅಥವಾ ಸುಸಂಬದ್ಧ ಸಂಗತಿಯು ಇರುವುದನ್ನು ಅಥವಾ ಇಲ್ಲದಿರುವುದನ್ನು ಅತ್ಯಂತ ಸಂಭವನೀಯ ಅಥವಾ ಅಸಂಭವನೀಯಗೊಳಿಸುವಂತಿದ್ದರೆ

- ಸುಸಂಬದ್ಧವಾಗಿರುತ್ತವೆ.

*ದೃಷ್ಟಾಂತಗಳು*

(ಎ) 'ಎ'ಯು ಒಂದು ನಿರ್ದಿಷ್ಟ ದಿನದಂದು ಚೆನ್ನೈನಲ್ಲಿ ಒಂದು ಅಪರಾಧವನ್ನು ಮಾಡಿದ್ದಾನೆಯೇ ಎಂಬುದು ಪ್ರಶ್ನೆ. ಆ ದಿನ 'ಎ'ಯು ಲಡಾಖ್‌ನಲ್ಲಿದ್ದನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ. ಅಪರಾಧವು ನಡೆದ ನಿಕಟ ಸಮಯದಲ್ಲಿ, ಅದು ನಡೆದ ಸ್ಥಳದಿಂದ 'ಎ'ಯು ದೂರದಲ್ಲಿದ್ದನೆಂಬ ಸಂಗತಿಯು, ಅವನು ಅದನ್ನು ಮಾಡಿದ್ದಾನೆಂಬುದು ಅಸಾಧ್ಯವಲ್ಲದಿದ್ದರೂ ತುಂಬಾ ಅಸಂಭವನೀಯವಾಗಿರುವಷ್ಟರಮಟ್ಟಿಗೆ ಸುಸಂಬದ್ಧವಾಗಿರುತ್ತದೆ.

(ಬಿ) 'ಎ'ಯು ಅಪರಾಧ ಮಾಡಿದ್ದಾನೆಯೇ ಎಂಬುದು ಪ್ರಶ್ನೆ. ಸಂದರ್ಭಗಳನ್ನು ಗಮನಿಸಿದರೆ ಎ, ಬಿ, ಸಿ ಅಥವಾ ಡಿ - ಇವರಲ್ಲಿ ಯಾರಾದರೂ ಅಪರಾಧವನ್ನು ಮಾಡಿರಬಹುದಾಗಿದೆ. ಆ ಅಪರಾಧವು ಬೇರೆ ಯಾರಿಂದಲೂ ನಡೆದಿರುವುದು ಸಾಧ್ಯವಿಲ್ಲವೆಂಬುದನ್ನು ಮತ್ತು ಅದನ್ನು 'ಬಿ', 'ಸಿ' ಅಥವಾ 'ಡಿ'ಯು ಮಾಡಿಲ್ಲವೆಂಬುದನ್ನು ತೋರಿಸುವ ಪ್ರತಿಯೊಂದು ಸಂಗತಿಯು ಸುಸಂಬದ್ಧವಾಗಿರುತ್ತದೆ.

**10. ನಷ್ಟಭರ್ತಿಯ ದಾವೆಗಳಲ್ಲಿ ಮೊಬಲಗನ್ನು ನಿರ್ಧರಿಸಲು ನ್ಯಾಯಾಲಯಕ್ಕೆ ಅನುವು ಮಾಡಿಕೊಡುವ ಸಂಗತಿಗಳು ಸುಸಂಬದ್ಧವಾಗಿರುವುದು.-** ನಷ್ಟಭರ್ತಿಯನ್ನು ಕ್ಲೇಮು ಮಾಡಿರುವ ದಾವೆಗಳಲ್ಲಿ ಕೊಡಬೇಕಾಗಿ ಬರುವ ನಷ್ಟಭರ್ತಿಯ ಮೊಬಲಗನ್ನು ನಿರ್ಧರಿಸಲು ನ್ಯಾಯಾಲಯಕ್ಕೆ ಅನುವು ಮಾಡಿಕೊಡುವ ಯಾವುದೇ ಸಂಗತಿಯು ಸುಸಂಬದ್ಧವಾಗಿರುತ್ತದೆ.

**11. ಹಕ್ಕು ಅಥವಾ ರೂಢಿಯು ಪ್ರಶ್ನಿತವಾಗಿರುವಲ್ಲಿ ಸುಸಂಬದ್ಧವಾಗುವ ಸಂಗತಿಗಳು.-** ಒಂದು ಹಕ್ಕು ಅಥವಾ ರೂಢಿಯು ಅಸ್ತಿತ್ವದಲ್ಲಿದೆಯೇ ಎಂಬುದಾಗಿ ಪ್ರಶ್ನೆ ಉದ್ಭವಿಸಿರುವಲ್ಲಿ ಕೆಳಕಂಡ ಸಂಗತಿಗಳು ಸುಸಂಬದ್ಧವಾಗಿರುತ್ತವೆ,-

(ಎ) ಪ್ರಶ್ನಿತವಾಗಿರುವ ಹಕ್ಕನ್ನು ಅಥವಾ ರೂಢಿಯನ್ನು ಸೃಷ್ಟಿಸಿದ, ಕ್ಲೇಮು ಮಾಡಿದ, ಮಾರ್ಪಡಿಸಿದ, ಮಾನ್ಯ ಮಾಡಿದ, ಪ್ರತಿಪಾದಿಸಿದ ಅಥವಾ ನಿರಾಕರಿಸಿದ ಅಥವಾ ಅದರ ಅಸ್ತಿತ್ವಕ್ಕೆ ಅಸಂಗತವಾಗಿದ್ದ ಯಾವುದೇ ವ್ಯವಹಾರ;

(ಬಿ) ಆ ಹಕ್ಕನ್ನು ಅಥವಾ ರೂಢಿಯನ್ನು ಕ್ಲೇಮು ಮಾಡಿದ, ಮಾನ್ಯ ಮಾಡಿದ ಅಥವಾ ಚಲಾಯಿಸಿದ ಅಥವಾ ಅದರ ಚಲಾವಣೆಯನ್ನು ವಿವಾದಿಸಿದ, ಪ್ರತಿಪಾದಿಸಿದ ಅಥವಾ ಅನುಸರಿಸದಿರುವ ನಿರ್ದಿಷ್ಟ ಉದಾಹರಣೆಗಳು.

*ದೃಷ್ಟಾಂತ*

ಟಿ/ಯು ಒಂದು ಮತ್ಸ್ಯ ಕೇಂದ್ರದ ಮೇಲೆ ಹಕ್ಕನ್ನು ಹೊಂದಿದ್ದಾನೆಯೇ ಎಂಬುದು ಪ್ರಶ್ನೆ. ಆ ಮತ್ಸ್ಯ ಕೇಂದ್ರದ ಮೇಲೆ ಟಿ/ಯ ಪೂರ್ವಜರಿಗೆ ಹಕ್ಕು ಕೊಡುವ ಒಂದು ಲಿಖಿತವು ಟಿ/ಯ ತಂದೆಯು ಆ ಮತ್ಸ್ಯ ಕೇಂದ್ರವನ್ನು ಅಡಮಾನ ಮಾಡಿರುವುದು, ಟಿ/ಯ ತಂದೆಯು ಅದನ್ನು ತರುವಾಯ ಆ ಅಡಮಾನಕ್ಕೆ ಸರಿಹೊಂದದ ರೀತಿಯಲ್ಲಿ ಕೊಟ್ಟಿರುವುದು ಟಿ/ಯ ತಂದೆಯು ಆ ಹಕ್ಕನ್ನು ಚಲಾಯಿಸಿದ ಅಥವಾ ಟಿ/ಯ ಅಕ್ಕಪಕ್ಕದವರು ಆ ಹಕ್ಕಿನ ಚಲಾವಣೆಯನ್ನು ನಿಲ್ಲಿಸಿದ ನಿರ್ದಿಷ್ಟ ಉದಾಹರಣೆಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

**12. ಮನಸ್ಸಿನ ಅಥವಾ ದೇಹದ ಅಥವಾ ದೈಹಿಕ ಸಂವೇದನೆಯ ಸ್ಥಿತಿಯ ಅಸ್ತಿತ್ವವನ್ನು ತೋರಿಸುವ ಸಂಗತಿಗಳು.-** ಆಶಯ, ಜ್ಞಾನ, ಸದುದ್ದೇಶ, ನಿರ್ಲಕ್ಷ್ಯತೆ, ದುಡುಕು, ಯಾರೋ ನಿರ್ದಿಷ್ಟ ವ್ಯಕ್ತಿಯ ಬಗ್ಗೆ ದುರ್ಭಾವನೆ ಅಥವಾ ಸದ್ಭಾವನೆಯಂಥ ಯಾವುದೇ ಮಾನಸಿಕ ಸ್ಥಿತಿಯ ಅಸ್ತಿತ್ವವನ್ನು ತೋರಿಸುವ ಅಥವಾ ಯಾವುದೇ ದೈಹಿಕ ಅಥವಾ ದೈಹಿಕ ಸಂವೇದನಾ ಸ್ಥಿತಿಯ ಅಸ್ತಿತ್ವವನ್ನು ತೋರಿಸುವ ಸಂಗತಿಗಳು, ಅಂಥ ಯಾವುದೇ ಮಾನಸಿಕ ಅಥವಾ ದೈಹಿಕ ಅಥವಾ ದೈಹಿಕ ಸಂವೇದನೆಯ ಸ್ಥಿತಿಯ ಅಸ್ತಿತ್ವವು ವಿವಾದಿತವಾಗಿರುವಾಗ ಅಥವಾ ಸುಸಂಬದ್ಧವಾಗಿರುವಾಗ, ಅವು ಸುಸಂಬದ್ಧವಾಗಿರುತ್ತವೆ.

*ವಿವರಣೆ 1.-* ಸುಸಂಬದ್ಧ ಮಾನಸಿಕ ಸ್ಥಿತಿಯ ಅಸ್ತಿತ್ವವನ್ನು ತೋರಿಸುವ ಸುಸಂಬದ್ಧ ಸಂಗತಿಯು, ಸಾಮಾನ್ಯ ಮಾನಸಿಕ ಸ್ಥಿತಿಯಲ್ಲದ ವಿವಾದಿತವಾಗಿರುವ ಸಂಗತಿಯು ಪ್ರಶ್ನಿತ ನಿರ್ದಿಷ್ಟ ವಿಷಯದ ಸಂಬಂಧದಲ್ಲಿ ಅಸ್ತಿತ್ವದಲ್ಲಿದೆಯೆಂಬುದನ್ನು ತೋರಿಸಬೇಕು.

*ವಿವರಣೆ 2.-* ಆದರೆ, ಒಂದು ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯ ಅಧಿವಿಚಾರಣೆಯಲ್ಲಿ, ಆಪಾದಿತನು ಅದಕ್ಕಿಂತ ಹಿಂದೆ ಅಪರಾಧ ಮಾಡಿದುದು ಈ ಪ್ರಕರಣದ ಅರ್ಥದಲ್ಲಿ ಸುಸಂಬದ್ಧವಾಗಿರುವಲ್ಲಿ, ಅಂಥ ವ್ಯಕ್ತಿಯು ಹಿಂದೆ ಅಪರಾಧಿಯೆಂದು ನಿರ್ಣೀತನಾಗಿರುವುದು ಕೂಡ ಸುಸಂಬದ್ಧ ಸಂಗತಿಯಾಗಿರತಕ್ಕದ್ದು.

*ದೃಷ್ಟಾಂತಗಳು*

(ಎ) ಕಳವಿನ ಮಾಲನ್ನು, ಅದು ಕಳವಿನ ಮಾಲೆಂದು ಗೊತ್ತಿದ್ದೂ, ಪಡೆದಿರುವುದಕ್ಕಾಗಿ ಟಿ/ಯು ಆಪಾದಿತನಾಗಿದ್ದಾನೆ. ಅವನು ಒಂದು ನಿರ್ದಿಷ್ಟ ಕಳವಿನ ವಸ್ತುವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನೆಂಬುದು ರುಜುವಾತಾಗಿದೆ. ಅದೇ ಸಮಯದಲ್ಲಿ ಅವನು ಕಳವಿನ ಇನ್ನೂ ಅನೇಕ ವಸ್ತುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನೆಂಬ ಸಂಗತಿಯು, ಅವನು ಸ್ವಾಧೀನದಲ್ಲಿಟ್ಟುಕೊಂಡಿದ್ದ ಪ್ರತಿಯೊಂದು ಮತ್ತು ಎಲ್ಲ ವಸ್ತುಗಳೂ ಕಳವಿನ ಮಾಲುಗಳೆಂದು ತಿಳಿದಿದ್ದನೆಂಬುದನ್ನು ತೋರಿಸಲು ಸಹಾಯಕವಾಗುವುದರಿಂದ ಸುಸಂಬದ್ಧವಾಗಿರುತ್ತದೆ.

(ಬಿ) ಟಿ/ಯು, ಒಂದು ಖೋಟಾ ಕರೆನ್ಸಿಯನ್ನು, ತಾನು ಅದನ್ನು ಕೊಡುತ್ತಿರುವಾಗ ಅದು ಖೋಟಾ ಕರೆನ್ಸಿಯಾಗಿದೆಯೆಂಬುದನ್ನು ತಿಳಿದಿದ್ದೂ, ಮತ್ತೊಬ್ಬ ವ್ಯಕ್ತಿಗೆ ಮೋಸದಿಂದ ಕೊಟ್ಟಿರುವುದಕ್ಕಾಗಿ ಆಪಾದಿತನಾಗಿದ್ದಾನೆ. ಅದನ್ನು ಹಾಗೆ ಕೊಡುವಾಗ ಟಿ/ಯು ಇನ್ನೂ ಅನೇಕ ಇತರ ಖೋಟಾ ಕರೆನ್ಸಿಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನೆಂಬ ಸಂಗತಿಯು

ಸುಸಂಬದ್ಧವಾಗಿರುತ್ತದೆ. ಒಂದು ಖೋಟಾ ಕರೆನ್ಸಿಯನ್ನು ಅದು ಖೋಟಾ ಕರೆನ್ಸಿಯೆಂದು ತಿಳಿದಿದ್ದೂ ನಿಜವಾದುದೆಂದು, ಬೇರೊಬ್ಬ ವ್ಯಕ್ತಿಗೆ ಕೊಟ್ಟಿದ್ದಕ್ಕಾಗಿ ಈ ಹಿಂದೆ 'ಎ'ಯು ಅಪರಾಧಿಯೆಂದು ನಿರ್ಣೀತನಾಗಿದ್ದನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

(ಸಿ) 'ಬಿ'ಗೆ ತನ್ನ ನಾಯಿಯು ಕ್ರೂರವಾದುದೆಂದು ಗೊತ್ತಿತ್ತು. ಆ ನಾಯಿಯಿಂದುಂಟಾದ ನಷ್ಟಭರ್ತಿಗಾಗಿ 'ಎ'ಯು 'ಬಿ'ಯ ಮೇಲೆ ದಾವೆ ಹೂಡುತ್ತಾನೆ. ಅದಕ್ಕೂ ಮೊದಲು ಆ ನಾಯಿಯು 'ಎಕ್ಸ್', 'ವೈ' ಮತ್ತು 'ಝಡ್' ರನ್ನು ಕಚ್ಚಿತ್ತೆಂಬ ಮತ್ತು ಅವರು 'ಬಿ'ಗೆ ದೂರು ನೀಡಿದ್ದರೆಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

(ಡಿ) ಒಂದು ವಿನಿಮಯ ಪತ್ರವನ್ನು ಸ್ವೀಕರಿಸಿದ 'ಎ'ಯು ಅದರ ಹಣ ಪಡೆಯುವವನ ಹೆಸರು ಕಾಲ್ಪನಿಕವಾದುದೆಂದು ತಿಳಿದಿದ್ದನೇ ಎಂಬುದು ಪ್ರಶ್ನೆ. ಹಣ ಪಡೆಯುವವನು ನಿಜವಾದ ವ್ಯಕ್ತಿಯಾಗಿದ್ದರೆ ಅವನು ಅವನಿಗೆ ಕಳುಹಿಸಬಹುದಾಗಿದ್ದುದಕ್ಕಿಂತ ಮುಂಚೆಯೇ ಅದೇ ರೀತಿಯಲ್ಲಿ ಬರೆದ ಇತರ ವಿನಿಮಯ ಪತ್ರಗಳನ್ನು 'ಎ'ಯು ಸ್ವೀಕರಿಸಿದ್ದನೆಂಬ ಸಂಗತಿಯು, ಹಣ ಪಡೆಯುವವನು ಕಾಲ್ಪನಿಕ ವ್ಯಕ್ತಿಯೆಂದು 'ಎ'ಯು ತಿಳಿದಿದ್ದನೆಂಬುದನ್ನು ತೋರಿಸುವುದು ಸುಸಂಬದ್ಧವಾಗಿರುತ್ತದೆ.

(ಇ) 'ಬಿ'ಯ ಖ್ಯಾತಿಗೆ ಚ್ಯುತಿಯುಂಟುಮಾಡುವ ಉದ್ದೇಶವುಳ್ಳ ದೋಷಾರೋಪಣೆಯನ್ನು ಪ್ರಕಟಿಸಿ 'ಬಿ' ಯನ್ನು ಅಪಮಾನಗೊಳಿಸಿದ್ದಕ್ಕಾಗಿ 'ಎ'ಯು ಆಪಾದಿತನಾಗಿದ್ದಾನೆ. 'ಬಿ'ಯ ಬಗ್ಗೆ 'ಎ'ಗೆ ದ್ವೇಷವಿದೆಯೆಂದು ತೋರಿಸುವ, 'ಬಿ'ಯ ಸಂಬಂಧವಾಗಿ 'ಎ'ಯು ಹಿಂದೆ ಪ್ರಕಟಣೆ ಮಾಡಿದ್ದನೆಂಬ ಸಂಗತಿಯು, ಪ್ರಶ್ನಿತ ನಿರ್ದಿಷ್ಟ ಪ್ರಕಟಣೆಯ ಮೂಲಕ 'ಬಿ'ಯ ಖ್ಯಾತಿಗೆ 'ಎ'ಯು ಚ್ಯುತಿ ತರಲು ಉದ್ದೇಶಿಸಿದ್ದಾನೆಂಬುದನ್ನು ರುಜವಾತುಪಡಿಸುವುದು ಸುಸಂಬದ್ಧವಾಗಿರುತ್ತದೆ. 'ಎ' ಮತ್ತು 'ಬಿ'ಯ ನಡುವೆ ಹಿಂದೆ ಯಾವುದೇ ಜಗಳವಿರಲಿಲ್ಲವೆಂಬ ಮತ್ತು 'ಎ'ಯು ದೂರಿನಲ್ಲಿ ಸಲ್ಲಿಸಲಾದ ವಿಷಯವನ್ನು ತಾನು ಕೇಳಿದ್ದಂತೆಯೇ ಪುನರಾವರ್ತಿಸಿದನೆಂಬ ಸಂಗತಿಗಳು, 'ಎ'ಯು 'ಬಿ'ಯ ಖ್ಯಾತಿಗೆ ಚ್ಯುತಿ ತರುವ ಉದ್ದೇಶ ಹೊಂದಿರಲಿಲ್ಲವೆಂಬುದನ್ನು ತೋರಿಸುವುದರಿಂದ ಸುಸಂಬದ್ಧವಾಗಿರುತ್ತವೆ.

(ಎಫ್) 'ಸಿ'ಯು ಸಾಲ ತೀರಿಸಬಲ್ಲ ವ್ಯಕ್ತಿಯಾಗಿದ್ದಾನೆಂದು 'ಬಿ'ಗೆ 'ಎ'ಯು ಮೋಸದಿಂದ ಹೇಳಿದ್ದಕ್ಕಾಗಿ, ಆ ಮೂಲಕ 'ಬಿ'ಯು ದಿವಾಳಿಯಾಗಿರುವ 'ಸಿ'ಯನ್ನು ನಂಬಲು ಪ್ರೇರೇಪಿಸಿದ್ದು ಅದರಿಂದ ನಷ್ಟಕ್ಕೀಡಾದುದರಿಂದ 'ಬಿ'ಯು 'ಎ'ಯ ಮೇಲೆ ದಾವೆ ಹೂಡುತ್ತಾನೆ. 'ಸಿ'ಯು ಸಾಲ ತೀರಿಸಬಲ್ಲವನಾಗಿದ್ದಾನೆಂದು 'ಎ'ಯು ಹೇಳಿದಾಗ, 'ಸಿ'ಯು ಅವನ ನೆರೆಹೊರೆಯವರ ಮತ್ತು ಅವನೊಂದಿಗೆ ವ್ಯವಹರಿಸುವವರ ಪ್ರಕಾರ ಸಾಲ ತೀರಿಸಬಲ್ಲವನಾಗಿದ್ದನೆಂಬ ಸಂಗತಿಯು, 'ಎ'ಯು ಸದ್ಭಾವನೆಯಿಂದ ಹೇಳಿದ್ದಾನೆಂದು ತೋರಿಸುವುದರಿಂದಾಗಿ, ಸುಸಂಬದ್ಧವಾಗಿರುತ್ತದೆ.

(ಜಿ) 'ಎ'ಯು ಒಡೆಯನಾಗಿರುವ ಮನೆಯ ಸಂಬಂಧದಲ್ಲಿ ಗುತ್ತಿಗೆದಾರನಾದ 'ಸಿ'ಯ ಆದೇಶದ ಮೇರೆಗೆ 'ಬಿ'ಯು ಮಾಡಿದ ಕೆಲಸದ ಬೆಲೆಗಾಗಿ 'ಬಿ'ಯು 'ಎ'ಯ ಮೇಲೆ ದಾವೆ ಹೂಡಿದ್ದಾನೆ. 'ಬಿ'ಯ ಕರಾರು, 'ಸಿ'ಯೊಂದಿಗೆ ಇತ್ತು ಎಂಬುದು 'ಎ' ಯ ಪ್ರತಿವಾದ. ಪ್ರಶ್ನಿತ ಕೆಲಸದ ಮೇಲ್ವಿಚಾರಣೆಯನ್ನು 'ಎ'ಯು ಸದ್ಭಾವನೆಯಿಂದ 'ಸಿ'ಗೆ ಒಪ್ಪಿಸಿದ್ದು, ಅದರಿಂದ 'ಸಿ'ಯು 'ಎ'ಯ ಏಜೆಂಟ್‌ನಂತಲ್ಲದೆ ತನ್ನ ಸ್ವಂತ ಜವಾಬ್ದಾರಿಯಿಂದಲೇ 'ಬಿ' ಯೊಂದಿಗೆ ಕರಾರು ಮಾಡಿಕೊಳ್ಳಲು ಸಾಧ್ಯವಾಯಿತೆಂಬುದನ್ನು ರುಜುವಾತು ಮಾಡುವುದರಿಂದಾಗಿ 'ಎ'ಯು ಪ್ರಶ್ನಿತವಾದ ಕೆಲಸದ ಬಗ್ಗೆ 'ಸಿ'ಗೆ ಹಣ ಸಂದಾಯ ಮಾಡಿದ್ದಾನೆಂಬ ಸಂಗತಿಯು ಸುಸಂಬದ್ಧವಾಗಿರುತ್ತವೆ.

(ಹೆಚ್) 'ಎ'ಯು ತನಗೆ ದೊರೆತ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರ್ವಿನಿಯೋಗ ಮಾಡಿದ್ದಾನೆಂದು ಆಪಾದಿತನಾಗಿದ್ದಾನೆ ಮತ್ತು ಅವನು ಅದನ್ನು ವಿನಿಯೋಗಿಸಿದಾಗ ಅದರ ನಿಜವಾದ ಒಡೆಯನು ಸಿಗುವುದು ಸಾಧ್ಯವಿಲ್ಲವೆಂದು ಸದ್ಭಾವನೆಯಿಂದ ನಂಬಿದ್ದನೇ ಎಂಬುದು ಪ್ರಶ್ನೆ. 'ಎ' ಇದ್ದ ಸ್ಥಳದಲ್ಲಿ ಸ್ವತ್ತಿನ ನಷ್ಟದ ಬಗ್ಗೆ ಸಾರ್ವಜನಿಕ ನೋಟೀಸು ಕೊಡಲಾಗಿತ್ತೆಂಬ ಸಂಗತಿಯು, ಸ್ವತ್ತಿನ ನಿಜವಾದ ಒಡೆಯನು ಸಿಗುವುದು ಸಾಧ್ಯವಿಲ್ಲ ಎಂಬುದನ್ನು 'ಎ'ಯು ಸದ್ಭಾವನಾಪೂರ್ವಕವಾಗಿ ನಂಬಿರಲಿಲ್ಲ ಎಂಬುದನ್ನು ತೋರಿಸುವುದು ಸುಸಂಬದ್ಧವಾಗಿರುತ್ತದೆ. ಆ ಸ್ವತ್ತಿನ ನಷ್ಟದ ಬಗ್ಗೆ ಕೇಳಿದ್ದ 'ಸಿ'ಯು ಮೋಸದಿಂದ ನೋಟೀಸು ಕೊಟ್ಟಿದ್ದನೆಂದು ಮತ್ತು ಅದರ ಬಗ್ಗೆ ಅವನು ಸುಳ್ಳು ಕ್ಲೇಮನ್ನು ಮಾಡಬಯಸಿದ್ದನೆಂದು 'ಎ'ಗೆ ಗೊತ್ತಿದ್ದಿತೆಂಬ ಅಥವಾ ನಂಬಲು ಕಾರಣವಿದ್ದಿತೆಂಬ ಸಂಗತಿಯು, 'ಎ'ಗೆ ನೋಟೀಸಿನ ವಿಷಯ ತಿಳಿದಿದ್ದರೂ 'ಎ'ಯ ಸದ್ಭಾವನೆಯು ಅದರಿಂದ ರುಜುವಾತಾಗಲಿಲ್ಲವೆಂಬ ಸಂಗತಿಯನ್ನು ತೋರಿಸುವುದರಿಂದಾಗಿ ಸುಸಂಬದ್ಧವಾಗಿರುತ್ತದೆ.

(ಐ) ಎ/ಯು ಬಿ/ಯನ್ನು ಕೊಲ್ಲುವ ಉದ್ದೇಶದಿಂದ ಅವನ ಮೇಲೆ ಗುಂಡು ಹಾರಿಸಿದನೆಂದು ಆಪಾದಿತನಾಗಿದ್ದಾನೆ. ಎ/ಯ ಉದ್ದೇಶವನ್ನು ತೋರಿಸಲು ಆತನು ಈ ಹಿಂದೆ ಬಿ/ಯ ಮೇಲೆ ಗುಂಡು ಹಾರಿಸಿದ್ದನೆಂಬ ಸಂಗತಿಯನ್ನು ರುಜುವಾತುಪಡಿಸಬಹುದು.

(ಜೆ) ಎ/ಯು ಬಿ/ಗೆ ಬೆದರಿಕೆ ಪತ್ರಗಳನ್ನು ಕಳುಹಿಸುತ್ತಿದ್ದನೆಂದು ಆಪಾದಿತನಾಗಿದ್ದಾನೆ. ಎ/ಯು ಬಿ/ಗೆ ಹಿಂದೆ ಅಂಥ ಬೆದರಿಕೆ ಪತ್ರಗಳನ್ನು ಕಳುಹಿಸಿದ್ದನೆಂಬುದನ್ನು ಆತನ ಪತ್ರಗಳ ಉದ್ದೇಶವನ್ನು ತೋರಿಸುವುದರಿಂದ ರುಜವಾತುಪಡಿಸಬಹುದು.

(ಕೆ) ಎ/ಯು ತನ್ನ ಹೆಂಡತಿಯಾದ ಬಿ/ಯಳ ಬಗ್ಗೆ ಕ್ರೌರ್ಯದಿಂದ ವರ್ತಿಸಿದ್ದಕ್ಕಾಗಿ ತಪ್ಪಿತಸ್ಥನಾಗಿದ್ದಾನೆಯೇ ಎಂಬುದು ಪ್ರಶ್ನೆ. ಮೇಲೆ ಹೇಳಲಾದ ಕ್ರೌರ್ಯಕ್ಕೆ ಸ್ವಲ್ಪ ಮುಂಚೆ ಅಥವಾ ತರುವಾಯ ಪರಸ್ಪರರ ಬಗ್ಗೆ ಇದ್ದ ಅವರ ಭಾವನೆಯ ಅಭಿವ್ಯಕ್ತಿಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಎಲ್) ಎ/ಯ ಮರಣವು ವಿಷಪ್ರಾಶನದಿಂದ ಉಂಟಾಗಿದೆಯೇ ಎಂಬುದು ಪ್ರಶ್ನೆ. ಎ/ಯು ಅಸ್ವಸ್ಥನಾಗಿರುವಾಗ ಅವನಲ್ಲಿ ಕಂಡುಬಂದ ಲಕ್ಷಣಗಳ ಬಗ್ಗೆ ಅವನು ನೀಡಿದ ಹೇಳಿಕೆಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಎಂ) ಎ/ಯು ತನ್ನ ಜೀವವಿಮೆ ಮಾಡಿದಾಗ ಆತನ ದೇಹಸ್ಥಿತಿಯು ಹೇಗಿತ್ತೆಂಬುದು ಪ್ರಶ್ನೆ. ಪ್ರಶ್ನಿತ ಸಮಯದಲ್ಲಿ ಅಥವಾ ಆ ಸುಮಾರಿಗೆ ತನ್ನ ದೇಹಸ್ಥಿತಿಯ ಬಗ್ಗೆ ಎ/ಯು ನೀಡಿದ ಹೇಳಿಕೆಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

(ಎನ್) ಉಪಯೋಗಕ್ಕೆ ಸೂಕ್ತವಾಗಿ ಅರ್ಹವಾಗಿರದ ವಾಹನವನ್ನು ತನಗೆ ಬಾಡಿಗೆಗೆ ಒದಗಿಸಿದ ನಿರ್ಲಕ್ಷ್ಯತೆಯಿಂದಾಗಿ ತನಗೆ ಗಾಯವುಂಟಾದ ಬಗ್ಗೆ ಎ/ಯು ಬಿ/ಯ ಮೇಲೆ ದಾವೆ ಹೂಡಿದ್ದಾನೆ. ಆ ನಿರ್ದಿಷ್ಟ ವಾಹನದ ದೋಷದ ಬಗ್ಗೆ ಬೇರೆ ಸಂದರ್ಭಗಳಲ್ಲಿ ಬಿ/ಯ ಗಮನ ಸೆಳೆಯಲಾಗಿತ್ತೆಂಬ ಸಂಗತಿಯು, ಸುಸಂಬದ್ಧವಾಗಿರುತ್ತದೆ. ತಾನು ಬಾಡಿಗೆಗೆ ಕೊಡುತ್ತಿದ್ದ ವಾಹನಗಳ ಬಗ್ಗೆ ಬಿ/ಯು ರೂಢಿಗತ ನಿರ್ಲಕ್ಷ್ಯ ತೋರಿಸುತ್ತಿದ್ದನೆಂಬ ಸಂಗತಿಯು ಅಸಂಬದ್ಧವಾಗಿರುತ್ತದೆ.

(ಓ) ಉದ್ದೇಶಪೂರ್ವಕವಾಗಿ ಬಿ/ಯ ಮೇಲೆ ಗುಂಡು ಹಾರಿಸಿ ಅವನನ್ನು ಕೊಂದ ಬಗ್ಗೆ ಎ/ಯು ಅಧಿವಿಚಾರಣೆಗೆ ಗುರಿಯಾಗಿದ್ದಾನೆ. ಎ/ಯು ಬಿ/ಯ ಮೇಲೆ ಬೇರೆ ಸಂದರ್ಭಗಳಲ್ಲಿ ಗುಂಡು ಹಾರಿಸಿದ್ದನೆಂಬ ಸಂಗತಿಯು ಅವನು ಬಿ/ಯ ಮೇಲೆ ಗುಂಡುಹಾರಿಸುವ ಉದ್ದೇಶವನ್ನು ಹೊಂದಿದ್ದನೆಂಬುದನ್ನು ತೋರಿಸುವುದರಿಂದ ಸುಸಂಬದ್ಧವಾಗಿರುತ್ತದೆ. ಎ/ಯು ಜನರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಮೇಲೆ ಗುಂಡುಹಾರಿಸುವ ರೂಢಿವುಳ್ಳವನಾಗಿದ್ದನೆಂಬ ಸಂಗತಿಯು ಅಸಂಬದ್ಧವಾಗಿರುತ್ತದೆ.

(ಪಿ) ಒಂದು ಅಪರಾಧಕ್ಕಾಗಿ ಎ/ಯು ಅಧಿವಿಚಾರಣೆಗೆ ಗುರಿಯಾಗಿದ್ದಾನೆ. ಆ ವಿಶಿಷ್ಟ ಅಪರಾಧವನ್ನು ಮಾಡುವ ಬಗ್ಗೆ ಉದ್ದೇಶವನ್ನು ಸೂಚಿಸುವಂಥದ್ದೇನನ್ನೋ ಅವನು ಹೇಳಿದನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ. ಆ ವರ್ಗದ ಅಪರಾಧವನ್ನು ಮಾಡುವ ಬಗ್ಗೆ ಸಾಮಾನ್ಯ ಮನೋಧರ್ಮವನ್ನು ಸೂಚಿಸುವಂಥದ್ದೇನನ್ನೋ ಅವನು ಹೇಳಿದನೆಂಬ ಸಂಗತಿಯು ಅಸಂಬದ್ಧವಾಗಿರುತ್ತದೆ.

**13. ಕೃತ್ಯವು ಆಕಸ್ಮಿಕವಾಗಿತ್ತೋ ಅಥವಾ ಉದ್ದೇಶಪೂರ್ವಕವಾಗಿತ್ತೋ ಎಂಬ ಪ್ರಶ್ನೆಗೆ ಸಂಬಂಧಿಸಿದ ಸಂಗತಿಗಳು.-** ಒಂದು ಕೃತ್ಯವು ಆಕಸ್ಮಿಕವಾಗಿತ್ತೋ ಅಥವಾ ಉದ್ದೇಶಪೂರ್ವಕವಾಗಿತ್ತೋ ಅಥವಾ ಒಂದು ನಿರ್ದಿಷ್ಟ ತಿಳುವಳಿಕೆಯಿಂದ ಅಥವಾ ಉದ್ದೇಶದಿಂದ ಮಾಡಲಾಗಿತ್ತೋ ಎಂಬ ಪ್ರಶ್ನೆ ಉಂಟಾದಾಗ, ಅಂಥ ಕೃತ್ಯವು ಅದೇ ಬಗೆಯ ಹಲವಾರು ಘಟನೆಗಳ ಸರಣಿಯ ಒಂದು ಭಾಗವಾಗಿತ್ತು ಮತ್ತು ಆ ಕೃತ್ಯವನ್ನು ಮಾಡುವ ವ್ಯಕ್ತಿಯು ಅಂಥ ಪ್ರತಿಯೊಂದರಲ್ಲೂ ಸಂಬಂಧ ಹೊಂದಿದ್ದನು ಎಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

*ದೃಷ್ಟಾಂತಗಳು*

(ಎ) ಎ/ಯು ವಿಮೆ ಮಾಡಲಾದ ತನ್ನ ಮನೆಯನ್ನು ಹಣವನ್ನು ಪಡೆಯುವುದಕ್ಕೋಸ್ಕರ ಅದನ್ನು ಸುಟ್ಟು ಹಾಕಿದನೆಂದು ಆಪಾದಿತನಾಗಿದ್ದಾನೆ. ಎ/ಯು ಹಲವರು ಮನೆಗಳಲ್ಲಿ ವಾಸಿಸುತ್ತಿದ್ದು, ತಾನು ಹಾಗೆ ವಾಸಿಸುತ್ತಿದ್ದ ಪ್ರತಿಯೊಂದು ಮನೆಯ ವಿಮೆ

ಮಾಡಿಸಿ ಹೀಗೆ ಅನೇಕ ಮನೆಗಳಲ್ಲಿ ವಾಸಿಸಿ, ಆ ಪ್ರತಿಯೊಂದು ಮನೆಯಲ್ಲೂ ಬೆಂಕಿ ಅನಾಹುತವು ಘಟಿಸಿತ್ತೆಂಬ ಮತ್ತು ಅಂಥ ಪ್ರತಿಯೊಂದು ಅಗ್ನಿ ಅನಾಹುತದ ನಂತರ 'ಎ'ಯು ಬೇರೆ ಬೇರೆ ವಿಮಾ ಕಾರ್ಯಾಲಯಗಳಿಂದ ಹಣ ಪಡೆದನೆಂಬ ಸಂಗತಿಗಳು ಅಗ್ನಿ ಅನಾಹುತಗಳು ಆಕಸ್ಮಿಕವಾಗಿರಲಿಲ್ಲವೆಂಬುದುನ್ನು ತೋರಿಸುವುದಕ್ಕೆ ಸುಸಂಬದ್ಧವಾಗಿರುತ್ತವೆ.

(ಬಿ) 'ಬಿ'ಯ ಸಾಲಗಾರರಿಂದ ಹಣ ಪಡೆಯಲು 'ಎ' ನನ್ನು ನಿಯೋಜಿಸಲಾಗಿದೆ. ತಾನು ಪಡೆದ ಹಣದ ಮೊಬಲಗುಗಳನ್ನು ಪುಸ್ತಕದಲ್ಲಿ ತೋರಿಸಿ ನಮೂದಿಸುವುದು 'ಎ'ಯ ಕರ್ತವ್ಯವಾಗಿದೆ. ಒಂದು ವಿಶಿಷ್ಟ ಸಂದರ್ಭದಲ್ಲಿ ತಾನು ವಾಸ್ತವವಾಗಿ ಪಡೆದ ಹಣಕ್ಕಿಂತ ಕಡಿಮೆ ಪಡೆದಿರುವನೆಂದು ತೋರಿಸಲು ಹಾಗೆ ನಮೂದಿಸುತ್ತಾನೆ. ಈ ಸುಳ್ಳು ನಮೂದನೆಯು ಆಕಸ್ಮಿಕವಾದುದು ಅಥವಾ ಉದ್ದೇಶಪೂರ್ವಕವಾದುದು ಆಗಿತ್ತೇ ಎಂಬುದು ಪ್ರಶ್ನೆ. ಅದೇ ಪುಸ್ತಕದಲ್ಲಿ 'ಎ'ಯು ಮಾಡಿದ ಇತರ ನಮೂದನೆಗಳು ಸುಳ್ಳಾಗಿವೆ ಮತ್ತು ಅಂಥ ಸುಳ್ಳು ನಮೂದನೆಯು ಪ್ರತಿಯೊಂದು ಸಂದರ್ಭದಲ್ಲೂ 'ಎ'ಗೆ ಲಾಭದಾಯಕವಾಗಿವೆ ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತದೆ.

(ಸಿ) 'ಎ'ಯು 'ಬಿ'ಗೆ ಒಂದು ಖೋಟಾ ಕರೆನ್ಸಿಯನ್ನು ಮೋಸದಿಂದ ಕೊಟ್ಟಿದ್ದಾನೆಂದು ಆಪಾದಿತನಾಗಿದ್ದಾನೆ. ಹಾಗೆ ರೂಪಾಯಿ ಕೊಟ್ಟಿದ್ದು ಆಕಸ್ಮಿಕವೇ ಎಂಬುದು ಪ್ರಶ್ನೆ. 'ಬಿ'ಗೆ ಕೊಟ್ಟಿದ್ದಕ್ಕಿಂತ ಸ್ವಲ್ಪ ಮುಂಚೆ ಅಥವಾ ಅನಂತರ 'ಎ'ಯು ಖೋಟಾ ಕರೆನ್ಸಿಗಳನ್ನು 'ಸಿ', 'ಡಿ' ಮತ್ತು 'ಇ' ಇವರಿಗೆ ಕೊಟ್ಟನೆಂಬ ಸಂಗತಿಗಳು, 'ಬಿ'ಗೆ ಆತನು ಕೊಟ್ಟಿದ್ದು ಆಕಸ್ಮಿಕವಲ್ಲ ಎಂಬುದನ್ನು ತೋರಿಸಲು ಸುಸಂಬದ್ಧವಾಗಿರುತ್ತವೆ.

**14. ವ್ಯವಹಾರ ಕ್ರಮದ ಅಸ್ತಿತ್ವವು ಯಾವಾಗ ಸುಸಂಬದ್ಧವಾಗಿರುವುದು.-** ಒಂದು ನಿರ್ದಿಷ್ಟ ಕಾರ್ಯವನ್ನು ಮಾಡಲಾಗಿದೆಯೇ ಎಂಬ ಪ್ರಶ್ನೆ ಉದ್ಭವಿಸಿದಾಗ, ಯಾವ ವ್ಯವಹಾರ ಕ್ರಮದಲ್ಲಿ ಸ್ವಾಭಾವಿಕವಾಗಿ ಅದನ್ನು ಮಾಡಬಹುದಾಗಿತ್ತೋ ಆ ರೀತಿಯಲ್ಲಿ ಮಾಡಿದ ವ್ಯವಹಾರ ಕ್ರಮದ ಅಸ್ತಿತ್ವವು ಸುಸಂಬದ್ಧ ಸಂಗತಿಯಾಗಿರುತ್ತದೆ.

*ದೃಷ್ಟಾಂತಗಳು*

(ಎ) ಒಂದು ನಿರ್ದಿಷ್ಟ ಪತ್ರವನ್ನು ರವಾನಿಸಲಾಗಿತ್ತೇ ಎಂಬುದು ಪ್ರಶ್ನೆ. ಒಂದು ಗೊತ್ತಾದ ಸ್ಥಳದಲ್ಲಿ ಹಾಕಿದ ಎಲ್ಲ ಪತ್ರಗಳನ್ನು ಅಂಚೆಗೆ ಒಯ್ಯುವುದು ಒಂದು ಸಾಮಾನ್ಯ ವ್ಯವಹಾರವಾಗಿರುವುದೆಂಬ ಮತ್ತು ಆ ನಿರ್ದಿಷ್ಟ ಪತ್ರವನ್ನು ಆ ಸ್ಥಳದಲ್ಲಿ ಹಾಕಲಾಗಿತ್ತು ಎಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

(ಬಿ) ಒಂದು ನಿರ್ದಿಷ್ಟ ಪತ್ರವು 'ಎ'ಗೆ ತಲುಪಿತೇ ಎಂಬುದು ಪ್ರಶ್ನೆ. ಆ ಪತ್ರವನ್ನು ಯುಕ್ತ ಕ್ರಮದಲ್ಲಿ ಅಂಚೆಗೆ ಹಾಕಲಾಯಿತು ಮತ್ತು ಅದು ಬಟವಾಡೆಯಾಗದ ಪತ್ರಗಳ ಕಾರ್ಯಾಲಯದಿಂದ ವಾಪಸ್ಸು ಬರಲಿಲ್ಲವೆಂಬ ಸಂಗತಿಗಳು ಸುಸಂಬದ್ಧವಾಗಿರುತ್ತವೆ.

***ಒಪ್ಪಿಗೆಗಳು***

**15. ಒಪ್ಪಿಗೆಯ ಪರಿಭಾಷೆ.-** ವಿವಾದಿತ ಅಥವಾ ಸುಸಂಬದ್ಧವಾದ ಯಾವುದೇ ಸಂಗತಿಯ ಬಗ್ಗೆ ಯಾವುದೇ ಊಹೆಗೆ ಎಡೆಗೊಡುವ ಮತ್ತು ಈ ಮುಂದೆ ನಮೂದಿಸಲಾದ ವ್ಯಕ್ತಿಗಳಲ್ಲಿ ಯಾರೊಬ್ಬರಿಂದ ಮತ್ತು ಅಂಥ ಸಂದರ್ಭಗಳಲ್ಲಿ ಮಾಡಲಾದ ಮೌಖಿಕ ಅಥವಾ ದಸ್ತಾವೇಜೀಯ ಅಥವಾ ವಿದ್ಯುನ್ಮಾನ ರೂಪದಲ್ಲಿ ಇರುವ ಹೇಳಿಕೆಯು ಒಪ್ಪಿಗೆ ಎನಿಸುತ್ತದೆ.

**16. ವ್ಯವಹರಣೆಯ ಪಕ್ಷಕಾರನಿಂದ ಅಥವಾ ಆತನ ಏಜೆಂಟನಿಂದ ಒಪ್ಪಿಗೆ.-** (1) ವ್ಯವಹರಣೆಯ ಪಕ್ಷಕಾರನು ಅಥವಾ ಮೊಕದ್ದಮೆಯ ಸಂದರ್ಭಗಳ ಮೇರೆಗೆ ಹೇಳಿಕೆಗಳನ್ನು ನೀಡಲು ವ್ಯಕ್ತವಾಗಿ ಅಥವಾ ಇಂಗಿತವಾಗಿ ಅವನಿಂದ ಅಧಿಕೃತವಾಗಿರುವನೆಂದು ನ್ಯಾಯಾಲಯವು ಭಾವಿಸುವಂಥ ಪಕ್ಷಕಾರನ ಯಾರೇ ಏಜೆಂಟನು ನೀಡಿದ ಹೇಳಿಕೆಗಳು ಒಪ್ಪಿಗೆಗಳಾಗುತ್ತವೆ.

(2) ಹೇಳಿಕೆಗಳು,-

(i) ದಾವೆಗಳ ಯಾವ ಪಕ್ಷಕಾರರು ಪ್ರಾತಿನಿಧಿಕ ಸ್ವರೂಪದಲ್ಲಿ ದಾವೆ ಹೂಡುತ್ತಿರುವರೋ ಅಥವಾ ಯಾರ ಮೇಲೆ ದಾವೆ ಹೂಡಲಾಗುತ್ತಿದೆಯೋ ಅವರು ನೀಡಿದ ಹೇಳಿಕೆಗಳು, ಅವುಗಳನ್ನು ನೀಡುವ ಪಕ್ಷಕಾರನು ಆ ಸ್ವರೂಪದಲ್ಲಿ ಅವುಗಳನ್ನು ನೀಡಿದ್ದ ಹೊರತು, ಒಪ್ಪಿಗೆಗಳಾಗುವುದಿಲ್ಲ; ಅಥವಾ

(ii) (ಎ) ವ್ಯವಹರಣೆಯ ವಸ್ತು ವಿಷಯದಲ್ಲಿ ಒಡೆತನದ ಅಥವಾ ಹಣಕಾಸಿನ ಹಿತಾಸಕ್ತಿಯುಳ್ಳ ಮತ್ತು ಹಾಗೆ ಹಿತಾಸಕ್ತಿಯುಳ್ಳ ವ್ಯಕ್ತಿಗಳಾಗಿ ಹೇಳಿಕೆಗಳನ್ನು ನೀಡುವ ವ್ಯಕ್ತಿಗಳು; ಅಥವಾ

(ಬಿ) ದಾವೆಯ ವಸ್ತು ವಿಷಯದಲ್ಲಿ ಹಿತಾಸಕ್ತಿಯು ದಾವೆಯ ಪಕ್ಷಕಾರರಿಗೆ ಯಾರಿಂದ ಪ್ರಾಪ್ತವಾಯಿತೋ ಆ ವ್ಯಕ್ತಿಗಳು

- ನೀಡಿದ ಹೇಳಿಕೆಗಳು, ಅಂಥ ಹೇಳಿಕೆಗಳನ್ನು ನೀಡುವ ವ್ಯಕ್ತಿಯ ಹಿತಾಸಕ್ತಿಯು ಮುಂದುವರಿಯುತ್ತಿರುವಾಗ ಅವರು ಅವುಗಳನ್ನು ನೀಡಿದ್ದರೆ ಒಪ್ಪಿಗೆಗಳಾಗುತ್ತವೆ.

**17. ದಾವೆಯ ಪಕ್ಷಕಾರನ ವಿರುದ್ಧವಾಗಿ ಯಾರ ಸ್ಥಾನಮಾನವನ್ನು ರುಜುವಾತುಪಡಿಸಬೇಕಾಗಿದೆಯೋ ಆ ವ್ಯಕ್ತಿಗಳ ಒಪ್ಪಿಗೆಗಳು.-** ದಾವೆಯ ಯಾರೇ ಪಕ್ಷಕಾರನ ವಿರುದ್ಧವಾಗಿ ಯಾರ ಸ್ಥಾನಮಾನವನ್ನು ಅಥವಾ ಹೊಣೆಗಾರಿಕೆಯನ್ನು ರುಜುವಾತುಪಡಿಸುವುದು ಅಗತ್ಯವಾಗಿದೆಯೋ ಆ ವ್ಯಕ್ತಿಗಳು ಮಾಡಿದ ಹೇಳಿಕೆಗಳು, ಅವರಿಂದ ಅಥವಾ ಅವರ ವಿರುದ್ಧ ಹೂಡಲಾದ ದಾವೆಯಲ್ಲಿ ಅಂಥ ಸ್ಥಾನಮಾನಕ್ಕೆ ಅಥವಾ ಹೊಣೆಗಾರಿಕೆಗೆ ಸಂಬಂಧಿಸಿ ಅಂಥ ಹೇಳಿಕೆಗಳು ಆ ವ್ಯಕ್ತಿಗಳ ವಿರುದ್ಧ ಸುಸಂಬದ್ಧವಾಗುವುದಾದರೆ ಮತ್ತು ಅವುಗಳನ್ನು ನೀಡುವಾಗ ಅವುಗಳನ್ನು ಮಾಡುವ ವ್ಯಕ್ತಿಯು ಅಂಥ ಸ್ಥಾನಮಾನವನ್ನು ಹೊಂದಿದ್ದರೆ ಅಥವಾ ಅಂಥ ಹೊಣೆಗಾರಿಕೆಗೆ ಒಳಪಟ್ಟಿದ್ದರೆ, ಒಪ್ಪಿಗೆಗಳಾಗುತ್ತವೆ.

*ದೃಷ್ಟಾಂತ*

‘ಎ’ಯು ‘ಬಿ’ಯ ಪರವಾಗಿ ಬಾಡಿಗೆ ವಸೂಲಿಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾನೆ. ‘ಬಿ’ಗೆ ‘ಸಿ’ನಿಂದ ಬರಬೇಕಾದ ಬಾಡಿಗೆಯನ್ನು ವಸೂಲು ಮಾಡದಿರುವುದಕ್ಕಾಗಿ ‘ಬಿ’ಯು ‘ಎ’ಯ ಮೇಲೆ ದಾವೆ ಹೂಡುತ್ತಾನೆ. ‘ಸಿ’ ನಿಂದ ‘ಬಿ’ಗೆ ಬಾಡಿಗೆ ಬರಬೇಕಾಗಿದೆಯೆಂಬುದನ್ನು ‘ಎ’ಯು ನಿರಾಕರಿಸುತ್ತಾನೆ. ತಾನು ‘ಬಿ’ಗೆ ಬಾಡಿಗೆ ಕೊಡಬೇಕಾಗಿದೆ ಎಂದು ‘ಸಿ’ಯು ಕೊಡುವ ಹೇಳಿಕೆಯು ಒಪ್ಪಿಗೆಯಾಗುತ್ತದೆ ಮತ್ತು ‘ಸಿ’ಯು ‘ಬಿ’ಗೆ ಬಾಡಿಗೆ ಕೊಡಬೇಕಾಗಿದೆ ಎಂಬುದನ್ನು ‘ಎ’ಯು ನಿರಾಕರಿಸಿದರೆ, ‘ಎ’ಯ ವಿರುದ್ಧ ಅದು ಸುಸಂಬದ್ಧ ಸಂಗತಿಯಾಗಿರುತ್ತವೆ.

**18. ದಾವೆಯ ಪಕ್ಷಕಾರನು ವ್ಯಕ್ತವಾಗಿ ಉಲ್ಲೇಖಿಸಿದ ವ್ಯಕ್ತಿಗಳ ಒಪ್ಪಿಗೆಗಳು.-** ದಾವೆಯ ಪಕ್ಷಕಾರನು ವಿವಾದಿತದಲ್ಲಿರುವ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯ ಸಲುವಾಗಿ ವ್ಯಕ್ತವಾಗಿ ಉಲ್ಲೇಖಿಸಿದ ವ್ಯಕ್ತಿಗಳು ನೀಡಿದ ಹೇಳಿಕೆಗಳು ಒಪ್ಪಿಗೆಗಳಾಗುತ್ತವೆ.

*ದೃಷ್ಟಾಂತ*

‘ಎ’ಯು ‘ಬಿ’ಗೆ ಮಾರಿದ ಕುದುರೆಯು ಆರೋಗ್ಯಕರವಾಗಿದೆಯೇ ಎಂಬುದು ಪ್ರಶ್ನೆ.

“‘ಸಿ’ಗೆ ಅದರ ಬಗ್ಗೆ ಎಲ್ಲಾ ಗೊತ್ತಿದೆ, ‘ಸಿ’ಯ ಬಳಿ ಹೋಗಿ ಕೇಳು” ಎಂದು ‘ಎ’ಯು ‘ಬಿ’ಗೆ ಹೇಳುತ್ತಾನೆ. ‘ಸಿ’ಯ ಹೇಳಿಕೆಯು ಒಪ್ಪಿಗೆಯೆನಿಸುತ್ತದೆ.

**19. ಒಪ್ಪಿಗೆಗಳನ್ನು ಕೊಡುವ ಮತ್ತು ಅವರ ಮೂಲಕ ಅಥವಾ ಅವರ ಪರವಾಗಿ ಅವುಗಳನ್ನು ಕೊಡುವ ವ್ಯಕ್ತಿಗಳ ವಿರುದ್ಧ ಅವುಗಳ ರುಜುವಾತು.-** ಒಪ್ಪಿಗೆಗಳನ್ನು ಕೊಡುವ ವ್ಯಕ್ತಿಯ ಅಥವಾ ಆತನ ಹಿತಾಸಕ್ತಿಯ ಪ್ರತಿನಿಧಿಯ ವಿರುದ್ಧ ಆ ಒಪ್ಪಿಗೆಗಳು

ಸುಸಂಬದ್ಧವಾಗಿರುತ್ತವೆ; ಮತ್ತು ಅವುಗಳನ್ನು ರುಜುವಾತುಪಡಿಸಬಹುದು; ಆದರೆ ಈ ಕೆಳಕಂಡ ಸಂದರ್ಭಗಳ ಹೊರತಾಗಿ, ಅವುಗಳನ್ನು ಮಾಡುವ ವ್ಯಕ್ತಿಯು ಅಥವಾ ಆತನ ಪರವಾಗಿ ಅಥವಾ ಆತನ ಹಿತಾಸಕ್ತಿಯ ಪ್ರತಿನಿಧಿಯು ಅವುಗಳನ್ನು ರುಜುವಾತುಪಡಿಸುವಂತಿಲ್ಲ, ಎಂದರೆ: -

(1) ಒಪ್ಪಿಗೆಯನ್ನು ಕೊಡುವ ವ್ಯಕ್ತಿಯು ಮೃತನಾಗಿದ್ದರೆ, 26ನೇ ಪ್ರಕರಣದ ಮೇರೆಗೆ ಬೇರೆ ವ್ಯಕ್ತಿಗಳ ಮಧ್ಯೆ ಅದು ಸುಸಂಬದ್ಧವಾಗುವ ಸ್ವರೂಪದ್ದಾಗಿದ್ದರೆ, ಅದನ್ನು ಮಾಡುವ ವ್ಯಕ್ತಿ ಅಥವಾ ಆತನ ಪರವಾಗಿ ಅದನ್ನು ರುಜುವಾತುಪಡಿಸಬಹುದು;

(2) ಸುಸಂಬದ್ಧವಾದ ಅಥವಾ ವಿವಾದದಲ್ಲಿರುವ ಯಾವುದೇ ಮಾನಸಿಕ ಅಥವಾ ದೈಹಿಕ ಸ್ಥಿತಿಯ ಅಸ್ತಿತ್ವದ ಬಗೆಗಿನ ಹೇಳಿಕೆಯನ್ನು ಒಪ್ಪಿಗೆಯು ಒಳಗೊಂಡಿದ್ದಾಗ ಮತ್ತು ಅದು ಅಂಥ ಮಾನಸಿಕ ಅಥವಾ ದೈಹಿಕ ಸ್ಥಿತಿಯು ಅಸ್ತಿತ್ವದಲ್ಲಿರುವಾಗ ಅಥವಾ ಆ ಸುಮಾರಿಗೆ ಮಾಡಿದಿದ್ದರೆ ಮತ್ತು ಅದನ್ನು ಸುಳ್ಳಾಗಿಸುವುದು ಅಸಂಭವವಾಗಿರುವಂಥ ನಡತೆಯಿಂದ ಅದು ಕೂಡಿದ್ದರೆ, ಅದನ್ನು ಮಾಡುವ ವ್ಯಕ್ತಿಯು ಅಥವಾ ಅವನ ಪರವಾಗಿ ಅದನ್ನು ರುಜುವಾತುಪಡಿಸಬಹುದು;

(3) ಒಪ್ಪಿಗೆಯಂತಲ್ಲದೆ ಅನ್ಯಥಾ ಸುಸಂಬದ್ಧವಾಗಿದ್ದರೆ, ಅದನ್ನು ಮಾಡುವ ವ್ಯಕ್ತಿಯು ಅಥವಾ ಅವನ ಪರವಾಗಿ ಆ ಒಪ್ಪಿಗೆಯನ್ನು ರುಜುವಾತುಪಡಿಸಬಹುದು.

*ದೃಷ್ಟಾಂತಗಳು*

(ಎ) ಒಂದು ಲಿಖಿತವು ಸುಳ್ಳು ಸೃಷ್ಟನೆಯೇ ಅಥವಾ ಅಲ್ಲವೇ ಎಂಬ ಬಗ್ಗೆ 'ಎ' ಮತ್ತು 'ಬಿ'ಯ ನಡುವೆ ಪ್ರಶ್ನೆ ಉದ್ಭವಿಸಿದೆ. ಅದು ನಿಜವಾದುದೆಂದು 'ಎ'ಯು, ಅದು ಸುಳ್ಳು ಸೃಷ್ಟನೆ ಎಂದು 'ಬಿ'ಯು ಸಮರ್ಥಿಸುತ್ತಾನೆ. ಆ ಲಿಖಿತವು ನಿಜವಾದುದೆಂಬ 'ಬಿ'ಯ ಹೇಳಿಕೆಯನ್ನು 'ಎ'ಯು ರುಜುವಾತುಪಡಿಸಬಹುದು ಮತ್ತು ಆ ಲಿಖಿತವು ಸುಳ್ಳು ಸೃಷ್ಟನೆ ಎಂಬ 'ಎ'ಯ ಹೇಳಿಕೆಯನ್ನು 'ಬಿ'ಯು ರುಜುವಾತುಪಡಿಸಬಹುದು; ಆದರೆ ಆ ಲಿಖಿತವು ನಿಜವಾದುದು ಎಂಬ ತನ್ನ ಹೇಳಿಕೆಯನ್ನೇ, 'ಎ'ಯು ಅಥವಾ ಆ ಲಿಖಿತವು ಸುಳ್ಳು ಸೃಷ್ಟನೆ ಎಂಬ ತನ್ನ ಹೇಳಿಕೆಯನ್ನೇ 'ಬಿ'ಯು ರುಜುವಾತುಪಡಿಸಲು ಸಾಧ್ಯವಿಲ್ಲ.

(ಬಿ) ಹಡಗಿನ ನಾಯಕನಾದ 'ಎ'ಯು ಅದರ ಮಾರ್ಗ ಬದಲಾವಣೆಗಾಗಿ ಅಧಿವಿಚಾರಣೆಗೆ ಗುರಿಯಾಗಿದ್ದಾನೆ. ಹಡಗನ್ನು ಅದರ ಸರಿಯಾದ ಮಾರ್ಗದಿಂದ ಬೇರೆಡೆಗೆ ಒಯ್ಯಲಾಗಿತ್ತೆಂಬುದನ್ನು ತೋರಿಸಲು ಸಾಕ್ಷ್ಯವನ್ನು ಕೊಡಲಾಗಿದೆ. 'ಎ'ಯು ತನ್ನ ಸಾಮಾನ್ಯ ವ್ಯವಹಾರ ಕ್ರಮದಲ್ಲಿ ಇಟ್ಟುಕೊಂಡಿದ್ದು, ತಾನು ಪ್ರತಿದಿನ ಗಮನಿಸುವುದಾಗಿ ಹೇಳಿದ ಸಂಗತಿಗಳನ್ನು ತೋರಿಸುವ ಮತ್ತು ಹಡಗನ್ನು ಅದರ ಸರಿಯಾದ ಮಾರ್ಗದಿಂದ ಬೇರೆಡೆಗೆ ಒಯ್ಯಲಾಗಿರಲಿಲ್ಲವೆಂದು ಸೂಚಿಸುವ ಪುಸ್ತಕವನ್ನು ಹಾಜರುಪಡಿಸುತ್ತಾನೆ. ಅವನು ಮೃತನಾಗಿದ್ದರೆ, ಅವು 26ನೇ ಪ್ರಕರಣದ (ಬಿ) ಖಂಡದ ಮೇರೆಗೆ ಮೂರನೇ ಪಕ್ಷಕಾರರ ನಡುವೆ ಅಂಗೀಕಾರ ಯೋಗ್ಯವಾಗಿರುವುದರಿಂದ, 'ಎ'ಯು ಈ ಹೇಳಿಕೆಗಳನ್ನು ರುಜುವಾತುಪಡಿಸಬಹುದು.

(ಸಿ) 'ಎ'ಯು ಕೋಲ್ಕತ್ತಾದಲ್ಲಿ ಮಾಡಿದ ಒಂದು ಅಪರಾಧಕ್ಕಾಗಿ ಆಪಾದಿತನಾಗಿದ್ದಾನೆ. ಆತನು ತಾನೇ ಚೆನ್ನೈನಲ್ಲಿ ಬರೆದ ಮತ್ತು ದಿನಾಂಕ ಹಾಕಿದ ಮತ್ತು ಆ ದಿನದ ಚೆನ್ನೈ ಅಂಚೆ ಗುರುತನ್ನು ಹೊಂದಿರುವ ಒಂದು ಪತ್ರವನ್ನು ಹಾಜರುಪಡಿಸುತ್ತಾನೆ. ಪತ್ರದ ದಿನಾಂಕದ ಬಗ್ಗೆ ನೀಡಿದ ಹೇಳಿಕೆಯು ಅಂಗೀಕಾರ ಯೋಗ್ಯವಾಗಿದೆ, ಏಕೆಂದರೆ 'ಎ'ಯು ಮೃತಪಟ್ಟಿದ್ದರೆ, ಅದು 26ನೇ ಪ್ರಕರಣದ (ಬಿ) ಖಂಡದ ಮೇರೆಗೆ ಅಂಗೀಕಾರ ಯೋಗ್ಯವಾಗುವುದು.

(ಡಿ) ಕಳವಿನ ಮಾಲುಗಳನ್ನು, ಅವು ಕಳವಿನದೆಂದು ತಿಳಿದೂ 'ಎ'ಯು ಸ್ವೀಕರಿಸಿದನೆಂದು ಆಪಾದಿತನಾಗಿದ್ದಾನೆ. ಅವನು ಅವುಗಳನ್ನು ಕಡಿಮೆ ಬೆಲೆಗೆ ಮಾರಲು ನಿರಾಕರಿಸಿದನೆಂಬುದನ್ನು ರುಜುವಾತುಪಡಿಸುವುದಾಗಿ ಹೇಳುತ್ತಾನೆ. ಈ ಹೇಳಿಕೆಗಳು ಅವು

ಒಪ್ಪಿಗೆಗಳಾಗಿದ್ದರೂ, ಟ/ಯು ಅವುಗಳನ್ನು ರುಜುವಾತುಪಡಿಸಬಹುದು, ಏಕೆಂದರೆ ಅವು ವಿವಾದಿತ ಸಂಗತಿಗಳಿಂದ ಪ್ರಭಾವಿತವಾದ ನಡತೆಯನ್ನು ವಿವರಿಸುತ್ತವೆ.

(ಇ) ಖೋಟಾ ಕರೆನ್ಸಿಯನ್ನು ಅದು ಖೋಟಾ ಎಂದು ತಿಳಿದೂ ಟ/ಯು ಮೋಸದಿಂದ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದನೆಂದು ಆಪಾದಿತನಾಗಿದ್ದಾನೆ. ಅದು ಖೋಟಾ ಕರೆನ್ಸಿಯೇ ಅಥವಾ ಅಲ್ಲವೇ ಎಂಬ ಬಗ್ಗೆ ತನಗೆ ಸಂದೇಹ ಉಂಟಾದುದರಿಂದ ಅದನ್ನು ಪರೀಕ್ಷಿಸಲು ಕೌಶಲ್ಯವುಳ್ಳ ವ್ಯಕ್ತಿಯನ್ನು ತಾನು ಕೇಳಿದ್ದೇನೆಂಬುದನ್ನು ಮತ್ತು ಅಂಥ ವ್ಯಕ್ತಿಯು ಅದನ್ನು ಪರೀಕ್ಷಿಸಿದನೆಂಬುದನ್ನು ಮತ್ತು ಅದು ನಿಜವಾದುದೆಂಬುದನ್ನು ಆತನು ತನಗೆ ಹೇಳಿದನೆಂಬುದನ್ನು ರುಜುವಾತುಪಡಿಸುವುದಾಗಿ ಹೇಳುತ್ತಾನೆ. ಟ/ಯು ಈ ಸಂಗತಿಗಳನ್ನು ರುಜುವಾತುಪಡಿಸಬಹುದು.

**20. ದಸ್ತಾವೇಜುಗಳ ಒಳಾಂಶಗಳ ಬಗ್ಗೆ ಮೌಖಿಕ ಒಪ್ಪಿಗೆಯು ಯಾವಾಗ ಸುಸಂಬದ್ಧ.-** ಒಂದು ದಸ್ತಾವೇಜಿನ ಒಳಾಂಶಗಳ ಬಗ್ಗೆ ಮೌಖಿಕ ಒಪ್ಪಿಗೆಗಳು, ಅವುಗಳನ್ನು ರುಜುವಾತುಪಡಿಸಲು ಉದ್ದೇಶಿಸುವ ಪಕ್ಷಕಾರನು ಅಂಥ ದಸ್ತಾವೇಜಿನ ಒಳಾಂಶಗಳ ಬಗ್ಗೆ ಎರಡನೆಯ ಸಾಕ್ಷ್ಯ ಕೊಡಲು ಈ ಮುಂದಿನ ನಿಯಮಗಳ ಮೇರೆಗೆ ತಾನು ಹಕ್ಕುಳ್ಳವನಾಗಿದ್ದಾನೆಂದು ತೋರಿಸಿಕೊಟ್ಟ ಹೊರತು ಮತ್ತು ತೋರಿಸಿ ಕೊಡುವವರೆಗೆ ಅಥವಾ ಹಾಜರುಪಡಿಸಿದ ದಸ್ತಾವೇಜಿನ ನೈಜತೆಯು ಪ್ರಶ್ನಿತವಾಗಿದ್ದ ಹೊರತು, ಸುಸಂಬದ್ಧವಾಗುವುದಿಲ್ಲ.

**21. ಸಿವಿಲ್ ಮೊಕದ್ದಮೆಗಳಲ್ಲಿ ಒಪ್ಪಿಗೆಗಳು ಯಾವಾಗ ಸುಸಂಬದ್ಧ.-** ಸಿವಿಲ್ ಮೊಕದ್ದಮೆಗಳಲ್ಲಿ ಯಾವ ಒಪ್ಪಿಗೆಯೂ, ಅದರ ಬಗ್ಗೆ ಸಾಕ್ಷ್ಯವನ್ನು ಕೊಡಕೂಡದೆಂಬ ಸ್ಪಷ್ಟ ಷರತ್ತಿನ ಮೇಲೆ ಅಥವಾ ಅದರ ಬಗ್ಗೆ ಸಾಕ್ಷ್ಯವನ್ನು ಕೊಡಕೂಡದೆಂಬ ಬಗ್ಗೆ ಪಕ್ಷಕಾರರು ಪರಸ್ಪರ ಒಪ್ಪಿಕೊಂಡಿದ್ದಾರೆಂದು ನ್ಯಾಯಾಲಯವು ಊಹಿಸಬಹುದಾದ ಸಂದರ್ಭಗಳಲ್ಲಿ ಅದನ್ನು ಮಾಡಿದ್ದರೆ, ಸುಸಂಬದ್ಧವಾಗುವುದಿಲ್ಲ.

*ವಿವರಣೆ.-* ಈ ಪ್ರಕರಣದಲ್ಲಿರುವ ಯಾವುದೂ, 132ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಯಾವ ವಿಷಯದ ಬಗ್ಗೆ ಸಾಕ್ಷ್ಯ ಕೊಡಲು ಯಾರೇ ನ್ಯಾಯವಾದಿಯನ್ನು ಒತ್ತಾಯಿಸಬಹುದೋ ಆ ಯಾವುದೇ ವಿಷಯದ ಬಗ್ಗೆ ಸಾಕ್ಷ್ಯ ಕೊಡುವುದರಿಂದ ವಿನಾಯಿತಿ ನೀಡುತ್ತದೆಂದು ಪರಿಗಣಿಸತಕ್ಕದ್ದಲ್ಲ.

**22. ಪ್ರೇರಣೆ, ಬೆದರಿಕೆ, ದಬ್ಬಾಳಿಕೆ ಅಥವಾ ವಾಗ್ದಾನದಿಂದ ಉಂಟಾದ ತಪ್ಪೊಪ್ಪಿಗೆಯು ಆಪರಾಧಿಕ ವ್ಯವಹರಣೆಯಲ್ಲಿ ಯಾವಾಗ ಅಸಂಬದ್ಧ.-** ಆಪಾದಿತ ವ್ಯಕ್ತಿಯ ವಿರುದ್ಧದ ಆರೋಪಕ್ಕೆ ಸಂಬಂಧಿಸಿರುವಂತೆ ಅಧಿಕಾರದಲ್ಲಿದ್ದ ವ್ಯಕ್ತಿಯಿಂದ ಬಂದ ಯಾವುದೇ ಪ್ರೇರಣೆ, ಬೆದರಿಕೆ, ದಬ್ಬಾಳಿಕೆ ಅಥವಾ ವಾಗ್ದಾನದಿಂದ ತಪ್ಪೊಪ್ಪಿಗೆ ಮಾಡಲಾಗಿದೆಯೆಂದು ನ್ಯಾಯಾಲಯಕ್ಕೆ ಕಂಡುಬಂದರೆ ಮತ್ತು ಆ ತಪ್ಪೊಪ್ಪಿಗೆಯನ್ನು ಮಾಡುವುದರಿಂದ ತನ್ನ ವಿರುದ್ಧದ ವ್ಯವಹರಣೆಗಳ ಸಂಬಂಧದಲ್ಲಿ ತನಗೆ ಯಾವುದೇ ಬಗೆಯ ಪ್ರಯೋಜನವಾಗುವುದೆಂದು ಅಥವಾ ಯಾವುದೇ ಲೌಕಿಕ ಸ್ವರೂಪದ ಯಾವುದೇ ಕೆಡುಕಿನಿಂದ ಪಾರಾಗಲು ತಪ್ಪಿಸಿಕೊಳ್ಳಬಹುದೆಂದು ಊಹಿಸಲು ಅವನಿಗೆ ಯುಕ್ತವೆನಿಸುವಂಥ ಆಧಾರಗಳನ್ನು ಒದಗಿಸಲು, ಅವು ನ್ಯಾಯಾಲಯದ ಅಭಿಪ್ರಾಯದಲ್ಲಿ ಸಾಕಷ್ಟಾಗಿದ್ದರೆ, ಅಂಥ ಆಪಾದಿತನು ಆ ಆಪರಾಧಿಕ ವ್ಯವಹರಣೆಯಲ್ಲಿ ಮಾಡಿದ್ದ ಯಾವುದೇ ತಪ್ಪೊಪ್ಪಿಗೆಯು, ಅಸಂಬದ್ಧವಾಗಿರುತ್ತದೆ.

ಪರಂತು, ನ್ಯಾಯಾಲಯ ಅಭಿಪ್ರಾಯದಲ್ಲಿ ತಪ್ಪೊಪ್ಪಿಗೆಯನ್ನು ಯಾವುದೇ ಅಂಥ ಪ್ರೇರೇಪಣೆ, ಬೆದರಿಕೆ, ದಬ್ಬಾಳಿಕೆ ಅಥವಾ ವಾಗ್ದಾನದ ಕಾರಣದಿಂದ ಮಾಡಲಾಗಿದ್ದರೆ, ಆ ತಪ್ಪೊಪ್ಪಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಸುಸಂಬದ್ಧವಾಗಿರುತ್ತದೆ.

ಮತ್ತು ಪರಂತು, ಅಂಥ ತಪ್ಪೊಪ್ಪಿಗೆಯು ಅನ್ಯಥಾ ಸುಸಂಬದ್ಧವಾಗಿದ್ದಲ್ಲಿ, ಅದು ಗೌಪತ್ಯೆಯ ವಾಗ್ದಾನದ ಮೇರೆಗೆ ಅಥವಾ ತಪ್ಪೊಪ್ಪಿಗೆಯನ್ನು ಪಡೆಯುವ ಉದ್ದೇಶಕ್ಕಾಗಿ ಆಪಾದಿತ ವ್ಯಕ್ತಿಗೆ ಮಾಡಿದ ವಂಚನೆಯ ಪರಿಣಾಮವಾಗಿ ಅಥವಾ ಆತನು ಮತ್ತಿನಲ್ಲಿ ಇರುವಾಗ ಅಥವಾ ಆತನು ಉತ್ತರ ಕೊಡುವುದಕ್ಕೆ ಅಗತ್ಯಪಡಿಸದ ಪ್ರಶ್ನೆಗೆ ಉತ್ತರವಾಗಿ ಅಥವಾ ಅಂಥ ತಪ್ಪೊಪ್ಪಿಗೆ ಮಾಡುವುದಕ್ಕೆ ಆತನು ಬಾಧ್ಯನಾಗಿರುವುದಿಲ್ಲವೆಂಬ ಮತ್ತು ಅದನ್ನು ಆತನ ವಿರುದ್ಧ ಸಾಕ್ಷ್ಯವಾಗಿ ಬಳಸಿಕೊಳ್ಳಬಹುದೆಂಬ ಎಚ್ಚರಿಕೆ ನೀಡದಿರುವ ಕಾರಣ ಮಾತ್ರದಿಂದಲೇ ನೀಡಿದ ತಪ್ಪೊಪ್ಪಿಗೆಯು ಅಸಂಬದ್ಧವಾಗಿರುವುದಿಲ್ಲ.

**23. ಪೊಲೀಸ್ ಅಧಿಕಾರಿಯ ಮುಂದೆ ಮಾಡಿದ ತಪ್ಪೊಪ್ಪಿಗೆ.-** (1) ಪೊಲೀಸ್ ಅಧಿಕಾರಿಯ ಮುಂದೆ ಮಾಡಿದ ಯಾವ ತಪ್ಪೊಪ್ಪಿಗೆಯನ್ನೂ, ಯಾವುದೇ ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯ ವಿರುದ್ಧ ರುಜುವಾತುಪಡಿಸತಕ್ಕದ್ದಲ್ಲ.

(2) ಪೊಲೀಸ್ ಅಧಿಕಾರಿಯ ವಶದಲ್ಲಿರುವಾಗ ಯಾರೇ ವ್ಯಕ್ತಿಯು ಮಾಡಿದ ಯಾವ ತಪ್ಪೊಪ್ಪಿಗೆಯನ್ನೂ, ಅದನ್ನು ಮ್ಯಾಜಿಸ್ಟ್ರೇಟ್‌ನ ನಿಕಟ ಸಮಕ್ಷಮದಲ್ಲಿ ಮಾಡಿದ್ದ ಹೊರತು, ಅವನ ವಿರುದ್ಧ ರುಜುವಾತುಪಡಿಸತಕ್ಕದ್ದಲ್ಲ.

ಪರಂತು, ಪೊಲೀಸ್ ಅಧಿಕಾರಿಯ ಅಭಿರಕ್ಷೆಯಲ್ಲಿರುವ, ಯಾವುದೇ ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯಿಂದ ಪಡೆದ ಮಾಹಿತಿಯ ಪರಿಣಾಮವಾಗಿ ಯಾವುದೇ ಸಂಗತಿಯು ಕಂಡುಬಂದಿದೆಯೆಂದು ಹೇಳಿಕೆ ಕೊಟ್ಟಾಗ, ಆ ಮೂಲಕ ಕಂಡುಕೊಂಡ ಸಂಗತಿಗೆ ಸ್ಪಷ್ಟವಾಗಿ ಸಂಬಂಧಿಸುವಷ್ಟರಮಟ್ಟಿಗೆ ಅಂಥ ಮಾಹಿತಿಯ ಭಾಗವನ್ನು, ಅದನ್ನು ತಪ್ಪೊಪ್ಪಿಗೆ ಎನ್ನಬಹುದಾಗಿರಲಿ ಅಥವಾ ಇಲ್ಲದಿರಲಿ ರುಜುವಾತುಪಡಿಸಬಹುದು.

**24. ತಪ್ಪೊಪ್ಪಿಗೆಯನ್ನು ಮಾಡುವ ವ್ಯಕ್ತಿಯನ್ನು ಮತ್ತು ಅದೇ ಅಪರಾಧದ ಬಗ್ಗೆ ಜಂಟಿಯಾಗಿ ಅಧಿವಿಚಾರಣೆಯಲ್ಲಿರುವ ಇತರರನ್ನು ಬಾಧಿಸುವ ರುಜುವಾತಾದ ತಪ್ಪೊಪ್ಪಿಗೆಯ ಪರಿಗಣನೆ.-** ಒಬ್ಬನಿಗಿಂತ ಹೆಚ್ಚು ಜನರು ಅದೇ ಅಪರಾಧದ ಬಗ್ಗೆ ಜಂಟಿಯಾಗಿ ಆರೋಪ ಅಧಿವಿಚಾರಣೆಗೆ ಗುರಿಯಾಗಿರುವಾಗ ಮತ್ತು ಅಂಥವರಲ್ಲೊಬ್ಬನು ತನ್ನನ್ನು ಮತ್ತು ಅಂಥ ವ್ಯಕ್ತಿಗಳಲ್ಲಿ ಇತರ ಕೆಲವರನ್ನು ಬಾಧಿಸುವಂತೆ ಮಾಡಿದ ತಪ್ಪೊಪ್ಪಿಗೆಯು ರುಜುವಾತಾದಾಗ, ಅಂಥ ಇತರ ವ್ಯಕ್ತಿಗಳ ವಿರುದ್ಧವಾಗಿ ಮತ್ತು ಅಂಥ ತಪ್ಪೊಪ್ಪಿಗೆಯನ್ನು ಮಾಡುವ ವ್ಯಕ್ತಿಯ ವಿರುದ್ಧವಾಗಿ ಅಂಥ ತಪ್ಪೊಪ್ಪಿಗೆಯನ್ನು ನ್ಯಾಯಾಲಯವು ಪರಿಗಣಿಸಬಹುದು.

*ವಿವರಣೆ I*- ಈ ಪ್ರಕರಣದಲ್ಲಿ ಉಪಯೋಗಿಸಿದಂತೆ "ಅಪರಾಧ" ಎಂಬುದು ಅಪರಾಧದ ದುಷ್ಪ್ರೇರಣೆಯನ್ನು ಅಥವಾ ಅಪರಾಧ ಮಾಡುವ ಪ್ರಯತ್ನವನ್ನೂ ಒಳಗೊಳ್ಳುತ್ತದೆ.

*ವಿವರಣೆ II.*- ತಲೆಮರೆಸಿಕೊಂಡಿರುವ ಅಥವಾ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ 84ನೇ ಪ್ರಕರಣದ ಮೇರೆಗೆ ಜಾರಿಯಾದ ಉದ್ಘೋಷಣೆಯನ್ನು ಪಾಲಿಸಲು ವಿಫಲನಾಗಿರುವ ಆಪಾದಿತನ ಗೈರುಹಾಜರಿಯಲ್ಲಿ ನಡೆಸಲಾದ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳ ಅಧಿವಿಚಾರಣೆಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಜಂಟಿ ಅಧಿವಿಚಾರಣೆ ಎಂದು ಭಾವಿಸತಕ್ಕದ್ದು.

*ದೃಷ್ಟಾಂತಗಳು*

(ಎ) "ಸಿ"ಯ ಕೊಲೆಗಾಗಿ "ಎ" ಮತ್ತು "ಬಿ" ಇಬ್ಬರೂ ಜಂಟಿಯಾಗಿ ಅಧಿವಿಚಾರಣೆಗೆ ಗುರಿಯಾಗಿದ್ದಾರೆ. "ಬಿ" ಮತ್ತು ನಾನು "ಸಿ"ಯನ್ನು ಕೊಲೆ ಮಾಡಿದೆವು ಎಂದು "ಎ"ಯು ಹೇಳಿದ್ದು ರುಜುವಾತಾಗಿದೆ. ನ್ಯಾಯಾಲಯವು "ಬಿ"ಯ ವಿರುದ್ಧವಾಗಿ ಈ ತಪ್ಪೊಪ್ಪಿಗೆಯನ್ನು ಪರಿಗಣಿಸಬಹುದು.

(ಬಿ) "ಸಿ"ಯ ಕೊಲೆಗಾಗಿ "ಎ"ಯ ಅಧಿವಿಚಾರಣೆ ನಡೆದಿದೆ. "ಸಿ"ಯನ್ನು "ಎ" ಮತ್ತು "ಬಿ" ಕೊಲೆ ಮಾಡಿದರೆಂದು ಮತ್ತು "ಎ" ಹಾಗೂ ನಾನು "ಸಿ"ಯ ಕೊಲೆ ಮಾಡಿದೆವು" ಎಂದು "ಬಿ" ಯು ಹೇಳಿದನು, ಎಂದು ತೋರಿಸಲು ಸಾಕ್ಷ್ಯವಿದೆ. "ಬಿ"ಯನ್ನು ಜಂಟಿಯಾಗಿ ಅಧಿವಿಚಾರಣೆಗೆ ಗುರಿಪಡಿಸದಿರುವುದರಿಂದ ಈ ಹೇಳಿಕೆಯನ್ನು ನ್ಯಾಯಾಲಯವು "ಎ"ಯ ವಿರುದ್ಧವಾಗಿ ಪರಿಗಣನೆಗೆ ತೆಗೆದುಕೊಳ್ಳದಿರಬಹುದು.

**25. ಒಪ್ಪಿಗೆಗಳು ನಿರ್ಣಾಯಕ ರುಜುವಾತಲ್ಲವಾದರೂ, ವಿಬಂಧವಾಗಬಹುದು.-** ಒಪ್ಪಿಕೊಂಡ ವಿಷಯಗಳ ಬಗ್ಗೆ ಒಪ್ಪಿಗೆಗಳು ನಿರ್ಣಾಯಕ ರುಜುವಾತಾಗಿರುವುದಿಲ್ಲ; ಆದರೆ ಈ ಮುಂದಿನ ಉಪಬಂಧಗಳ ಮೇರೆಗೆ ಅವು ವಿಬಂಧಗಳಾಗಿ ಪ್ರವರ್ತಿಸಬಹುದು.

***ಸಾಕ್ಷಿದಾರರೆಂದು ಕರೆಯಲಾಗದ ವ್ಯಕ್ತಿಗಳ ಹೇಳಿಕೆಗಳು***

**26. ಮೃತನಾದ ಅಥವಾ ಪತ್ತೆಯಾಗದಿರುವ, ಇತ್ಯಾದಿ ವ್ಯಕ್ತಿಯು ಸುಸಂಬದ್ಧ ಸಂಗತಿಯ ಬಗ್ಗೆ ಮಾಡಿದ್ದ ಹೇಳಿಕೆಯು ಸುಸಂಬದ್ಧವಾಗುವ ಸಂದರ್ಭಗಳು.-** ಮೃತನಾದ ಅಥವಾ ಪತ್ತೆಯಾಗದಿರುವ ಅಥವಾ ಸಾಕ್ಷ್ಯ ಕೊಡಲು ಅಸಮರ್ಥನಾದ ವ್ಯಕ್ತಿಯು

ಅಥವಾ ನ್ಯಾಯಾಲಯದ ಅಭಿಪ್ರಾಯದಲ್ಲಿ ಮೊಕದ್ದಮೆಯ ಸನ್ನಿವೇಶಗಳಲ್ಲಿ ಯುಕ್ತವೆನಿಸದ ವಿಳಂಬ ಅಥವಾ ವೆಚ್ಚವಿಲ್ಲದೆ ಹಾಜರಾತಿಯನ್ನು ಪಡೆಯುವುದು ಸಾಧ್ಯವಿಲ್ಲದಂಥ ವ್ಯಕ್ತಿಯು ಸುಸಂಬದ್ಧ ಸಂಗತಿಗಳ ಬಗ್ಗೆ ಮಾಡಿದ್ದ ಲಿಖಿತ ಅಥವಾ ಮೌಖಿಕ ಹೇಳಿಕೆಗಳು, ಈ ಕೆಳಗಿನ ಸಂದರ್ಭಗಳಲ್ಲಿ ಅವು ತಾವಾಗಿಯೇ ಸುಸಂಬದ್ಧ ಸಂಗತಿಗಳಾಗಿರುತ್ತವೆ, ಎಂದರೆ:-

(ಎ) ಯಾರೇ ವ್ಯಕ್ತಿಯ ಮರಣದ ಕಾರಣವು ಪ್ರಶ್ನಿತವಾಗಿರುವ ಸಂದರ್ಭಗಳಲ್ಲಿ, ತನ್ನ ಮರಣದ ಕಾರಣಕ್ಕೆ ಸಂಬಂಧಪಟ್ಟಂತೆ ಅಥವಾ ತನ್ನ ಮರಣದಲ್ಲಿ ಪರಿಣಮಿಸಿದ ವ್ಯವಹಾರದ ಯಾವುದೇ ಸನ್ನಿವೇಶಕ್ಕೆ ಸಂಬಂಧಪಟ್ಟಂತೆ ಆ ವ್ಯಕ್ತಿಯು ಯಾವುದೇ ಹೇಳಿಕೆಯನ್ನು ಕೊಟ್ಟಾಗ, ಹೇಳಿಕೆಗಳನ್ನು ಕೊಟ್ಟ ವ್ಯಕ್ತಿಯು ಅವುಗಳನ್ನು ಕೊಟ್ಟಾಗ ಮರಣವನ್ನು ನಿರೀಕ್ಷಿಸಿರಲಿ, ಇಲ್ಲದಿರಲಿ ಮತ್ತು ಅವನ ಮರಣದ ಕಾರಣದ ಪ್ರಶ್ನೆಯು ಉದ್ಭವಿಸಿದ ವ್ಯವಹರಣೆಯು ಯಾವ ಸ್ವರೂಪದ್ದೇ ಆಗಿರಲಿ, ಅಂಥ ಹೇಳಿಕೆಗಳು ಸುಸಂಬದ್ಧವಾಗಿರುತ್ತವೆ.

(ಬಿ) ಅಂಥ ವ್ಯಕ್ತಿಯು ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಆ ಹೇಳಿಕೆಯನ್ನು ಮಾಡಿರುವಾಗ ಮತ್ತು ನಿರ್ದಿಷ್ಟವಾಗಿ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಅಥವಾ ವೃತ್ತಿ ನಿಮಿತ್ತವಾದ ಕರ್ತವ್ಯಗಳನ್ನು ನಿರ್ವಹಿಸುವಾಗ ಇಡಲಾದ ಪುಸ್ತಕಗಳಲ್ಲಿ ಅವನು ಮಾಡಿದ ಯಾವುದೇ ನಮೂದನೆ ಅಥವಾ ಜ್ಞಾಪನೆಯನ್ನು ಅದು ಒಳಗೊಂಡಿರುವಾಗ ಅಥವಾ ಹಣದ, ಸರಕುಗಳ, ಭದ್ರತಾಪತ್ರಗಳ ಅಥವಾ ಯಾವುದೇ ಬಗೆಯ ಸ್ವತ್ತಿನ ಸ್ವೀಕೃತಿಯ ಬಗ್ಗೆ ಅವನು ಬರೆದ ಅಥವಾ ಸಹಿ ಹಾಕಿದ ತಲುಪೊಪ್ಪಿಗೆಯನ್ನು; ಅಥವಾ ಅವನು ಬರೆದ ಅಥವಾ ಸಹಿ ಹಾಕಿದ ವಾಣಿಜ್ಯ ವ್ಯವಹಾರದಲ್ಲಿ ಉಪಯೋಗಿಸಿದ ದಸ್ತಾವೇಜನ್ನು ಅಥವಾ ಅವನಿಂದ ಸಾಮಾನ್ಯವಾಗಿ ದಿನಾಂಕಿತವಾದ, ಬರೆಯಲಾದ ಅಥವಾ ಸಹಿ ಹಾಕಲಾದ ಪತ್ರದ ಅಥವಾ ಇತರ ದಸ್ತಾವೇಜಿನ ದಿನಾಂಕವನ್ನು ಒಳಗೊಂಡಿರುವಾಗ;

(ಸಿ) ಹೇಳಿಕೆಯು ಅದನ್ನು ಮಾಡುವ ವ್ಯಕ್ತಿಯ ಹಣಕಾಸಿನ ಅಥವಾ ಒಡೆತನದ ಹಿತಾಸಕ್ತಿಯ ವಿರುದ್ಧವಾಗಿರುವಾಗ ಅಥವಾ ಅದು ನಿಜವಾಗಿದ್ದರೆ, ಅದು ಅವನನ್ನು ಆಪರಾಧಿಕ ಪ್ರಾಸಿಕ್ಯೂಷನ್ನಿಗೆ ಅಥವಾ ನಷ್ಟಭರ್ತಿಯ ದಾವೆಗೆ ಗುರಿಪಡಿಸುತ್ತಿದ್ದಾಗ ಅಥವಾ ಗುರಿಪಡಿಸಬಹುದಾಗಿದ್ದಾಗ;

(ಡಿ) ಯಾವುದೇ ಸಾರ್ವಜನಿಕ ಹಕ್ಕು ಅಥವಾ ರೂಢಿ ಅಥವಾ ಸಾರ್ವಜನಿಕ ವಿಷಯ ಅಥವಾ ಸಾಮಾನ್ಯ ಹಿತಾಸಕ್ತಿಯ ಅಸ್ತಿತ್ವದ ಬಗ್ಗೆ ಅದರ ಅಸ್ತಿತ್ವವು ಇದ್ದುದಾದರೆ, ಅವನಿಗೆ ಅದು ಗೊತ್ತಿರುವ ಸಂಭವವಿದ್ದಾಗ ಅಂಥ ವ್ಯಕ್ತಿಯು ಅಭಿಪ್ರಾಯವನ್ನು ಅಂಥ ಹೇಳಿಕೆಯು ವ್ಯಕ್ತಪಡಿಸುವಾಗ ಮತ್ತು ಯಾವುದೇ ಅಂಥ ಹಕ್ಕು, ರೂಢಿ ಅಥವಾ ವಿಷಯದ ಬಗ್ಗೆ ಯಾವುದೇ ವಿವಾದವು ಉದ್ಭವಿಸುವ ಮುಂಚೆ ಅಂಥ ಹೇಳಿಕೆಯನ್ನು ಮಾಡಿದಾಗ;

(ಇ) ಹೇಳಿಕೆಯನ್ನು ಮಾಡುವ ವ್ಯಕ್ತಿಯು, ಯಾರ ರಕ್ತಸಂಬಂಧ, ವಿವಾಹ ಸಂಬಂಧ ಅಥವಾ ದತ್ತಕ ಸಂಬಂಧವನ್ನು ತಿಳಿದಿರಲು ವಿಶೇಷ ಮಾರ್ಗವನ್ನು ಹೊಂದಿದ್ದನೋ ಅವರ ರಕ್ತಸಂಬಂಧ, ವಿವಾಹ ಸಂಬಂಧ ಅಥವಾ ದತ್ತಕ ಸಂಬಂಧದ ಅಸ್ತಿತ್ವಕ್ಕೆ ಆ ಹೇಳಿಕೆಯು ಸಂಬಂಧಿಸಿದಾಗ ಮತ್ತು ವಿವಾದದಲ್ಲಿರುವ ಪ್ರಶ್ನೆಯು ಉದ್ಭವಿಸುವುದಕ್ಕೆ ಮುಂಚೆ ಆ ಹೇಳಿಕೆಯನ್ನು ಮಾಡಿದಾಗ;

(ಎಫ್) ಮೃತ ವ್ಯಕ್ತಿಗಳ ನಡುವಣ ರಕ್ತಸಂಬಂಧ, ವಿವಾಹ ಸಂಬಂಧ ಅಥವಾ ದತ್ತಕ ಸಂಬಂಧದಿಂದ ಇರುವ ಯಾವುದೇ ಬಂಧುತ್ವದ ಅಸ್ತಿತ್ವಕ್ಕೆ ಆ ಹೇಳಿಕೆಯು ಸಂಬಂಧಿಸಿದಾಗ ಮರಣ ಶಾಸನದಲ್ಲಿ ಅಥವಾ ಅಂಥ ಮೃತ ವ್ಯಕ್ತಿಗೆ ಸೇರಿದ್ದ ಆ ಕುಟುಂಬದ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಲಿಖಿತದಲ್ಲಿ ಅಥವಾ ಯಾವುದೇ ಕುಟುಂಬ ವಂಶಾವಳಿಯಲ್ಲಿ ಅಥವಾ ಸಮಾಧಿಕಲ್ಲಿನಲ್ಲಿ, ಕುಟುಂಬ ಭಾವಚಿತ್ರದಲ್ಲಿ ಅಥವಾ ಅಂಥ ಹೇಳಿಕೆಯನ್ನು ಸಾಮಾನ್ಯವಾಗಿ ಯಾವ ವಸ್ತುಗಳ ಮೇಲೆ ಮಾಡಲಾಗುತ್ತದೆಯೋ ಅಂಥ ಯಾವುದೇ ವಸ್ತುವಿನ ಮೇಲೆ ಆ ಹೇಳಿಕೆಯನ್ನು ಮಾಡಿದಾಗ ಮತ್ತು ವಿವಾದದಲ್ಲಿರುವ ಪ್ರಶ್ನೆಯು ಉದ್ಭವವಾಗುವುದಕ್ಕೆ ಮುಂಚೆ ಅದನ್ನು ಮಾಡಿದಾಗ;

(ಜಿ) ಅಂಥ ಹೇಳಿಕೆಯು, 11ನೇ ಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದಂಥ ಯಾವುದೇ ವ್ಯವಹಾರಕ್ಕೆ ಸಂಬಂಧಿಸಿರುವ ಯಾವುದೇ ಲಿಖಿತ, ಮರಣಶಾಸನ ಅಥವಾ ಇತರ ಯಾವುದೇ ದಸ್ತಾವೇಜಿನಲ್ಲಿ ಒಳಗೊಂಡಿರುವಾಗ;

(ಹೆಚ್) ಹೇಳಿಕೆಯನ್ನು ಅನೇಕ ವ್ಯಕ್ತಿಗಳು ಮಾಡಿದಾಗ ಮತ್ತು ಪ್ರಶ್ನಿತವಾದ ವಿಷಯಕ್ಕೆ ಸುಸಂಬದ್ಧವಾಗಿ ತಮ್ಮ ಭಾವನೆಗಳನ್ನು ಅಥವಾ ಅಭಿಪ್ರಾಯಗಳನ್ನು ಅಭಿವ್ಯಕ್ತಗೊಳಿಸಿದಾಗ.

*ದೃಷ್ಟಾಂತಗಳು*

(ಎ) “ಬಿ” ಯಿಂದ “ಎ”ಯು ಕೊಲೆಯಾದಳೇ ಎಂಬುದು ಪ್ರಶ್ನೆ; ಅಥವಾ “ಎ”ಯ ಮೇಲೆ ಅತ್ಯಾಚಾರ ನಡೆಸಿದ ಪ್ರಸಂಗದಲ್ಲಿ ಉಂಟಾದ ಗಾಯಗಳಿಂದ ಅವಳು ಮೃತಪಟ್ಟಳು, ಅವಳು “ಬಿ” ಯಿಂದ ಅತ್ಯಾಚಾರಕ್ಕೆ ಗುರಿಯಾದಳೇ ಎಂಬುದು ಪ್ರಶ್ನೆ; ಅಥವಾ “ಎ”ಯ ವಿಧುರನು “ಬಿ”ಯ ವಿರುದ್ಧ ದಾವೆ ಹೂಡಬಹುದಾದಂಥ ಸನ್ನಿವೇಶಗಳಲ್ಲಿ “ಬಿ”ಯು “ಎ” ಳನ್ನು ಕೊಲೆ ಮಾಡಿದನೇ ಎಂಬುದು ಪ್ರಶ್ನೆ. ಅನುಕ್ರಮವಾಗಿ ಪರ್ಯಾಲೋಚನೆಯಲ್ಲಿರುವ ಕೊಲೆಯ, ಅತ್ಯಾಚಾರದ ಮತ್ತು ಕ್ರಮಾರ್ಹ ದೋಷದ ಬಗ್ಗೆ ಅವನ ಅಥವಾ ಅವಳ ಮರಣದ ಕಾರಣಕ್ಕೆ ಸಂಬಂಧಿಸಿ “ಎ”ಯು ಮಾಡಿದ ಹೇಳಿಕೆಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ;

(ಬಿ) “ಎ”ಯು ಹುಟ್ಟಿದ ದಿನಾಂಕದ ಬಗ್ಗೆ ಉದ್ಭವಿಸಿರುವ ಪ್ರಶ್ನೆ. ಒಬ್ಬ ಮೃತ ಶಸ್ತ್ರ ಚಿಕಿತ್ಸಕನು ತನ್ನ ವ್ಯವಹಾರ ಕ್ರಮದಲ್ಲಿ ನಿಯತವಾಗಿ ಇಟ್ಟುಕೊಂಡು ಬಂದ ದಿನಚರಿಯಲ್ಲಿ, ಒಂದು ನಿರ್ದಿಷ್ಟ ದಿನ ಅವನು “ಎ”ಯ ತಾಯಿಗೆ ಚಿಕಿತ್ಸೆ ನಡೆಸಿದನೆಂದು ಮತ್ತು ಅವಳು ಒಂದು ಗಂಡು ಮಗುವನ್ನು ಹೆತ್ತಳೆಂದು ಮಾಡಿದ ನಮೂದನೆಯು ಸುಸಂಬದ್ಧ ಸಂಗತಿಯಾಗಿರುತ್ತದೆ;

(ಸಿ) ಒಂದು ನಿರ್ದಿಷ್ಟ ದಿನ “ಎ”ಯು ನಾಗಪುರದಲ್ಲಿ ಇದ್ದನೇ ಎಂಬುದು ಪ್ರಶ್ನೆ; ಒಬ್ಬ ಮೃತ ಸಲಹಾ ವಕೀಲನು ತನ್ನ ವ್ಯವಹಾರ ಕ್ರಮದಲ್ಲಿ ನಿಯತವಾಗಿ ಇಟ್ಟುಕೊಂಡು ಬಂದ ದಿನಚರಿಯಲ್ಲಿ ಒಂದು ನಿರ್ದಿಷ್ಟ ದಿನ, ತಾನು ನಿರ್ದಿಷ್ಟ ವ್ಯವಹಾರದ ಬಗ್ಗೆ ಸಲಹಾ ವಕೀಲನೊಂದಿಗೆ ಸಮಾಲೋಚಿಸುವ ಉದ್ದೇಶವಾಗಿ ನಾಗಪುರದಲ್ಲಿ “ಎ”ಯೊಡನೆ ಇದ್ದನೆಂದು ಬರೆದಿರುವ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಡಿ) ಒಂದು ನಿರ್ದಿಷ್ಟ ದಿನ ಮುಂಬೈ ಬಂದರಿನಿಂದ ಒಂದು ಹಡಗು ಪ್ರಯಾಣ ಮಾಡಿತೋ ಎಂಬುದು ಪ್ರಶ್ನೆ. ಹಡಗನ್ನು ಬಾಡಿಗೆಗೆ ಪಡೆದಿದ್ದ ವ್ಯಾಪಾರಿಯ ಫರ್ಮಿನ ಒಬ್ಬ ಮೃತ ಸದಸ್ಯನು, ವ್ಯಾಪಾರ ಸಂಬಂಧದಲ್ಲಿ ಸರಕನ್ನು ಕಳುಹಿಸಿಕೊಡಲಾದ ಚೆನ್ನೈನಲ್ಲಿರುವ ತಮ್ಮ ಆ ಹಡಗು ಗೊತ್ತಾದ ದಿನದಂದು ಮುಂಬೈ ಬಂದರಿನಿಂದ ಪ್ರಯಾಣ ಮಾಡಿತೆಂದು ಸಂಪರ್ಕದಾರನಿಗೆ ತಿಳಿಸಿ ಬರೆದ ಪತ್ರವು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಇ) ಒಂದು ವಿಶಿಷ್ಟ ಭೂಮಿಯ ಬಗ್ಗೆ “ಎ”ಗೆ ಬಾಡಿಗೆಯನ್ನು ಕೊಟ್ಟಿದೆಯೇ ಎಂಬುದು ಪ್ರಶ್ನೆ. “ಎ”ನ ಪರವಾಗಿ ಬಾಡಿಗೆಯನ್ನು ಪಡೆದಿದ್ದನೆಂದು ಮತ್ತು ಅದನ್ನು “ಎ”ಯ ಆದೇಶಕ್ಕನುಸಾರವಾಗಿ ಇಟ್ಟುಕೊಂಡಿದ್ದನೆಂದು “ಎ”ಯ ಮೃತ ಏಜೆಂಟನು ಬರೆದ ಪತ್ರವು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಎಫ್) “ಎ” ಮತ್ತು “ಬಿ” ಕಾನೂನುಸಮ್ಮತವಾಗಿ ವಿವಾಹ ಮಾಡಿಕೊಂಡಿದ್ದರೇ ಎಂಬುದು ಪ್ರಶ್ನೆ. ವಿವಾಹ ನಡೆಸುವುದು ಅಪರಾಧವಾಗಬಹುದಾದಂಥ ಸನ್ನಿವೇಶಗಳಲ್ಲಿ ಅವರ ವಿವಾಹವನ್ನು ತಾನು ನಡೆಸಿದ್ದೆನೆಂದು ಮೃತ ಪಾದ್ರಿಯು ಕೊಟ್ಟ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಜಿ) ಪತ್ತೆ ಮಾಡಲು ಸಾಧ್ಯವಿಲ್ಲದ ವ್ಯಕ್ತಿಯಾದ “ಎ”ಯು ಒಂದು ನಿರ್ದಿಷ್ಟ ದಿನದಂದು ಒಂದು ಪತ್ರವನ್ನು ಬರೆದಿದ್ದನೇ ಎಂಬುದು ಪ್ರಶ್ನೆ. ಅವನು ಬರೆದ ಪತ್ರದಲ್ಲಿ ಆ ದಿನವನ್ನು ನಮೂದಿಸಲಾಗಿತ್ತೆಂಬುದು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಹೆಚ್) ಒಂದು ಹಡಗು ಒಡೆದುದಕ್ಕೆ ಕಾರಣವೇನು ಎಂಬುದು ಪ್ರಶ್ನೆ. ಹಾಜರುಪಡಿಸಲು ಸಾಧ್ಯವಿಲ್ಲದ ಹಡಗಿನ ನೌಕಾಧಿಕಾರಿಯು ಮಾಡಿದ ಪ್ರತಿಭಟನೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಐ) ಒಂದು ನಿರ್ದಿಷ್ಟ ರಸ್ತೆಯು ಸಾರ್ವಜನಿಕ ಮಾರ್ಗವೇ ಎಂಬುದು ಪ್ರಶ್ನೆ. ಗ್ರಾಮದ ಮೃತ ಮುಖ್ಯಸ್ಥನಾಗಿದ್ದ ‘ಎ’ಯು, ಆ ರಸ್ತೆಯು ಸಾರ್ವಜನಿಕ ಮಾರ್ಗವಾಗಿತ್ತೆಂದು ಮಾಡಿದ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಜೆ) ಒಂದು ನಿರ್ದಿಷ್ಟ ಮಾರುಕಟ್ಟೆಯಲ್ಲಿ ಒಂದು ನಿರ್ದಿಷ್ಟ ದಿನದಂದು ಧಾನ್ಯದ ಬೆಲೆ ಎಷ್ಟಿತ್ತೆಂಬುದು ಪ್ರಶ್ನೆ. ಒಬ್ಬ ಮೃತ ವ್ಯಾಪಾರಿಯು ತನ್ನ ವ್ಯಾಪಾರದ ಸಾಮಾನ್ಯ ಕ್ರಮದಲ್ಲಿ ಬೆಲೆಯ ಬಗ್ಗೆ ಮಾಡಿದ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತವೆ.

(ಕೆ) ಮೃತ ‘ಎ’ಯು ‘ಬಿ’ಯ ತಂದೆಯೇ ಎಂಬುದು ಪ್ರಶ್ನೆ. ‘ಬಿ’ಯು ತನ್ನ ಮಗನೆಂದು ‘ಎ’ಯು ಮಾಡಿದ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತವೆ.

(ಎಲ್) ‘ಎ’ಯ ಜನ್ಮ ದಿನಾಂಕ ಯಾವುದು ಎಂಬುದು ಪ್ರಶ್ನೆ. ಒಂದು ನಿರ್ದಿಷ್ಟ ದಿನದಂದು ‘ಎ’ಯ ಜನ್ಮವಾಯಿತೆಂದು ‘ಎ’ಯ ಮೃತ ತಂದೆಯೇ ತನ್ನ ಒಬ್ಬ ಸ್ನೇಹಿತನಿಗೆ ಬರೆದ ಪತ್ರವು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಎಂ) ‘ಎ’ ಮತ್ತು ‘ಬಿ’ಯ ವಿವಾಹವಾಗಿತ್ತೇ ಮತ್ತು ಆಗಿದ್ದರೆ ಯಾವಾಗ ಎಂಬುದು ಪ್ರಶ್ನೆ. ಒಂದು ಗೊತ್ತಾದ ದಿನದಂದು ತನ್ನ ಮಗಳ ವಿವಾಹವು ‘ಎ’ ಯೊಂದಿಗೆ ಜರುಗಿತೆಂದು ‘ಬಿ’ಯ ಳ ಮೃತ ತಂದೆಯಾದ ‘ಸಿ’ಯು ತನ್ನ ಜ್ಞಾಪನ ಪುಸ್ತಕದಲ್ಲಿ ಮಾಡಿದ ನಮೂದನೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

(ಎನ್) ಒಂದು ಅಂಗಡಿಯ ಕಿಟಕಿಯಲ್ಲಿ ಕಾಣುವಂತೆ ಇಟ್ಟ ಒಂದು ವರ್ಣ ವ್ಯಂಗ್ಯ ಚಿತ್ರದಲ್ಲಿ ತನ್ನ ಬಗ್ಗೆ ವ್ಯಕ್ತಪಡಿಸಿದ ಅವಮಾನಕ್ಕಾಗಿ ‘ಎ’ಯು ‘ಬಿ’ಯ ವಿರುದ್ಧ ದಾವೆ ಹೂಡುತ್ತಾನೆ. ವ್ಯಂಗ್ಯ ಚಿತ್ರದ ಸಾದೃಶ್ಯ ಮತ್ತು ಅದರ ಅವಮಾನಕರ ಸ್ವರೂಪ ಇವುಗಳ ಬಗ್ಗೆ ಪ್ರಶ್ನೆ ಉದ್ಭವಿಸಿದೆ, ಈ ಅಂಶಗಳ ಬಗ್ಗೆ ಪ್ರೇಕ್ಷಕ ಗುಂಪಿನವರ ಟೀಕೆಗಳನ್ನು ರುಜುವಾತುಪಡಿಸಬಹುದು.

**27. ಒಂದು ನಿರ್ದಿಷ್ಟ ಸಾಕ್ಷ್ಯದಲ್ಲಿ ಹೇಳಿದ ಸಂಗತಿಗಳ ಸತ್ಯತೆಯನ್ನು ತರುವಾಯದ ವ್ಯವಹರಣೆಯಲ್ಲಿ ರುಜುವಾತುಪಡಿಸಲು ಆ ಸಾಕ್ಷ್ಯದ ಸುಸಂಬದ್ಧತೆ.-** ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ಅದನ್ನು ತೆಗೆದುಕೊಳ್ಳಲು ಕಾನೂನಿನ ಮೂಲಕ ಅಧಿಕೃತನಾದ ಯಾರೇ ವ್ಯಕ್ತಿಯ ಮುಂದೆ ಸಾಕ್ಷಿದಾರನು ಕೊಟ್ಟ ಸಾಕ್ಷ್ಯವು, ಆ ತರುವಾಯದ ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ಅದೇ ನ್ಯಾಯಿಕ ವ್ಯವಹರಣೆಯ ಅನಂತರದ ಹಂತದಲ್ಲಿ, ಸಾಕ್ಷಿಯು ಮೃತನಾಗಿದ್ದಾಗ ಅಥವಾ ದೊರೆಯದಿರುವಾಗ ಅಥವಾ ಸಾಕ್ಷ್ಯ ಕೊಡಲು ಅಸಮರ್ಥನಾಗಿರುವಾಗ ಅಥವಾ ಎದುರು ಪಕ್ಷದವರು ಅವನು ಬರದಂತೆ ಮಾಡಿದಾಗ ಅಥವಾ ಮೊಕದ್ದಮೆಯ ಸನ್ನಿವೇಶಗಳಲ್ಲಿ, ನ್ಯಾಯಾಲಯವು ಅಸಮಂಜಸವೆಂದು ಪರಿಗಣಿಸುವಂಥ ವಿಳಂಬಮಾಡದೆ ಅಥವಾ ವೆಚ್ಚಮಾಡದೆ ಅವನ ಹಾಜರಾತಿಯನ್ನು ಪಡೆಯುವುದು ಸಾಧ್ಯವಿಲ್ಲದಿದ್ದಾಗ, ಅದು ನಿರೂಪಿಸುವ ಸಂಗತಿಗಳ ಸತ್ಯತೆಯನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಸುಸಂಬದ್ಧವಾಗಿರುತ್ತದೆ:

ಪರಂತು, ವ್ಯವಹರಣೆಯು ಅದೇ ಪಕ್ಷಕಾರರ ನಡುವೆ ಅಥವಾ ಅವರ ಹಿತಾಸಕ್ತಿಯ ಪ್ರತಿನಿಧಿಗಳ ನಡುವೆ ಇದ್ದಿರಬೇಕು; ಮೊದಲನೇ ವ್ಯವಹರಣೆಯಲ್ಲಿ ಎದುರು ಪಕ್ಷಕಾರನು ಪಾಟೀ-ಸವಾಲು ಮಾಡುವ ಹಕ್ಕನ್ನು ಮತ್ತು ಅದಕ್ಕೆ ಅವಕಾಶವನ್ನು ಪಡೆದಿರಬೇಕು; ವಿವಾದಿತ ಪ್ರಶ್ನೆಗಳು ಮೊದಲನೇ ಮತ್ತು ಎರಡನೇ ವ್ಯವಹರಣೆಗಳಲ್ಲಿ ಬಹುಮಟ್ಟಿಗೆ ಒಂದೇ ಆಗಿರಬೇಕು.

*ವಿವರಣೆ.-* ಒಂದು ಆಪರಾಧಿಕ ಅಧಿವಿಚಾರಣೆಯನ್ನು ಅಥವಾ ವಿಚಾರಣೆಯನ್ನು ಈ ಪ್ರಕರಣದ ಅರ್ಥದಲ್ಲಿ ಪ್ರಾಸಿಕ್ಯೂಟರನ ಮತ್ತು ಆಪಾದಿತನ ನಡುವಣ ವ್ಯವಹರಣೆಯೆಂದು ಭಾವಿಸತಕ್ಕದ್ದು.

***ವಿಶೇಷ ಸನ್ನಿವೇಶಗಳಲ್ಲಿ ಮಾಡಿದ ಹೇಳಿಕೆಗಳು***

**28. ಲೆಕ್ಕದ ಪುಸ್ತಕಗಳಲ್ಲಿದ್ದ ನಮೂದುಗಳು ಯಾವಾಗ ಸುಸಂಬದ್ಧ.-** ವ್ಯವಹಾರ ಕ್ರಮದಲ್ಲಿ ನಿಯತವಾಗಿ ಇಡಲಾದ ವಿದ್ಯುನ್ಮಾನ ನಮೂನೆಯಲ್ಲಿ ಇಟ್ಟುಕೊಂಡುಬಂದ ನಮೂದುಗಳು ಸೇರಿದಂತೆ ಲೆಕ್ಕ ಪುಸ್ತಕಗಳಲ್ಲಿನ ನಮೂದುಗಳು, ನ್ಯಾಯಾಲಯವು ವಿಚಾರಣೆ ನಡೆಸಬೇಕಾದ ವಿಷಯಕ್ಕೆ ಅವು ಸಂಬಂಧಿಸಿರುವಾಗ, ಸುಸಂಬದ್ಧವಾಗಿರುತ್ತವೆ; ಆದರೆ, ಯಾರೇ ವ್ಯಕ್ತಿಯನ್ನು ಹೊಣೆಗಾರನನ್ನಾಗಿ ಮಾಡಲು ಅಂಥ ಹೇಳಿಕೆಗಳಷ್ಟೇ ಸಾಕಷ್ಟು ಸಾಕ್ಷ್ಯವಾಗುವುದಿಲ್ಲ.

*ದೃಷ್ಟಾಂತ*

ಓ(ಎ)ಯು ಔ(ಬಿ)ಯ ಮೇಲೆ ಒಂದು ಸಾವಿರ ರೂಪಾಯಿಗಳಿಗಾಗಿ ದಾವೆ ಹೂಡುತ್ತಾನೆ ಮತ್ತು ಈ ಮೊತ್ತಕ್ಕಾಗಿ ತನಗೆ ಔ(ಬಿ)ಯು ಋಣಿಯಾಗಿದ್ದಾನೆಂಬುದನ್ನು ತೋರಿಸುವ ತನ್ನ ಲೆಕ್ಕ ಪುಸ್ತಕಗಳಲ್ಲಿನ ನಮೂದುಗಳನ್ನು ತೋರಿಸುತ್ತಾನೆ. ಈ ನಮೂದುಗಳು ಸುಸಂಬದ್ಧವಾಗಿರುತ್ತವೆ; ಆದರೆ ಬೇರೆ ಸಾಕ್ಷ್ಯವಿಲ್ಲದೆ ಈ ಋಣವನ್ನು ರುಜುವಾತುಪಡಿಸಲು ಅವು ಸಾಕಾಗುವುದಿಲ್ಲ.

**29. ಕರ್ತವ್ಯ ಪಾಲನೆಯಲ್ಲಿ ಸಾರ್ವಜನಿಕ ದಾಖಲೆ ಅಥವಾ ವಿದ್ಯುನ್ಮಾನ ದಾಖಲೆಯಲ್ಲಿ ಮಾಡಿದ ನಮೂದುಗಳ ಸುಸಂಬದ್ಧತೆ.-** ಒಂದು ವಿವಾದಿತ ಸಂಗತಿಯನ್ನು ಅಥವಾ ಸುಸಂಬದ್ಧ ಸಂಗತಿಯನ್ನು ನಿರೂಪಿಸಿ ಯಾವುದೇ ಸಾರ್ವಜನಿಕ ಅಥವಾ ಇತರ ಸರ್ಕಾರಿ ಪುಸ್ತಕದಲ್ಲಿ, ರಿಜಿಸ್ಟರಿನಲ್ಲಿ ಅಥವಾ ದಾಖಲೆ ಅಥವಾ ವಿದ್ಯುನ್ಮಾನ ದಾಖಲೆಯಲ್ಲಿ ಒಬ್ಬ ಲೋಕ ನೌಕರನು ತನ್ನ ಸರ್ಕಾರಿ ಕರ್ತವ್ಯ ನಿರ್ವಹಣೆಯಲ್ಲಿ ಮಾಡಿದ ಅಥವಾ ಅಂಥ ಪುಸ್ತಕ, ರಿಜಿಸ್ಟರು ಅಥವಾ ದಾಖಲೆ ಅಥವಾ ವಿದ್ಯುನ್ಮಾನ ದಾಖಲೆಯನ್ನು ಇಡಲು ಆ ದೇಶದ ಕಾನೂನು ಮೇರೆಗೆ ವಿಶೇಷವಾಗಿ ಬದ್ಧಗೊಳಿಸಿದ್ದು ತನ್ನ ಕರ್ತವ್ಯ ನಿರ್ವಹಣೆಯ ಕ್ರಮದಲ್ಲಿ ಇತರ ಯಾರೇ ವ್ಯಕ್ತಿಯು ಮಾಡಿದ ನಮೂದು ಸ್ವಯಂ ಸುಸಂಬದ್ಧ ಸಂಗತಿಯಾಗಿರುತ್ತದೆ.

**30. ಭೂಪಟ, ಚಿತ್ರಪಟ ಮತ್ತು ನಕ್ಷೆಗಳಲ್ಲಿರುವ ಹೇಳಿಕೆಗಳ ಸುಸಂಬದ್ಧತೆ.-** ಸಾರ್ವಜನಿಕರಿಗೆ ಸಾಮಾನ್ಯವಾಗಿ ಮಾರಾಟಕ್ಕಿಡಲಾಗಿರುವ ಪ್ರಕಟಿತ ಭೂಪಟಗಳಲ್ಲಿ ಅಥವಾ ಚಿತ್ರಪಟಗಳಲ್ಲಿ ಅಥವಾ ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧಿಕಾರದ ಮೇರೆಗೆ ರಚಿಸಲಾದ ಭೂಪಟಗಳಲ್ಲಿ ಅಥವಾ ನಕ್ಷೆಗಳಲ್ಲಿ ಅಂಥ ಭೂಪಟಗಳಲ್ಲಿ, ಚಿತ್ರಪಟಗಳಲ್ಲಿ ಅಥವಾ ನಕ್ಷೆಗಳಲ್ಲಿ ಸಾಮಾನ್ಯವಾಗಿ ತೋರಿಸಲಾದ ಅಥವಾ ಹೇಳಲಾದ ವಿಷಯಗಳಿಗೆ ಸಂಬಂಧಿಸಿದಂತೆ ಮಾಡಿದ ವಿವಾದಿತ ಸಂಗತಿಗಳ ಅಥವಾ ಸುಸಂಬದ್ಧ ಸಂಗತಿಗಳ ಹೇಳಿಕೆಗಳು ಸ್ವಯಂ ಸುಸಂಬದ್ಧ ಸಂಗತಿಗಳಾಗಿರುತ್ತವೆ.

**31. ಕೆಲವು ಅಧಿನಿಯಮಗಳಲ್ಲಿ ಅಥವಾ ಅಧಿಸೂಚನೆಗಳಲ್ಲಿ ಇರುವ ಸಾರ್ವಜನಿಕ ಸ್ವರೂಪದ ಸಂಗತಿಯ ಬಗೆಗಿನ ಹೇಳಿಕೆಯ ಸುಸಂಬದ್ಧತೆ.-** ಸಾರ್ವಜನಿಕ ಸ್ವರೂಪದ ಯಾವುದೇ ಸಂಗತಿಯ ಅಸ್ತಿತ್ವದ ಬಗ್ಗೆ ನ್ಯಾಯಾಲಯವು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಯಾವುದೇ ಕೇಂದ್ರ ಅಧಿನಿಯಮ ಅಥವಾ ರಾಜ್ಯ ಅಧಿನಿಯಮದಲ್ಲಿ ಇರುವ ಅಥವಾ ಸಂಬಂಧಪಟ್ಟ ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿರುವ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಸೂಚನೆಯಲ್ಲಿ ಇರುವ ಅಥವಾ ಅಂಥ ರಾಜಪತ್ರ ಎಂದು ತಾತ್ಪರ್ಯವಾಗುವ ಯಾವುದೇ ಮುದ್ರಿತ ಪತ್ರದಲ್ಲಿ ಅಥವಾ ವಿದ್ಯುನ್ಮಾನ ಅಥವಾ ಡಿಜಿಟಲ್ ರೂಪದಲ್ಲಿ ಪ್ರಕಟಿಸಿರುವ ಯಾವುದೇ ಹೇಳಿಕೆಯು ಸುಸಂಬದ್ಧ ಸಂಗತಿಯಾಗಿರುತ್ತದೆ.

**32. ವಿದ್ಯುನ್ಮಾನ ಅಥವಾ ಡಿಜಿಟಲ್ ರೂಪವನ್ನು ಒಳಗೊಂಡಂತೆ ಕಾನೂನು ಗ್ರಂಥಗಳಲ್ಲಿ ಇರುವ ಯಾವುದೇ ಕಾನೂನನ್ನು ಕುರಿತ ಹೇಳಿಕೆಗಳ ಸುಸಂಬದ್ಧತೆ.-** ಯಾವುದೇ ದೇಶದ ಒಂದು ಕಾನೂನಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಅಂಥ ದೇಶದ ಸರ್ಕಾರದ ಅಧಿಕಾರದ ಮೇರೆಗೆ ವಿದ್ಯುನ್ಮಾನ ಅಥವಾ ಡಿಜಿಟಲ್ ರೂಪದಲ್ಲಿ ಒಳಗೊಂಡಂತೆ ಮುದ್ರಿತವಾಗಿದೆ ಅಥವಾ ಪ್ರಕಟವಾಗಿದೆ ಎಂದು ತಾತ್ಪರ್ಯವಾಗುವ ಪುಸ್ತಕದಲ್ಲಿ ಒಳಗೊಂಡಿರುವ ಅಂಥ ಕಾನೂನಿನ ಮತ್ತು ಯಾವುದೇ ಅಂಥ ಕಾನೂನನ್ನು ಒಳಗೊಂಡಿರುವ ಯಾವುದೇ ಹೇಳಿಕೆಯು ಮತ್ತು ವಿದ್ಯುನ್ಮಾನ ಅಥವಾ ಡಿಜಿಟಲ್ ರೂಪವನ್ನು ಒಳಗೊಂಡಂತೆ ಪುಸ್ತಕದಲ್ಲಿರುವ ಅಂಥ ದೇಶದ ನ್ಯಾಯಾಲಯಗಳ ತೀರ್ಪುಗಳ ವರದಿಯೆಂದು ತಾತ್ಪರ್ಯವಾಗುವ ಯಾವುದೇ ವರದಿಯು ಸುಸಂಬದ್ಧವಾಗಿರುತ್ತದೆ.

***ಹೇಳಿಕೆಯ ಯಾವ ಭಾಗವನ್ನು ರುಜುವಾತು ಮಾಡಬೇಕು***

**33. ಹೇಳಿಕೆಯು ಸಂಭಾಷಣೆಯ, ದಸ್ತಾವೇಜಿನ, ವಿದ್ಯುನ್ಮಾನ ದಾಖಲೆಯ, ಪುಸ್ತಕದ ಅಥವಾ ಸರಣಿ ಪತ್ರಗಳ ಅಥವಾ ಕಾಗದ ಪತ್ರಗಳ ಭಾಗವಾಗಿರುವಾಗ, ಯಾವ ಸಾಕ್ಷ್ಯವನ್ನು ನೀಡಬೇಕು.-** ಯಾವ ಹೇಳಿಕೆಯ ಬಗ್ಗೆ ಸಾಕ್ಷ್ಯವನ್ನು ನೀಡಲಾಗಿದೆಯೋ,

ಆ ಯಾವುದೇ ಹೇಳಿಕೆಯು, ದೀರ್ಘವಾದ ಒಂದು ಹೇಳಿಕೆಯ ಅಥವಾ ಒಂದು ಸಂಭಾಷಣೆಯ ಅಥವಾ ಒಂದು ಬಿಡಿ ದಸ್ತಾವೇಜಿನ ಭಾಗವಾಗಿರುವಾಗ ಅಥವಾ ಪುಸ್ತಕದ ಭಾಗವಾಗಿರುವಾಗ, ದಸ್ತಾವೇಜಿನಲ್ಲಿ ಒಳಗೊಂಡಿರುವಾಗ ಅಥವಾ ವಿದ್ಯುನ್ಮಾನ ದಾಖಲೆಯ ಭಾಗದಲ್ಲಿ ಒಳಗೊಂಡಿರುವಾಗ ಅಥವಾ ಪುಸ್ತಕದ ಅಥವಾ ಸಂಬಂಧವುಳ್ಳ ಅಥವಾ ಸರಣಿ ಪತ್ರಗಳ ಅಥವಾ ಕಾಗದ ಪತ್ರಗಳ ಭಾಗವಾಗಿರುವ ಒಂದು ದಸ್ತಾವೇಜಿನಲ್ಲಿನ ಹೇಳಿಕೆಯಾದಾಗ ನಿರ್ದಿಷ್ಟ ಮೊಕದ್ದಮೆಯಲ್ಲಿನ ಹೇಳಿಕೆಯ ಸ್ವರೂಪವನ್ನು ಮತ್ತು ಪರಿಣಾಮವನ್ನು ಮತ್ತು ಅದನ್ನು ಮಾಡಿದ ಸಂದರ್ಭಗಳನ್ನು ಪೂರ್ಣವಾಗಿ ತಿಳಿದುಕೊಳ್ಳಲು ಅವಶ್ಯವೆಂದು ನ್ಯಾಯಾಲಯವು ಪರಿಗಣಿಸುವಷ್ಟರಮಟ್ಟಿಗೆ ಮತ್ತು ಅದಕ್ಕಿಂತ ಹೆಚ್ಚಾಗದಂತೆ ಸಂಭಾಷಣೆಯ, ದಸ್ತಾವೇಜಿನ, ವಿದ್ಯುನ್ಮಾನ ದಾಖಲೆಯ, ಪುಸ್ತಕದ ಅಥವಾ ಸರಣಿ ಪತ್ರಗಳ ಅಥವಾ ಕಾಗದ ಪತ್ರಗಳಲ್ಲಿನ ಹೇಳಿಕೆಯ ಬಗ್ಗೆ ಸಾಕ್ಷ್ಯವನ್ನು ನೀಡತಕ್ಕದ್ದು.

***ನ್ಯಾಯಾಲಯಗಳ ತೀರ್ಪುಗಳು ಯಾವಾಗ ಸುಸಂಬದ್ಧ***

**34. ಎರಡನೇ ದಾವೆ ಅಥವಾ ಅಧಿವಿಚಾರಣೆಯನ್ನು ಪ್ರತಿಷೇಧಿಸಲು ಮೊದಲಿನ ತೀರ್ಪುಗಳು ಸುಸಂಬದ್ಧವಾಗಿರುವುದು.-** ಒಂದು ದಾವೆಯನ್ನು ಗಮನಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಅಥವಾ ಅಧಿವಿಚಾರಣೆಯನ್ನು ನಡೆಸುವುದಕ್ಕೆ ಕಾನೂನಿನ ಮೂಲಕ ಯಾವುದೇ ನ್ಯಾಯಾಲಯವನ್ನು ಪ್ರತಿಬಂಧಿಸುವ ಯಾವುದೇ ತೀರ್ಪಿನ, ಆದೇಶದ ಅಥವಾ ಡಿಕ್ರಿಯ ಅಸ್ತಿತ್ವವು, ಅಂಥ ನ್ಯಾಯಾಲಯವು ಅಂಥ ದಾವೆಯ ಸಂಜ್ಞೇಯತೆಯನ್ನು ಗಮನಿಸಿ ಕ್ರಮ ತೆಗೆದುಕೊಳ್ಳಬೇಕೇ ಅಥವಾ ಅಂಥ ಅಧಿವಿಚಾರಣೆಯನ್ನು ನಡೆಸಬೇಕೇ ಎಂಬ ಪ್ರಶ್ನೆ ಬಂದಾಗ, ಅದು ಸುಸಂಬದ್ಧ ಸಂಗತಿಯಾಗಿರುತ್ತದೆ.

**35. ಪ್ರೊಬೇಟ್, ಇತ್ಯಾದಿ ಅಧಿಕಾರವ್ಯಾಪ್ತಿಗಳಿಗೆ ಸಂಬಂಧಿಸಿದಂತೆ ಕೆಲವು ತೀರ್ಪುಗಳ ಸುಸಂಬದ್ಧತೆ.-** (1) ಪ್ರೊಬೇಟ್, ವೈವಾಹಿಕ ವ್ಯಾಜ್ಯ, ನೌಕಾ ಸಂಬಂಧದ ಅಥವಾ ದಿವಾಳಿತನದ ಅಧಿಕಾರವ್ಯಾಪ್ತಿಯ ಚಲಾವಣೆಯಲ್ಲಿ, ಯಾರೇ ವ್ಯಕ್ತಿಗೆ ಕಾನೂನುಸಮ್ಮತ ಸ್ಥಾನಮಾನವನ್ನು ಪ್ರದಾನ ಮಾಡುವ ಅಥವಾ ಆತನಿಂದ ಅದನ್ನು ಹಿಂತೆಗೆದುಕೊಳ್ಳುವ ಅಥವಾ ಯಾರೇ ವ್ಯಕ್ತಿಯು ಅಂಥ ಸ್ಥಾನಮಾನವನ್ನು ಹೊಂದಲು ಹಕ್ಕುಳ್ಳವನೆಂದು, ಅಥವಾ ಯಾರೇ ನಿರ್ದಿಷ್ಟ ವ್ಯಕ್ತಿಯ ವಿರುದ್ಧವಾಗಿ ಅಲ್ಲದೇ ಪೂರ್ಣವಾಗಿ ಯಾವುದೇ ನಿರ್ದಿಷ್ಟ ವಸ್ತುವಿಗೆ ಹಕ್ಕುಳ್ಳವನೆಂದು ಘೋಷಿಸುವ ಸಕ್ಷಮ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಂತಿಮ ತೀರ್ಪು, ಆದೇಶ ಅಥವಾ ಡಿಕ್ರಿಯು, ಅಂಥ ಕಾನೂನುಸಮ್ಮತ ಸ್ಥಾನಮಾನದ ಅಥವಾ ಅಂಥ ಯಾವುದೇ ವಸ್ತುವಿಗೆ ಅಂಥ ಯಾರೇ ವ್ಯಕ್ತಿಯ ಹಕ್ಕಿನ ಅಸ್ತಿತ್ವವು ಸುಸಂಬದ್ಧವಾಗಿರುವಾಗ ಸುಸಂಬದ್ಧವಾಗಿರುತ್ತದೆ.

(2) ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯು,-

(i) ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯು ಜಾರಿಯಲ್ಲಿ ಬಂದ ಸಮಯಕ್ಕೆ ಅದು ನೀಡುವ ಯಾವುದೇ ಕಾನೂನುಸಮ್ಮತ ಸ್ಥಾನಮಾನವು ಪ್ರಾಪ್ತವಾಯಿತೆಂಬ ಬಗ್ಗೆ;

(ii) ಯಾವುದೇ ಕಾನೂನುಸಮ್ಮತ ಸ್ಥಾನಮಾನಕ್ಕೆ ಅಂಥ ಯಾರೇ ವ್ಯಕ್ತಿಯು ಹಕ್ಕುಳ್ಳವನೆಂದು ಅದು ಘೋಷಿಸುವಲ್ಲಿ ಅದು ಆ ವ್ಯಕ್ತಿಗೆ ಪ್ರಾಪ್ತವಾಯಿತೆಂದು ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯು ಘೋಷಿಸಿದ ಸಮಯದಲ್ಲಿ ಪ್ರಾಪ್ತವಾಯಿತೆಂಬ ಬಗ್ಗೆ;

(iii) ಅಂಥ ಯಾರೇ ವ್ಯಕ್ತಿಯಿಂದ ಅದು ಹಿಂತೆಗೆದುಕೊಳ್ಳುವ ಯಾವುದೇ ಕಾನೂನುಸಮ್ಮತ ಸ್ಥಾನಮಾನವು, ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯು ಅದು ಯಾವ ಕಾಲದಲ್ಲಿ ಕೊನೆಗೊಂಡಿದೆ ಅಥವಾ ಕೊನೆಗೊಳ್ಳತಕ್ಕದ್ದೆಂದು ಘೋಷಿಸುತ್ತದೆಯೋ ಆ ಕಾಲದಿಂದ ಕೊನೆಗೊಂಡಿತೆಂಬ ಬಗ್ಗೆ; ಮತ್ತು

(iv) ಯಾವ ವಸ್ತುವಿಗೆ ಅಂಥ ಯಾರೇ ವ್ಯಕ್ತಿಯು ಹಕ್ಕುಳ್ಳವನೆಂದು ಅದು ಘೋಷಿಸುತ್ತದೆಯೋ ಆ ಯಾವುದೇ ವಸ್ತುವು, ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯು ಅದು ಯಾವ ಕಾಲದಲ್ಲಿ ಅವನ ಸ್ವತ್ತು ಆಗಿದ್ದಿತೆಂದು ಅಥವಾ ಆಗತಕ್ಕದ್ದೆಂದು ಘೋಷಿಸುತ್ತದೆಯೋ ಆ ಕಾಲದಿಂದ ಅವನ ಸ್ವತ್ತಾಗಿತ್ತೆಂಬ ಬಗ್ಗೆ

-ನಿರ್ಣಾಯಕ ರುಜುವಾತಾಗಿರುತ್ತದೆ.

**36. ಪ್ರಕರಣ 35ರಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ ಇತರ ತೀರ್ಪುಗಳ, ಆದೇಶಗಳ ಅಥವಾ ಡಿಕ್ರಿಗಳ ಸುಸಂಬದ್ಧತೆ ಮತ್ತು ಪರಿಣಾಮ.-** 35ನೇ ಪ್ರಕರಣದಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ ಇತರ ತೀರ್ಪುಗಳು, ಆದೇಶಗಳು ಅಥವಾ ಡಿಕ್ರಿಗಳು, ಅವು ವಿಚಾರಣೆಗೆ ಸುಸಂಬದ್ಧವಾಗಿರುವ ಸಾರ್ವಜನಿಕ ಸ್ವರೂಪದ ವಿಷಯಗಳಿಗೆ ಸಂಬಂಧಿಸಿದವುಗಳಾಗಿದ್ದರೆ ಸುಸಂಬದ್ಧವಾಗಿರುತ್ತವೆ; ಆದರೆ, ಅಂಥ ತೀರ್ಪುಗಳು, ಆದೇಶಗಳು ಅಥವಾ ಡಿಕ್ರಿಗಳು ಅವು ಉಲ್ಲೇಖಿಸುವ ವಿಷಯಗಳ ಬಗ್ಗೆ ನಿರ್ಣಾಯಕ ರುಜುವಾತಾಗಿರುವುದಿಲ್ಲ.

*ದೃಷ್ಟಾಂತ*

ತನ್ನ ಭೂಮಿಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಕ್ಕಾಗಿ ʼಎʼಯು ʼಡಿʼಯ ಮೇಲೆ ದಾವೆ ಹೂಡುತ್ತಾನೆ. ಆ ಭೂಮಿಯ ಮೇಲೆ ಹಾಯ್ದು ಹೋಗಲು ಸಾರ್ವಜನಿಕರಿಗೆ ಹಕ್ಕು ಇದೆಯೆಂದು ʼಬಿʼಯು ವಾದಿಸುತ್ತಾನೆ. ಅದನ್ನು ʼಎʼಯು ನಿರಾಕರಿಸುತ್ತಾನೆ. ಅದೇ ಭೂಮಿಯ ಮೇಲಿನ ಅತಿಕ್ರಮ ಪ್ರವೇಶಕ್ಕಾಗಿ ʼಸಿʼಯ ವಿರುದ್ಧ ʼಎʼಯು ಹೂಡಿದ ದಾವೆಯಲ್ಲಿ, ಸಾರ್ವಜನಿಕರಿಗೆ ಆ ರಸ್ತೆಯಲ್ಲಿ ಓಡಾಡಲು ಹಕ್ಕು ಇದೆಯೆಂದು ʼಸಿʼಯು ವಾದಿಸಿದ್ದು, ಪ್ರತಿವಾದಿಯ ಪರವಾಗಿ ಡಿಕ್ರಿ ಆಗಿರುವುದು ಸುಸಂಬದ್ಧವಾಗಿರುತ್ತದೆ. ಆದರೆ ರಸ್ತೆಯನ್ನು ಉಪಯೋಗಿಸುವ ಹಕ್ಕು ಇದೆಯೆಂಬುದಕ್ಕೆ ಅದು ನಿರ್ಣಾಯಕ ರುಜುವಾತಾಗಿರುವುದಿಲ್ಲ.

**37. ಪ್ರಕರಣಗಳಾದ 34, 35 ಮತ್ತು 36 ರಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ ಇತರ ತೀರ್ಪು, ಇತ್ಯಾದಿಗಳು ಯಾವಾಗ ಸುಸಂಬದ್ಧ.-** 34ನೇ, 35ನೇ ಮತ್ತು 36ನೇ ಪ್ರಕರಣಗಳಲ್ಲಿ ನಮೂದಿಸಿದವುಗಳನ್ನು ಹೊರತುಪಡಿಸಿ ಇತರ ತೀರ್ಪುಗಳು, ಆದೇಶಗಳು ಅಥವಾ ಡಿಕ್ರಿಗಳು, ಅಂಥ ತೀರ್ಪು, ಆದೇಶ ಅಥವಾ ಡಿಕ್ರಿಯ ಅಸ್ತಿತ್ವವು ವಿವಾದಿತ ಸಂಗತಿಯಾಗಿದ್ದ ಹೊರತು ಅಥವಾ ಈ ಅಧಿನಿಯಮದ ಬೇರೊಂದು ಉಪಬಂಧದ ಮೇರೆಗೆ ಸುಸಂಬದ್ಧವಾಗಿದ್ದ ಹೊರತು ಅಸಂಬದ್ಧವಾಗಿರುತ್ತವೆ.

*ದೃಷ್ಟಾಂತಗಳು*

(ಎ) ʼಎʼ ಮತ್ತು ʼಬಿʼ ತಮ್ಮ ಗೌರವಕ್ಕೆ ಕುಂದು ತರುವಂಥ ಅವಮಾನಕರ ಬರಹಕ್ಕಾಗಿ ʼಸಿʼಯ ಮೇಲೆ ಪ್ರತ್ಯೇಕವಾಗಿ ದಾವೆ ಹೂಡುತ್ತಾರೆ. ʼಸಿʼಯು ಆ ಪ್ರತಿಯೊಂದು ಮೊಕದ್ದಮೆಯಲ್ಲೂ, ಅಪಮಾನಕರವೆಂದು ಹೇಳಲಾದ ವಿಷಯವು ನಿಜವೆಂದು ಹೇಳುತ್ತಾನೆ ಮತ್ತು ಆ ಸನ್ನಿವೇಶಗಳು ಹೇಗಿವೆಯೆಂದರೆ ಆ ಪ್ರತಿಯೊಂದು ಮೊಕದ್ದಮೆಯಲ್ಲೂ ಅದು ನಿಜವಾಗಿರುವ ಅಥವಾ ನಿಜವಾಗಿಲ್ಲದಿರುವ ಸಂಭವವಿರಬಹುದು. ʼಸಿʼಯು ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳಲಾಗಲಿಲ್ಲವೆಂಬ ಕಾರಣದ ಮೇಲೆ ನಷ್ಟಭರ್ತಿಗಾಗಿ ʼಎʼಯು ʼಸಿʼಯ ವಿರುದ್ಧ ಡಿಕ್ರಿ ಪಡೆದುಕೊಳ್ಳುತ್ತಾನೆ. ಈ ಸಂಗತಿಯು ʼಬಿʼ ಮತ್ತು ʼಸಿʼ ನಡುವೆ ಅಸಂಬದ್ಧವಾಗಿರುತ್ತದೆ.

(ಬಿ) ʼಬಿʼಯು ತನ್ನ ಹಸುವನ್ನು ಕಳವು ಮಾಡಿದ್ದಾನೆಂದು ʼಎʼಯು ಅವನನ್ನು ಪ್ರಾಸಿಕ್ಯೂಟ್ ಮಾಡುತ್ತಾನೆ. ʼಬಿʼಯು ಅಪರಾಧಿಯೆಂದು ನಿರ್ಣೀತನಾಗುತ್ತಾನೆ. ನಂತರ ತಾನು ಅಪರಾಧಿಯೆಂದು ನಿರ್ಣಯವಾಗುವುದಕ್ಕೆ ಮೊದಲೇ ʼಬಿʼಯು ʼಸಿʼಗೆ ಮಾರಿದ ಹಸುವಿಗಾಗಿ ʼಎʼಯು ʼಸಿʼಯ ಮೇಲೆ ದಾವೆ ಹೂಡುತ್ತಾನೆ. ʼಎʼ ಮತ್ತು ʼಸಿʼ ನಡುವೆ ʼಬಿʼಯ ವಿರುದ್ಧದ ತೀರ್ಪು ಅಸಂಬದ್ಧವಾಗಿರುತ್ತದೆ.

(ಸಿ) ಭೂಮಿಯ ಸ್ವಾಧೀನಕ್ಕಾಗಿ ʼಎʼಯು ʼಬಿʼ ಮತ್ತು ʼಸಿʼಯ ವಿರುದ್ಧ ಡಿಕ್ರಿ ಪಡೆದುಕೊಳ್ಳುತ್ತಾನೆ, ʼಬಿʼಯ ಮಕ್ಕಳು ಆ ಕಾರಣಕ್ಕಾಗಿ ʼಎʼಯ ಕೊಲೆ ಮಾಡುತ್ತಾರೆ. ಅಂಥ ತೀರ್ಪಿನ ಅಸ್ತಿತ್ವವು, ಆ ಅಪರಾಧದ ಉದ್ದೇಶವನ್ನು ತೋರಿಸುವುದರಿಂದ ಸುಸಂಬದ್ಧವಾಗಿರುತ್ತದೆ,

(ಡಿ) ʼಎʼಯು ಕಳವಿಗಾಗಿ ಮತ್ತು ಈ ಮುಂಚೆಯೂ ಕಳವಿಗಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದನೆಂದು ಆರೋಪಕ್ಕೆ ಗುರಿಯಾಗಿದ್ದಾನೆ. ಈ ಮುಂಚಿನ ಅಪರಾಧ ನಿರ್ಣಯವು ವಿವಾದಿತ ಸಂಗತಿಯಾಗಿರುವುದರಿಂದಾಗಿ ಸುಸಂಬದ್ಧವಾಗಿರುತ್ತದೆ.

(ಇ) ಬಿ/ಯ ಕೊಲೆಗಾಗಿ ಎ/ಯು ಅಧಿವಿಚಾರಣೆಗೆ ಗುರಿಯಾಗಿದ್ದಾನೆ, ಅವಮಾನಕರ ಬರಹಕ್ಕಾಗಿ ಬಿ/ಯು ಎ/ ಯನ್ನು ಪ್ರಾಸಿಕ್ಯೂಟ್ ಮಾಡಿದನೆಂಬ ಮತ್ತು ಎ/ಯು ಅಪರಾಧಿಯೆಂದು ನಿರ್ಣೀತನಾಗಿ ದಂಡಿತನಾದನೆಂಬ ಸಂಗತಿಯು, ವಿವಾದಿತ ಸಂಗತಿಯ ಬಗೆಗಿನ ಉದ್ದೇಶವನ್ನು ತೋರಿಸುವುದರಿಂದ, 6ನೇ ಪ್ರಕರಣದ ಮೇರೆಗೆ ಸುಸಂಬದ್ಧವಾಗಿರುತ್ತದೆ.

**38. ತೀರ್ಪನ್ನು ಪಡೆಯುವಲ್ಲಿ ಮಾಡಿರುವ ಮೋಸ ಅಥವಾ ಒಳಸಂಚು ಅಥವಾ ನ್ಯಾಯಾಲಯ ಸಕ್ಷಮವಾಗಿಲ್ಲದಿರುವುದನ್ನು ರುಜುವಾತು ಮಾಡಬಹುದು.-** 34ನೇ, 35ನೇ ಅಥವಾ 36ನೇ ಪ್ರಕರಣದ ಮೇರೆಗೆ ಸುಸಂಬದ್ಧವಾಗಿರುವ ಮತ್ತು ಎದುರು ಪಕ್ಷವು ರುಜುವಾತುಪಡಿಸಿದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯನ್ನು, ಅದನ್ನು ನೀಡಲು ಸಕ್ಷಮವಾಗಿರದ ನ್ಯಾಯಾಲಯವು ಕೊಟ್ಟಿದೆ ಅಥವಾ ಮೋಸದಿಂದ ಅಥವಾ ಒಳಸಂಚಿನಿಂದ ಅದನ್ನು ಪಡೆದುಕೊಳ್ಳಲಾಗಿದೆಯೆಂದು, ಒಂದು ದಾವೆಯ ಅಥವಾ ಇತರ ವ್ಯವಹರಣೆಯ ಯಾವುದೇ ಪಕ್ಷವು ತೋರಿಸಬಹುದು.

***ಮೂರನೆಯ ವ್ಯಕ್ತಿಗಳ ಅಭಿಪ್ರಾಯಗಳು ಯಾವಾಗ ಸುಸಂಬದ್ಧ***

**39. ತಜ್ಞರ ಅಭಿಪ್ರಾಯಗಳು.-** (1) ವಿದೇಶಿ ಕಾನೂನು ಅಥವಾ ವಿಜ್ಞಾನ ಅಥವಾ ಕಲೆ ಅಥವಾ ಯಾವುದೇ ಇತರೆ ಕ್ಷೇತ್ರವನ್ನು ಕುರಿತ ಅಂಶದ ಬಗ್ಗೆ ಅಥವಾ ಕೈಬರಹ ಅಥವಾ ಬೆರಳೊತ್ತುಗಳನ್ನು ಗುರುತಿಸುವ ಸಂಬಂಧದಲ್ಲಿ ನ್ಯಾಯಾಲಯವು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಆ ಅಂಶದ ಬಗ್ಗೆ ಅಂಥ ವಿದೇಶಿ ಕಾನೂನಿನಲ್ಲಿ, ವಿಜ್ಞಾನದಲ್ಲಿ ಅಥವಾ ಕಲೆಯಲ್ಲಿ ಅಥವಾ ಯಾವುದೇ ಇತರೆ ಕ್ಷೇತ್ರದಲ್ಲಿ ಅಥವಾ ಅಂಥ ಕೈಬರಹ ಅಥವಾ ಬೆರಳೊತ್ತುಗಳ ವಿಷಯಗಳಲ್ಲಿ ವಿಶೇಷವಾಗಿ ತಜ್ಞರಾದ ವ್ಯಕ್ತಿಗಳ ಅಭಿಪ್ರಾಯಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ ಮತ್ತು ಅಂಥ ವ್ಯಕ್ತಿಗಳನ್ನು ತಜ್ಞರೆಂದು ಕರೆಯಲಾಗುತ್ತದೆ.

*ದೃಷ್ಟಾಂತಗಳು*

(ಎ) ಎ/ಯ ಮರಣವು ವಿಷದಿಂದುಂಟಾಯಿತೇ ಎಂಬುದು ಪ್ರಶ್ನೆ. ಎ/ಯ ಮರಣಕ್ಕೆ ಕಾರಣವಾಗಿದೆಯೆಂದು ಭಾವಿಸಲಾದ ವಿಷದ ಲಕ್ಷಣಗಳ ಬಗೆಗಿನ ತಜ್ಞರ ಅಭಿಪ್ರಾಯಗಳು ಸುಸಂಬದ್ಧವಾಗಿರುತ್ತವೆ.

(ಬಿ) ಎ/ ಯು ಒಂದು ಕೃತ್ಯವನ್ನು ಮಾಡುವಾಗ, ಅಸ್ವಸ್ಥ ಮನಸ್ಸಿನ ಕಾರಣದಿಂದ, ಆ ಕೃತ್ಯದ ಸ್ವರೂಪವನ್ನು ಅಥವಾ ತಾನು ಮಾಡುತ್ತಿರುವುದು ತಪ್ಪು ಅಥವಾ ಕಾನೂನು ವಿರುದ್ಧವಾಗಿದೆಯೆಂಬುದನ್ನು ತಿಳಿದುಕೊಳ್ಳಲು ಅಸಮರ್ಥನಾಗಿದ್ದನೇ ಎಂಬುದು ಪ್ರಶ್ನೆ. ಎ/ ಯಲ್ಲಿ ಕಂಡುಬಂದ ಲಕ್ಷಣಗಳು ಸಾಮಾನ್ಯವಾಗಿ ಅಸ್ವಸ್ಥ ಮನಸ್ಸನ್ನು ತೋರಿಸುತ್ತವೆಯೇ ಮತ್ತು ಆ ವ್ಯಕ್ತಿಗಳು ಮಾಡುವ ಕೃತ್ಯದ ಸ್ವರೂಪವನ್ನು ಅಥವಾ ಅವರು ಮಾಡುವ ಕೃತ್ಯಗಳು ತಪ್ಪು ಅಥವಾ ಕಾನೂನು ವಿರುದ್ಧವಾಗಿವೆಯೆಂಬುದನ್ನು ತಿಳಿದುಕೊಳ್ಳಲಾಗದಂತೆ ಅಸ್ವಸ್ಥ ಮನಸ್ಸು ಅವರನ್ನು ಅಸಮರ್ಥರನ್ನಾಗಿ ಮಾಡುವುದೇ ಎಂಬ ಪ್ರಶ್ನೆಯ ಮೇಲಿನ ತಜ್ಞರ ಅಭಿಪ್ರಾಯಗಳು ಸುಸಂಬದ್ಧವಾಗಿರುತ್ತವೆ.

(ಸಿ) ಎ/ಯು ಒಂದು ದಸ್ತಾವೇಜನ್ನು ಬರೆದಿರುವನೇ ಎಂಬುದು ಪ್ರಶ್ನೆ. ಎ/ಯು ಬರೆದಿರುವನೆಂದು ರುಜುವಾತಾದ ಅಥವಾ ಒಪ್ಪಿಕೊಳ್ಳಲಾದ ಮತ್ತೊಂದು ದಸ್ತಾವೇಜನ್ನು ಹಾಜರುಪಡಿಸಲಾಗಿದೆ. ಆ ಎರಡೂ ದಸ್ತಾವೇಜುಗಳನ್ನು ಒಬ್ಬನೇ ಬರೆದಿದ್ದಾನೆಯೇ ಅಥವಾ ಬೇರೆ ಬೇರೆ ವ್ಯಕ್ತಿಗಳು ಬರೆದಿರುವರೇ ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ ತಜ್ಞರ ಅಭಿಪ್ರಾಯಗಳು ಸುಸಂಬದ್ಧವಾಗಿರುತ್ತವೆ.

(2) ಯಾವುದೇ ವ್ಯವಹರಣೆಯಲ್ಲಿ ನ್ಯಾಯಾಲಯವು, ಯಾವುದೇ ಗಣಕಯಂತ್ರದಲ್ಲಿ ಅಥವಾ ಯಾವುದೇ ಇತರ ವಿದ್ಯುನ್ಮಾನ ರೂಪದಲ್ಲಿ ಅಥವಾ ಡಿಜಿಟಲ್ ರೂಪದಲ್ಲಿ ರವಾನಿಸಿದ ಅಥವಾ ಸಂಗ್ರಹಿಸಿದ ಯಾವುದೇ ಮಾಹಿತಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000 ದ 21)ದ 79ಎ ಪ್ರಕರಣದಲ್ಲಿ ಉಲ್ಲೇಖಿಸಿರುವ ವಿದ್ಯುನ್ಮಾನ ಸಾಕ್ಷ್ಯ ಪರೀಕ್ಷಕನ ಅಭಿಪ್ರಾಯವು ಸುಸಂಬದ್ಧ ಸಂಗತಿಯಾಗಿರುತ್ತದೆ.

*ವಿವರಣೆ.–* ಈ ಉಪಪ್ರಕರಣದ ಉದ್ದೇಶಗಳಿಗಾಗಿ ವಿದ್ಯುನ್ಮಾನ ಸಾಕ್ಷ್ಯ ಪರೀಕ್ಷಕನು ತಜ್ಞನಾಗಿರತಕ್ಕದ್ದು.

**40. ತಜ್ಞರ ಅಭಿಪ್ರಾಯಗಳಿಗೆ ಆಧಾರವಾದ ಸಂಗತಿಗಳು.-** ಅನ್ಯಥಾ ಸುಸಂಬದ್ಧವಾಗಿರದ ಸಂಗತಿಗಳು, ತಜ್ಞರ ಅಭಿಪ್ರಾಯಗಳನ್ನು ಅವು ಸಮರ್ಥಿಸುತ್ತಿದ್ದರೆ ಅಥವಾ ಅವುಗಳಿಗೆ ಅಸಂಗತವಾಗಿದ್ದರೆ ಅಂಥ ಅಭಿಪ್ರಾಯಗಳು ಸುಸಂಬದ್ಧವಾಗಿರುವಾಗ ಅವು ಸುಸಂಬದ್ಧವಾಗಿರುತ್ತವೆ.

*ದೃಷ್ಟಾಂತಗಳು*

(ಎ) ‘ಎ’ ನಿಗೆ ಒಂದು ನಿರ್ದಿಷ್ಟ ವಿಷವನ್ನು ಹಾಕಿ ವಿಷಪ್ರಾಶನ ಮಾಡಲಾಯಿತೇ ಎಂಬುದು ಪ್ರಶ್ನೆ. ಅದೇ ವಿಷಪ್ರಾಶನಕ್ಕೆ ಗುರಿಯಾದ ಇತರ ವ್ಯಕ್ತಿಗಳಲ್ಲಿ ಕಂಡುಬಂದ ಕೆಲವು ಲಕ್ಷಣಗಳು ಅದೇ ವಿಷದ ಲಕ್ಷಣಗಳೆಂದು ತಜ್ಞರು ದೃಢಪಡಿಸಿದ ಅಥವಾ ನಿರಾಕರಿಸಿದ ಸಂಗತಿಯು ಸುಸಂಬದ್ಧವಾಗಿರುತ್ತದೆ.

(ಬಿ) ಒಂದು ನಿರ್ದಿಷ್ಟ ಕಡಲ ತಡೆಗೋಡೆಯಿಂದ ಬಂದರಿಗೆ ಅಡ್ಡಿಯುಂಟಾಗಿದೆಯೇ ಎಂಬುದು ಪ್ರಶ್ನೆ. ಬೇರೆ ಬೇರೆ ಸನ್ನಿವೇಶಗಳಲ್ಲಿ, ಇದರಂತೆಯೇ ಇರುವ, ಆದರೆ ಅಂಥ ಕಡಲ ತಡೆಗೋಡೆಗಳಿಲ್ಲದ ಇತರ ಬಂದರುಗಳಿಗೆ ಅದೇ ಕಾಲದಲ್ಲಿ ಅಡ್ಡಿಯುಂಟಾಗಲು ತೊಡಗಿದೆ ಎಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

**41. ಕೈಬರಹ ಅಥವಾ ಸಹಿಯ ಬಗೆಗಿನ ಅಭಿಪ್ರಾಯವು ಯಾವಾಗ ಸುಸಂಬದ್ಧ.-** (1) ಯಾವ ವ್ಯಕ್ತಿಯು ಒಂದು ದಸ್ತಾವೇಜನ್ನು ಬರೆದಿದ್ದನು ಅಥವಾ ಅದಕ್ಕೆ ಸಹಿ ಮಾಡಿದ್ದನು ಎಂಬ ಬಗ್ಗೆ ನ್ಯಾಯಾಲಯವು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಯಾವ ವ್ಯಕ್ತಿಯು ಅದನ್ನು ಬರೆದಿದ್ದಾನೆ ಅಥವಾ ಅದಕ್ಕೆ ಸಹಿ ಹಾಕಿದ್ದಾನೆ ಎಂದು ಊಹಿಸಲಾಗಿದೆಯೋ ಆ ವ್ಯಕ್ತಿಯ ಕೈಬರಹದ ಪರಿಚಯವುಳ್ಳ ಯಾರೇ ವ್ಯಕ್ತಿಯು, ಆ ವ್ಯಕ್ತಿಯು ಅದನ್ನು ಬರೆದಿದ್ದಾನೆಂದು ಅಥವಾ ಬರೆದಿಲ್ಲವೆಂದು ಅಥವಾ ಸಹಿ ಮಾಡಿದ್ದಾನೆಂದು ಅಥವಾ ಮಾಡಿಲ್ಲವೆಂದು ಕೊಡುವ ಅಭಿಪ್ರಾಯವು ಸುಸಂಬದ್ಧ ಸಂಗತಿಯಾಗಿರುತ್ತದೆ.

*ವಿವರಣೆ.-* ಒಬ್ಬ ವ್ಯಕ್ತಿಯು ಇನ್ನೊಬ್ಬನು ಬರೆಯುವುದನ್ನು ನೋಡಿದ್ದರೆ ಅಥವಾ ತಾನು ಸ್ವತಃ ಅಥವಾ ಆತನ ಅಧಿಕಾರದ ಮೇರೆಗೆ ಬರೆದ ಮತ್ತು ಆ ವ್ಯಕ್ತಿಗೆ ಕಳುಹಿಸಿದ ದಸ್ತಾವೇಜುಗಳಿಗೆ ಉತ್ತರವಾಗಿ ಆ ವ್ಯಕ್ತಿ ಬರೆದನೆಂದು ಹೇಳಲಾದ ದಸ್ತಾವೇಜುಗಳನ್ನು ಅವನು ಸ್ವೀಕರಿಸಿದ್ದರೆ ಅಥವಾ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಆ ವ್ಯಕ್ತಿಯಿಂದ ಬರೆಯಲಾಗಿದೆಯೆಂದು ತಾತ್ಪರ್ಯವಾಗುವ ದಸ್ತಾವೇಜುಗಳನ್ನು ವಾಡಿಕೆಯಾಗಿ ಅವನಿಗೆ ಒಪ್ಪಿಸುತ್ತಿದ್ದರೆ, ಅವನು ಆ ಇನ್ನೊಬ್ಬನ ಕೈಬರಹದ ಪರಿಚಯ ಹೊಂದಿದ್ದಾನೆಂದು ಹೇಳಲಾಗುತ್ತದೆ.

*ದೃಷ್ಟಾಂತ*

ಒಂದು ನಿರ್ದಿಷ್ಟ ಪತ್ರವು ಇಟಾನಗರದಲ್ಲಿರುವ ‘ಎ’ ಎಂಬ ವ್ಯಾಪಾರಿಯ ಕೈಬರಹದಲ್ಲಿದೆಯೇ ಎಂಬುದು ಪ್ರಶ್ನೆ. ‘ಬಿ’ಯು ‘ಎ’ಯ ವಿಳಾಸಕ್ಕೆ ಪತ್ರಗಳನ್ನು ಬರೆದಿರುವ ಮತ್ತು ಅವನಿಂದ ಬರೆಯಲಾಗಿದೆಯೆಂದು ತಾತ್ಪರ್ಯವಾಗುವ ಪತ್ರಗಳನ್ನು ಸ್ವೀಕರಿಸಿದ ಬೆಂಗಳೂರಿನಲ್ಲಿರುವ ಒಬ್ಬ ವ್ಯಾಪಾರಿ. ‘ಸಿ’ಯು ‘ಬಿ’ಯ ಗುಮಾಸ್ತನಿದ್ದು, ‘ಬಿ’ಯ ಪತ್ರ ವ್ಯವಹಾರವನ್ನು ಪರೀಕ್ಷಿಸುವುದು ಮತ್ತು ಕಡತದಲ್ಲಿ ಸೇರಿಸುವುದು ಅವನ ಕರ್ತವ್ಯವಾಗಿರುತ್ತದೆ. ‘ಡಿ’ಯು ‘ಬಿ’ಯ ದಳ್ಳಾಳಿ; ‘ಬಿ’ಗೆ ಸಲಹೆ ಮಾಡುವ ಉದ್ದೇಶಕ್ಕಾಗಿ ‘ಎ’ನಿಂದ ಬರೆಯಲಾಯಿತೆಂದು ತಾತ್ಪರ್ಯವಾಗುವ ಪತ್ರಗಳನ್ನು ಆತನಿಗೆ ವಾಡಿಕೆಯಾಗಿ ಅವನು ಒಪ್ಪಿಸುತ್ತಿದ್ದನು. ಆ ಪತ್ರವು ‘ಎ’ಯ ಕೈಬರಹದಲ್ಲಿದೆಯೇ ಎಂಬ ಪ್ರಶ್ನೆಯ ಮೇಲೆ ‘ಬಿ’, ‘ಸಿ’ ಮತ್ತು ‘ಡಿ’ಯವರ ಅಭಿಪ್ರಾಯಗಳು, ‘ಎ’ಯು ಬರೆಯುವುದನ್ನು ಅವರು ಎಂದೂ ನೋಡದಿದ್ದರೂ ಸುಸಂಬದ್ಧವಾಗಿರುತ್ತವೆ.

(2) ಯಾರೇ ವ್ಯಕ್ತಿಯ ವಿದ್ಯುನ್ಮಾನ ಸಹಿಯ ಬಗ್ಗೆ ನ್ಯಾಯಾಲಯವು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾದಾಗ, ವಿದ್ಯುನ್ಮಾನ ಸಹಿ ಪ್ರಮಾಣಪತ್ರವನ್ನು ನೀಡಿದ, ಪ್ರಮಾಣೀಕರಿಸುವ ಪ್ರಾಧಿಕಾರದ ಅಭಿಪ್ರಾಯವು ಸುಸಂಬದ್ಧ ಸಂಗತಿಯಾಗಿರುತ್ತದೆ.

**42. ಸಾಮಾನ್ಯ ರೂಢಿಯ ಅಥವಾ ಹಕ್ಕಿನ ಅಸ್ತಿತ್ವದ ಬಗೆಗಿನ ಅಭಿಪ್ರಾಯವು ಯಾವಾಗ ಸುಸಂಬದ್ಧ.-** ಯಾವುದೇ ಸಾಮಾನ್ಯ ರೂಢಿ ಅಥವಾ ಹಕ್ಕಿನ ಅಸ್ತಿತ್ವದ ಬಗ್ಗೆ ನ್ಯಾಯಾಲಯವು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಅಂಥ ರೂಢಿ ಅಥವಾ ಹಕ್ಕಿನ ಅಸ್ತಿತ್ವದ ಬಗ್ಗೆ, ಅದು ಅಸ್ತಿತ್ವದಲ್ಲಿದ್ದರೆ, ಅದರ ಅಸ್ತಿತ್ವವನ್ನು ತಿಳಿಯುವ ಸಂಭವವಿರಬಹುದಾದ ವ್ಯಕ್ತಿಗಳ ಅಭಿಪ್ರಾಯಗಳು ಸುಸಂಬದ್ಧವಾಗಿರುತ್ತವೆ.

*ವಿವರಣೆ.-* “ಸಾಮಾನ್ಯ ರೂಢಿ ಅಥವಾ ಹಕ್ಕು” ಎಂಬ ಅಭಿವ್ಯಕ್ತಿಯು ವ್ಯಕ್ತಿಗಳ ಯಾವುದೇ ಗಣನೀಯ ವರ್ಗಕ್ಕೆ ಸಾಮಾನ್ಯವಾಗಿರುವ ರೂಢಿಗಳನ್ನು ಅಥವಾ ಹಕ್ಕುಗಳನ್ನು ಒಳಗೊಳ್ಳುತ್ತದೆ.

*ದೃಷ್ಟಾಂತ*

ಒಂದು ನಿರ್ದಿಷ್ಟ ಗ್ರಾಮದ ನಿವಾಸಿಗಳು ಅದೇ ನಿರ್ದಿಷ್ಟ ಬಾವಿಯ ನೀರನ್ನು ಉಪಯೋಗಿಸುವ ಹಕ್ಕು, ಈ ಪ್ರಕರಣದ ಅರ್ಥದಲ್ಲಿ ಸಾಮಾನ್ಯ ಹಕ್ಕಾಗಿದೆ.

**43. ಆಚರಣೆಗಳು, ಸಿದ್ಧಾಂತಗಳು, ಇತ್ಯಾದಿಗಳ ಬಗ್ಗೆ ಅಭಿಪ್ರಾಯಗಳು ಯಾವಾಗ ಸುಸಂಬದ್ಧ.-** ನ್ಯಾಯಾಲಯವು,-

(i) ಯಾವುದೇ ಪುರುಷ ಸಮುದಾಯದ ಅಥವಾ ಕುಟುಂಬದ ಆಚರಣೆಗಳ ಮತ್ತು ಸಿದ್ಧಾಂತಗಳ ಬಗ್ಗೆ;

(ii) ಯಾವುದೇ ಮತ ಸಂಬಂಧವಾದ ಅಥವಾ ಧರ್ಮಾರ್ಥವಾದ ಪ್ರತಿಷ್ಠಾನದ ರಚನೆ ಮತ್ತು ಆಡಳಿತದ ಬಗ್ಗೆ; ಅಥವಾ

(iii) ಒಂದು ವಿಶಿಷ್ಟ ಜಿಲ್ಲೆಯಲ್ಲಿ ಅಥವಾ ವಿಶಿಷ್ಟ ವರ್ಗಗಳ ವ್ಯಕ್ತಿಗಳು ಉಪಯೋಗಿಸುವ ಶಬ್ದಗಳ ಅಥವಾ ಪದಗಳ ಅರ್ಥದ ಬಗ್ಗೆ

-ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಆ ಸಂಬಂಧದಲ್ಲಿ ತಿಳುವಳಿಕೆಯ ವಿಶೇಷ ಅವಕಾಶಗಳನ್ನು ಹೊಂದಿರುವ ವ್ಯಕ್ತಿಗಳ ಅಭಿಪ್ರಾಯಗಳು ಸುಸಂಬದ್ಧ ಸಂಗತಿಗಳಾಗಿರುತ್ತವೆ.

**44. ಬಂಧುತ್ವದ ಬಗೆಗಿನ ಅಭಿಪ್ರಾಯವು ಯಾವಾಗ ಸುಸಂಬದ್ಧ.-** ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯೊಡನೆ ಹೊಂದಿರುವ ಬಂಧುತ್ವದ ಬಗ್ಗೆ ನ್ಯಾಯಾಲಯವು ಒಂದು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾಗಿರುವಾಗ, ಕುಟುಂಬದ ಸದಸ್ಯನಾಗಿ ಅಥವಾ ಅನ್ಯಥಾ, ಆ ವಿಷಯದ ಬಗ್ಗೆ ತಿಳಿಯಲು ವಿಶೇಷ ಮಾರ್ಗವನ್ನು ಹೊಂದಿರುವ ಯಾರೇ ವ್ಯಕ್ತಿಯು ಅಂಥ ಬಂಧುತ್ವದ ಅಸ್ತಿತ್ವದ ಬಗ್ಗೆ ನಡವಳಿಕೆಯ ಮೂಲಕ ವ್ಯಕ್ತಪಡಿಸಿದ ಅಭಿಪ್ರಾಯವು ಸುಸಂಬದ್ಧ ಸಂಗತಿಯಾಗಿರುತ್ತದೆ:

ಪರಂತು, ವಿವಾಹ ವಿಚ್ಛೇದನ ಅಧಿನಿಯಮ, 1869 (1869 ರ 4)ರ ಮೇರೆಗಿನ ವ್ಯವಹರಣೆಗಳಲ್ಲಿ ಅಥವಾ ಭಾರತೀಯ ನ್ಯಾಯ ಸಂಹಿತೆ, 2023ರ 82ನೇ ಮತ್ತು 84ನೇ ಪ್ರಕರಣಗಳ ಮೇರೆಗಿನ ಪ್ರಾಸಿಕ್ಯೂಷನ್‌ನಲ್ಲಿ ವಿವಾಹವನ್ನು ರುಜುವಾತು ಮಾಡುವುದಕ್ಕೆ ಅಂಥ ಅಭಿಪ್ರಾಯವು ಪ್ರಯಾಪ್ತವಾಗಿರತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) “ಎ” ಮತ್ತು “ಬಿ” ಪರಸ್ಪರ ವಿವಾಹಿತರೇ ಎಂಬುದು ಪ್ರಶ್ನೆ. ಅವರು, ಸಾಮಾನ್ಯವಾಗಿ ಪತಿ ಮತ್ತು ಪತ್ನಿಯರಂತೆ ಅವರ ಮಿತ್ರರು ಕಾಣುತ್ತಿದ್ದರು ಮತ್ತು ಪರಿಗಣಿಸಿದ್ದರು ಎಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

(ಬಿ) “ಎ”ಯು “ಬಿ”ಯ ಔರಸ ಪುತ್ರನೇ ಎಂಬುದು ಪ್ರಶ್ನೆ. ಕುಟುಂಬದ ಸದಸ್ಯರಿಂದ “ಎ”ಯು ಸದಾ ಆ ರೀತಿ ಪರಿಗಣಿಸಲ್ಪಡುತ್ತಿದ್ದನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

**45. ಅಭಿಪ್ರಾಯದ ಆಧಾರಗಳು ಯಾವಾಗ ಸುಸಂಬದ್ಧ.-** ಯಾರೇ ಜೀವಂತ ವ್ಯಕ್ತಿಯ ಅಭಿಪ್ರಾಯವು ಸುಸಂಬದ್ಧವಾಗಿರುವಾಗ ಅಂಥ ಅಭಿಪ್ರಾಯದ ಆಧಾರಗಳೂ ಸುಸಂಬದ್ಧವಾಗಿರುತ್ತವೆ.

*ದೃಷ್ಟಾಂತ*

ಒಬ್ಬ ತಜ್ಞನು ತನ್ನ ಅಭಿಪ್ರಾಯವನ್ನು ರೂಪಿಸಿಕೊಳ್ಳುವ ಉದ್ದೇಶಕ್ಕಾಗಿ ತಾನು ನಡೆಸಿದ ಪ್ರಯೋಗಗಳ ವಿವರಗಳನ್ನು ಕೊಡಬಹುದು.

***ಚಾರಿತ್ರ್ಯವು ಯಾವಾಗ ಸುಸಂಬದ್ಧ***

**46. ಸಿವಿಲ್ ಮೊಕದ್ದಮೆಗಳಲ್ಲಿ ಆರೋಪಿಸಲಾದ ನಡತೆಯನ್ನು ರುಜುವಾತು ಮಾಡಲು ಚಾರಿತ್ರ್ಯವು ಅಸಂಬದ್ಧ.-** ಸಿವಿಲ್ ಮೊಕದ್ದಮೆಗಳಲ್ಲಿ, ಸಂಬಂಧಪಟ್ಟ ಯಾರೇ ವ್ಯಕ್ತಿಯ ಚಾರಿತ್ರ್ಯವು ಅವನಿಗೆ ಆರೋಪಿಸಲಾದ ಯಾವುದೇ ನಡತೆಯು ಸಂಭವನೀಯ ಅಥವಾ ಅಸಂಭನೀಯವಾಗಿಸುವ ಸಂಗತಿಯು, ಅಂಥ ಚಾರಿತ್ರ್ಯವು ಅನ್ಯಥಾ ಸುಸಂಬದ್ಧವಾಗಿರುವುದೆಂದು ಸಂಗತಿಗಳಿಂದ ಕಂಡುಬರುವಷ್ಟರ ಮಟ್ಟಿಗೆ ಹೊರತು, ಅಸಂಬದ್ಧವಾಗಿರುತ್ತದೆ.

**47. ಆಪರಾಧಿಕ ಮೊಕದ್ದಮೆಗಳಲ್ಲಿ ಹಿಂದಿನ ಸಚ್ಚಾರಿತ್ರ್ಯವು ಸುಸಂಬದ್ಧವಾಗಿರುತ್ತದೆ.-** ಆಪರಾಧಿಕ ವ್ಯವಹರಣೆಗಳಲ್ಲಿ, ಆರೋಪಿತ ವ್ಯಕ್ತಿಯು ಸಚ್ಚಾರಿತ್ರ್ಯವುಳ್ಳವನೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

**48. ಕೆಲವು ಮೊಕದ್ದಮೆಗಳಲ್ಲಿ ಚಾರಿತ್ರ್ಯ ಅಥವಾ ಮುಂಚಿನ ಲೈಂಗಿಕ ಅನುಭವದ ಸಾಕ್ಷ್ಯವು ಸುಸಂಬದ್ಧವಲ್ಲ.–** ಭಾರತೀಯ ನ್ಯಾಯ ಸಂಹಿತೆ, 2023 (2023ರ 45)ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ, 71ನೇ ಪ್ರಕರಣ, 74ನೇ ಪ್ರಕರಣ, 75ನೇ ಪ್ರಕರಣ, 76ನೇ ಪ್ರಕರಣ, 77ನೇ ಪ್ರಕರಣ ಅಥವಾ 78ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಅಥವಾ ಅಂಥ ಯಾವುದೇ ಅಪರಾಧ ಮಾಡಲು ಪ್ರಯತ್ನಿಸಿದುದಕ್ಕಾಗಿ ನಡೆಸುವ ಪ್ರಾಸಿಕ್ಯೂಷನ್‌ನಲ್ಲಿ, ಸಮ್ಮತಿಯ ಪ್ರಶ್ನೆ ಬಗ್ಗೆ ವಾದ ವಿಷಯವಿದ್ದಾಗ ಸಂತ್ರಸ್ತ ವ್ಯಕ್ತಿಯ ಚಾರಿತ್ರ್ಯದ ಅಥವಾ ಯಾವುದೇ ವ್ಯಕ್ತಿಯೊಂದಿಗೆ ಅಂಥ ವ್ಯಕ್ತಿಯ ಹಿಂದಿನ ಲೈಂಗಿಕ ಅನುಭವದ ಸಾಕ್ಷ್ಯವು ಅಂಥ ಸಮ್ಮತಿಯು ಅಥವಾ ಸಮ್ಮತಿಯ ಸ್ವರೂಪದ ವಿವಾದಾಂಶಕ್ಕೆ ಸುಸಂಬದ್ಧವಾಗತಕ್ಕದ್ದಲ್ಲ.

**49. ಉತ್ತರದಲ್ಲಿರುವ ಹೊರತು, ಹಿಂದಿನ ಹೀನ ಚಾರಿತ್ರ್ಯವು ಸುಸಂಬದ್ಧವಲ್ಲ.-** ಆಪರಾಧಿಕ ವ್ಯವಹರಣೆಗಳಲ್ಲಿ, ಆರೋಪಿತ ವ್ಯಕ್ತಿಯು ಹೀನ ಚಾರಿತ್ರ್ಯನಾಗಿದ್ದನೆಂಬ ಸಂಗತಿಯು ಅಸಂಬದ್ಧ; ಆದರೆ ಅವನು ಸಚ್ಚಾರಿತ್ರ್ಯವುಳ್ಳವನಾಗಿದ್ದನ್ನು ಎಂಬುದಕ್ಕೆ ಸಾಕ್ಷ್ಯವನ್ನು ಕೊಟ್ಟ ಹೊರತು, ಅಂಥ ಸಂದರ್ಭದಲ್ಲಿ ಅದು ಸುಸಂಬದ್ಧವಾಗುತ್ತದೆ.

*ವಿವರಣೆ 1.-* ಯಾರೇ ವ್ಯಕ್ತಿಯ ಹೀನ ಚಾರಿತ್ರ್ಯವು ವಿವಾದಿತ ಸಂಗತಿಯಾಗಿರುವ ಮೊಕದ್ದಮೆಗಳಿಗೆ ಈ ಪ್ರಕರಣವು ಅನ್ವಯಿಸುವುದಿಲ್ಲ.

*ವಿವರಣೆ 2.-* ಹಿಂದಿನ ಅಪರಾಧ ನಿರ್ಣಯವು ಹೀನ ಚಾರಿತ್ರ್ಯದ ಬಗ್ಗೆ ಸಾಕ್ಷ್ಯವಾಗಿ ಸುಸಂಬದ್ಧವಾಗಿರುತ್ತದೆ.

**50. ನಷ್ಟಭರ್ತಿಗೆ ಬಾಧಕವನ್ನುಂಟು ಮಾಡುವ ಚಾರಿತ್ರ್ಯ.-** ಸಿವಿಲ್ ಮೊಕದ್ದಮೆಗಳಲ್ಲಿ ಯಾರೇ ವ್ಯಕ್ತಿಯ ಚಾರಿತ್ರ್ಯವು ಅವನು ಪಡೆಯಬೇಕಾದ ನಷ್ಟದ ಮೊತ್ತದ ಮೇಲೆ ಬಾಧಕವನ್ನುವುಂಟು ಮಾಡುವುದೆಂಬ ಸಂಗತಿಯು ಸುಸಂಬದ್ಧವಾಗಿರುತ್ತದೆ.

*ವಿವರಣೆ.-* ಈ ಪ್ರಕರಣದಲ್ಲಿ ಮತ್ತು 46ನೇ, 47ನೇ ಮತ್ತು 49ನೇ ಪ್ರಕರಣಗಳಲ್ಲಿ ‌‌‌‌‌‌‌"ಚಾರಿತ್ರ್ಯ" ಎಂಬ ಪದವು ಖ್ಯಾತಿ ಮತ್ತು ಮನೋಧರ್ಮಗಳೆರಡನ್ನೂ ಒಳಗೊಳ್ಳುತ್ತದೆ; ಆದರೆ 49ನೇ ಪ್ರಕರಣದಲ್ಲಿ ಉಪಬಂಧಿಸಿರುವುದರ ಹೊರತು, ಸಾಮಾನ್ಯ ಖ್ಯಾತಿ ಮತ್ತು ಸಾಮಾನ್ಯ ಮನೋಧರ್ಮದ ಬಗ್ಗೆ ಮಾತ್ರ ಸಾಕ್ಷ್ಯವನ್ನು ಕೊಡಬಹುದು; ಆದರೆ ಖ್ಯಾತಿ ಅಥವಾ ಮನೋಧರ್ಮವನ್ನು ತೋರಿಸಿರುವ ನಿರ್ದಿಷ್ಟ ಕೃತ್ಯಗಳ ಬಗ್ಗೆ ಅಲ್ಲ.

## ಭಾಗ III

## ರುಜುವಾತನ್ನು ಕುರಿತು

## ಅಧ್ಯಾಯ III

### ರುಜುವಾತುಪಡಿಸಬೇಕಾಗಿರದ ಸಂಗತಿಗಳು

**51. ನ್ಯಾಯಿಕವಾಗಿ ಗಮನಿಸಬೇಕಾದ ಸಂಗತಿಯನ್ನು ರುಜುವಾತುಪಡಿಸಬೇಕಾಗಿಲ್ಲ.-** ನ್ಯಾಯಾಲಯವು ನ್ಯಾಯಿಕವಾಗಿ ಗಮನಿಸಬೇಕಾದ ಸಂಗತಿಯನ್ನು ರುಜುವಾತುಪಡಿಸಬೇಕಾಗಿಲ್ಲ.

**52. ನ್ಯಾಯಾಲಯವು ನ್ಯಾಯಿಕವಾಗಿ ಗಮನಿಸತಕ್ಕ ಸಂಗತಿಗಳು.-** (1) ನ್ಯಾಯಾಲಯವು ಈ ಕೆಳಗಿನ ಸಂಗತಿಗಳ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳತಕ್ಕದ್ದು, ಎಂದರೆ:-

(ಎ) ರಾಜ್ಯಕ್ಷೇತ್ರದ ಹೊರಗಿನ ಭೂ ಭಾಗದಲ್ಲಿ ಪರಿಣಾಮಕಾರಿಯಾಗಿರುವ ಕಾನೂನುಗಳನ್ನು ಒಳಗೊಂಡಂತೆ ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ಎಲ್ಲ ಕಾನೂನುಗಳು;

(ಬಿ) ಭಾರತವು ದೇಶ ಅಥವಾ ದೇಶಗಳೊಂದಿಗೆ ಅಂತರರಾಷ್ಟ್ರೀಯ ಕರಾರು, ಒಪ್ಪಂದ ಅಥವಾ ಒಡಂಬಡಿಕೆ ಅಥವಾ ಭಾರತವು ಅಂತರರಾಷ್ಟ್ರೀಯ ಸಂಘಗಳಲ್ಲಿ ಅಥವಾ ಇತರೆ ನಿಕಾಯಗಳಲ್ಲಿ ಕೈಗೊಂಡ ನಿರ್ಣಯಗಳು;

(ಸಿ) ಭಾರತದ ಸಂವಿಧಾನ ಸಭೆಯ ಅಥವಾ ಭಾರತದ ಸಂಸತ್ತು ಮತ್ತು ರಾಜ್ಯ ವಿಧಾನಮಂಡಲಗಳ ವ್ಯವಹರಣೆಯ ಕ್ರಮ;

(ಡಿ) ಎಲ್ಲಾ ನ್ಯಾಯಾಲಯಗಳು ಮತ್ತು ನ್ಯಾಯಾಧಿಕರಣಗಳ ಮೊಹರುಗಳು;

(ಇ) ನೌಕಾ ಮತ್ತು ಸಮುದ್ರೀಯ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯಗಳ ಮತ್ತು ನೋಟರಿ ಪಬ್ಲಿಕ್‌ಗಳ ಮೊಹರುಗಳು ಮತ್ತು ಸಂವಿಧಾನದ ಮೂಲಕ ಅಥವಾ ಸಂಸತ್ತು ಅಥವಾ ರಾಜ್ಯ ವಿಧಾನಮಂಡಲಗಳ ಅಧಿನಿಯಮದ ಮೂಲಕ ಅಥವಾ ಭಾರತದಲ್ಲಿ ಕಾನೂನು ಬಲವನ್ನು ಹೊಂದಿರುವ ವಿನಿಯಮಗಳ ಮೂಲಕ ಮೊಹರುಗಳನ್ನು ಬಳಸುವುದಕ್ಕೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯ ಎಲ್ಲ ಮೊಹರುಗಳು;

(ಎಫ್) ಯಾವುದೇ ರಾಜ್ಯದಲ್ಲಿನ ಯಾವುದೇ ಸರ್ಕಾರಿ ಪದವನ್ನು ತತ್ಕಾಲದಲ್ಲಿ ಹೊಂದಿರುವ ವ್ಯಕ್ತಿಗಳು ಪದಾರೋಹಣ, ಹೆಸರು, ಪದಾಭಿದಾನ, ಪ್ರಕಾರ್ಯಗಳು ಮತ್ತು ಸಹಿಗಳು, ಅಂಥ ಪದಕ್ಕೆ ಅವರ ನೇಮಕದ ಸಂಗತಿಯನ್ನು ಯಾವುದೇ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ್ದರೆ;

(ಜಿ) ಭಾರತ ಸರ್ಕಾರವು ಮಾನ್ಯತೆ ನೀಡಿದ ಪ್ರತಿಯೊಂದು ದೇಶದ ಅಥವಾ ಸಾರ್ವಭೌಮತ್ವದ ಅಸ್ತಿತ್ವ, ಪದಾಭಿದಾನ ಮತ್ತು ರಾಷ್ಟ್ರಧ್ವಜ;

(ಹೆಚ್) ಕಾಲ ವಿಭಜನೆ, ಜಗತ್ತಿನ ಭೌಗೋಳಿಕ ವಿಭಾಗಗಳು ಮತ್ತು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಸಾರ್ವಜನಿಕ ಹಬ್ಬಗಳು, ಉಪವಾಸ ದಿನಗಳು ಮತ್ತು ರಜಾ ದಿನಗಳು;

(ಐ) ಭಾರತದ ರಾಜ್ಯಕ್ಷೇತ್ರ;

(ಜೆ) ಭಾರತ ಸರ್ಕಾರದ ಮತ್ತು ಇತರ ಯಾವುದೇ ದೇಶದ ಅಥವಾ ವ್ಯಕ್ತಿಗಳ ನಿಕಾಯದ ನಡುವೆ ಹಗೆತನದ ಪ್ರಾರಂಭ, ಮುಂದುವರಿಕೆ ಮತ್ತು ಮುಕ್ತಾಯ;

(ಕೆ) ನ್ಯಾಯಾಲಯದ ಸದಸ್ಯರ ಮತ್ತು ಅಧಿಕಾರಿಗಳ ಮತ್ತು ಅವರ ಪ್ರತಿನಿಧಿಗಳ ಮತ್ತು ಅಧೀನ ಅಧಿಕಾರಿಗಳ ಮತ್ತು ಸಹಾಯಕರ ಮತ್ತು ನ್ಯಾಯಾಲಯದ ಆದೇಶಿಕೆಯನ್ನು ಜಾರಿ ಮಾಡುವುದಕ್ಕಾಗಿ, ಕಾರ್ಯನಿರ್ವಹಿಸುತ್ತಿರುವ ಎಲ್ಲ ಅಧಿಕಾರಿಗಳ ಮತ್ತು ಎಲ್ಲ ನ್ಯಾಯವಾದಿಗಳ ಮತ್ತು ಕಾನೂನು ಮೂಲಕ ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕೆ ಅಥವಾ ಕಾರ್ಯನಿರ್ವಹಿಸುವುದಕ್ಕೆ ಅಧಿಕಾರ ಹೊಂದಿರುವ ಇತರ ವ್ಯಕ್ತಿಗಳ ಹೆಸರುಗಳು;

(ಎಲ್) ಭೂಮಿಯ ಮೇಲೆ ಅಥವಾ ಸಮುದ್ರದಲ್ಲಿನ ಮಾರ್ಗ ನಿಯಮ.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಸಂದರ್ಭಗಳಲ್ಲಿ ಮತ್ತು ಸಾರ್ವಜನಿಕ ಇತಿಹಾಸ, ಸಾಹಿತ್ಯ, ವಿಜ್ಞಾನ ಅಥವಾ ಕಲೆಯ ಎಲ್ಲ ವಿಷಯಗಳ ಮೇಲೂ ನ್ಯಾಯಾಲಯವು ಯುಕ್ತ ಪರಾಮರ್ಶನ ಪುಸ್ತಕಗಳ ಅಥವಾ ದಸ್ತಾವೇಜುಗಳ ಸಹಾಯವನ್ನು ತೆಗೆದುಕೊಳ್ಳಬಹುದು. ಯಾವುದೇ ಸಂಗತಿಯ ಬಗ್ಗೆ ನ್ಯಾಯಿಕ ಗಮನವನ್ನು ತೆಗೆದುಕೊಳ್ಳಬೇಕೆಂದು ಯಾರೇ ವ್ಯಕ್ತಿಯು ನ್ಯಾಯಾಲಯವನ್ನು ಕೋರಿದರೆ, ಆ ನ್ಯಾಯಾಲಯವು ಹಾಗೆ ಮಾಡಲು ತನಗೆ ಅವಶ್ಯಕವೆಂದು ಪರಿಗಣಿಸಬಹುದಾದಂಥ ಯಾವುದೇ ಪುಸ್ತಕ ಅಥವಾ ದಸ್ತಾವೇಜನ್ನು ಅಂಥ ವ್ಯಕ್ತಿಯು ಒದಗಿಸಿದ ಹೊರತು ಮತ್ತು ಒದಗಿಸುವವರೆಗೆ ಹಾಗೆ ಮಾಡಲು ನಿರಾಕರಿಸಬಹುದು.

**53. ಒಪ್ಪಲಾದ ಸಂಗತಿಗಳನ್ನು ರುಜುವಾತುಪಡಿಸುವುದು ಅಗತ್ಯವಿರದು.-** ಯಾವ ವ್ಯವಹರಣೆಯಲ್ಲಿನ ಸಂಗತಿಯನ್ನು ಅದರ ಪಕ್ಷಕಾರರು ಅಥವಾ ಅವರ ಏಜೆಂಟರು ವಿಚಾರಣೆಯ ಕಾಲದಲ್ಲಿ ಒಪ್ಪಿಕೊಳ್ಳಲು ಸಮ್ಮತಿಸುತ್ತಾರೋ ಅಥವಾ ಯಾವ ಸಂಗತಿಯನ್ನು ವಿಚಾರಣೆಗೆ ಮೊದಲು ಅವರು ತಮ್ಮ ಹಸ್ತಾಕ್ಷರವುಳ್ಳ ಬರವಣಿಗೆಯ ಮೂಲಕ ಒಪ್ಪಿಕೊಳ್ಳಲು ಸಮ್ಮತಿಸುತ್ತಾರೋ ಅಥವಾ ಯಾವ ಸಂಗತಿಯನ್ನು ಆ ಕಾಲದಲ್ಲಿ ಜಾರಿಯಲ್ಲಿರುವ ವಾದ ಪ್ರತಿವಾದಗಳ ಯಾವುದೇ ನಿಯಮದ ಮೇರೆಗೆ ಅವರ ವಾದ ಪ್ರತಿವಾದಗಳಲ್ಲಿ ಅವರು ಒಪ್ಪಿದ್ದಾರೆಂದು ಭಾವಿಸಲಾಗಿದೆಯೋ ಅಂಥ ಸಂಗತಿಯನ್ನು ರುಜುವಾತುಪಡಿಸುವುದು ಅಗತ್ಯವಾಗಿರುವುದಿಲ್ಲ:

ಪರಂತು, ನ್ಯಾಯಾಲಯವು, ತನ್ನ ವಿವೇಚನಾನುಸಾರ, ಒಪ್ಪಲಾದ ಸಂಗತಿಗಳನ್ನು, ಅಂಥ ಒಪ್ಪಿಗೆಗಳ ಮೂಲಕವಲ್ಲದೆಯೂ ಅನ್ಯಥಾ ರುಜುವಾತುಪಡಿಸಬೇಕೆಂದು ಅಗತ್ಯಪಡಿಸಬಹುದು.

## ಅಧ್ಯಾಯ IV

## ಮೌಖಿಕ ಸಾಕ್ಷ್ಯ

**54. ಮೌಖಿಕ ಸಾಕ್ಷ್ಯದ ಮೂಲಕ ಸಂಗತಿಗಳ ರುಜುವಾತು.-** ದಸ್ತಾವೇಜುಗಳ ಒಳಾಂಶಗಳನ್ನು ಹೊರತುಪಡಿಸಿ, ಎಲ್ಲ ಸಂಗತಿಗಳನ್ನು ಮೌಖಿಕ ಸಾಕ್ಷ್ಯದ ಮೂಲಕ ರುಜುವಾತುಪಡಿಸಬಹುದು.

**55. ಮೌಖಿಕ ಸಾಕ್ಷ್ಯವು ಪ್ರತ್ಯಕ್ಷವಾಗಿರುವುದು.-** ಮೌಖಿಕ ಸಾಕ್ಷ್ಯವು ಎಲ್ಲ ಸಂದರ್ಭಗಳಲ್ಲಿಯೂ ಪ್ರತ್ಯಕ್ಷವಾಗಿರತಕ್ಕದ್ದು, ಎಂದರೆ, ಅದು,-

(i) ನೋಡಬಹುದಾದ ಸಂಗತಿಗೆ ಸಂಬಂಧಿಸಿದ್ದರೆ, ತಾನು ಅದನ್ನು ನೋಡಿದ್ದೇನೆಂದು ಹೇಳುವ ಸಾಕ್ಷಿದಾರನ ಸಾಕ್ಷ್ಯವಾಗಿರತಕ್ಕದ್ದು;

(ii) ಕೇಳಬಹುದಾದ ಸಂಗತಿಗೆ ಸಂಬಂಧಿಸಿದ್ದರೆ, ತಾನು ಅದನ್ನು ಕೇಳಿದ್ದೇನೆಂದು ಹೇಳುವ ಸಾಕ್ಷಿದಾರನ ಸಾಕ್ಷ್ಯವಾಗಿರತಕ್ಕದ್ದು;

(iii) ಇತರ ಯಾವುದೇ ಇಂದ್ರಿಯದ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಗ್ರಹಿಸಬಹುದಾದ ಸಂಗತಿಗೆ ಸಂಬಂಧಿಸಿದ್ದರೆ, ತಾನು ಅದನ್ನು ಆ ಇಂದ್ರಿಯದ ಮೂಲಕ ಅಥವಾ ಆ ರೀತಿಯಲ್ಲಿ ಗ್ರಹಿಸಿದ್ದೇನೆಂದು ಹೇಳುವ ಸಾಕ್ಷಿದಾರನ ಸಾಕ್ಷ್ಯವಾಗಿರತಕ್ಕದ್ದು;

(iv) ಒಂದು ಅಭಿಪ್ರಾಯಕ್ಕೆ ಅಥವಾ ಯಾವ ಆಧಾರದ ಮೇಲೆ ಆ ಅಭಿಪ್ರಾಯವು ಇದೆಯೋ ಆ ಆಧಾರಗಳಿಗೆ ಸಂಬಂಧಿಸಿದ್ದರೆ, ಅದು ಆ ಆಧಾರದ ಮೇಲೆ ಆ ಅಭಿಪ್ರಾಯವನ್ನು ಹೊಂದಿರುವ ವ್ಯಕ್ತಿಯ ಸಾಕ್ಷ್ಯವಾಗಿರತಕ್ಕದ್ದು:

ಪರಂತು, ಸಾಮಾನ್ಯವಾಗಿ ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ಗ್ರಂಥದಲ್ಲಿ ವ್ಯಕ್ತವಾಗಿರುವ ತಜ್ಞರ ಅಭಿಪ್ರಾಯಗಳನ್ನು ಮತ್ತು ಅಂಥ ಅಭಿಪ್ರಾಯಗಳಿಗೆ ಇರುವ ಆಧಾರಗಳನ್ನು ಗ್ರಂಥಕರ್ತನು ಮರಣಹೊಂದಿದ್ದರೆ ಅಥವಾ ಸಿಗದಿದ್ದರೆ ಅಥವಾ ಸಾಕ್ಷ್ಯ ಕೊಡಲು ಅಸಮರ್ಥನಾದರೆ ಅಥವಾ ನ್ಯಾಯಾಲಯವು ಅಸಮಂಜಸವೆಂದು ಪರಿಗಣಿಸುವ ವಿಳಂಬವಿಲ್ಲದೆ ಅಥವಾ ವೆಚ್ಚವಿಲ್ಲದೆ ಸಾಕ್ಷಿಯಾಗಿ ಅವನನ್ನು ಕರೆಸಲಾಗದಿದ್ದರೆ, ಗ್ರಂಥಗಳನ್ನು ಹಾಜರುಪಡಿಸುವುದರ ಮೂಲಕ ಅವುಗಳನ್ನು ರುಜುವಾತುಪಡಿಸಬಹುದು:

ಮತ್ತೂ ಪರಂತು, ಮೌಖಿಕ ಸಾಕ್ಷ್ಯವು, ದಸ್ತಾವೇಜನ್ನು ಹೊರತುಪಡಿಸಿ ಯಾವುದೇ ಮಹತ್ವದ ವಸ್ತುವಿನ ಅಸ್ತಿತ್ವ ಅಥವಾ ಅದರ ಸ್ಥಿತಿಗೆ ಸಂಬಂಧಿಸಿದ್ದರೆ, ನ್ಯಾಯಾಲಯವು ಯುಕ್ತವೆಂದು ತಾನು ಭಾವಿಸಿದರೆ, ತನ್ನ ಪರಿಶೀಲನೆಗಾಗಿ ಅಂಥ ಮಹತ್ವದ ವಸ್ತುವನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಬಹುದು.

## ಅಧ್ಯಾಯ V

## ದಸ್ತಾವೇಜು ಸಾಕ್ಷ್ಯ

**56. ದಸ್ತಾವೇಜುಗಳ ಒಳಾಂಶಗಳ ರುಜುವಾತು.-** ದಸ್ತಾವೇಜುಗಳ ಒಳಾಂಶಗಳನ್ನು ಪ್ರಾಥಮಿಕ ಸಾಕ್ಷ್ಯದಿಂದಾಗಲಿ, ಎರಡನೆಯ ಸಾಕ್ಷ್ಯದಿಂದಾಗಲಿ ರುಜುವಾತುಪಡಿಸಬಹುದು.

**57. ಪ್ರಾಥಮಿಕ ಸಾಕ್ಷ್ಯ.-** ಪ್ರಾಥಮಿಕ ಸಾಕ್ಷ್ಯವೆಂದರೆ, ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಲಾದ ಮೂಲ ದಸ್ತಾವೇಜು.

*ವಿವರಣೆ 1.-* ದಸ್ತಾವೇಜನ್ನು ಅನೇಕ ಭಾಗಗಳಲ್ಲಿ ಬರೆಯಲಾಗಿದ್ದರೆ, ಪ್ರತಿಯೊಂದು ಭಾಗವು ದಸ್ತಾವೇಜಿನ ಪ್ರಾಥಮಿಕ ಸಾಕ್ಷ್ಯವಾಗಿರುತ್ತದೆ.

*ವಿವರಣೆ 2.-* ದಸ್ತಾವೇಜನ್ನು ದ್ವಿಪ್ರತಿಯಲ್ಲಿ ಬರೆಯಲಾಗಿರುವಾಗ, ಅಂಥ ಪ್ರತಿಯೊಂದು ದ್ವಿಪ್ರತಿ ಬರಹವನ್ನು ಕೇವಲ ಒಂದು ಅಥವಾ ಹಲವು ಪಕ್ಷಕಾರರು ಬರೆದುಕೊಟ್ಟಿರುವಾಗ ಅದನ್ನು ಬರೆದುಕೊಟ್ಟಿರುವ ಪಕ್ಷಕಾರರ ವಿರುದ್ಧ ಅದು ಪ್ರಾಥಮಿಕ ಸಾಕ್ಷ್ಯವಾಗಿರುತ್ತದೆ.

*ವಿವರಣೆ 3.-* ಮುದ್ರಣ, ಕಲ್ಲಚ್ಚು ಮೂಲಕ ಅಥವಾ ಛಾಯಾಚಿತ್ರದಂಥ ಅನೇಕ ದಸ್ತಾವೇಜುಗಳನ್ನು ಏಕರೂಪದ ವಿಧಾನದಲ್ಲಿ ಮಾಡಿರುವಾಗ, ಪ್ರತಿಯೊಂದು, ಉಳಿದವುಗಳ ಒಳಾಂಶಗಳ ಬಗ್ಗೆ ಪ್ರಾಥಮಿಕ ಸಾಕ್ಷ್ಯವಾಗುತ್ತದೆ, ಆದರೆ ಅವುಗಳೆಲ್ಲಾ ಒಂದೇ ಮೂಲದಿಂದ ತೆಗೆದ ಪ್ರತಿಗಳಾಗಿದ್ದರೆ ಅವು ಮೂಲದ ಒಳಾಂಶಗಳ ಬಗ್ಗೆ ಪ್ರಾಥಮಿಕ ಸಾಕ್ಷ್ಯಗಳಲ್ಲ.

*ವಿವರಣೆ 4.-* ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯನ್ನು ಸೃಜಿಸಿದಲ್ಲಿ ಅಥವಾ ಸಂಗ್ರಹಿಸಿದಲ್ಲಿ ಮತ್ತು ಅಂಥ ಸಂಗ್ರಹಣೆಯು ಏಕಕಾಲದಲ್ಲಿ ಅಥವಾ ಅನುಕ್ರಮವಾಗಿ ಅನೇಕ ಕಡತಗಳಲ್ಲಿ ಸಂಗ್ರಹಿಸಿದಲ್ಲಿ, ಅಂಥ ಪ್ರತಿಯೊಂದು ಕಡತವು ಪ್ರಾಥಮಿಕ ಸಾಕ್ಷ್ಯವಾಗುತ್ತದೆ.

*ವಿವರಣೆ 5.-* ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯನ್ನು ಸೂಕ್ತವಾದ ಅಭಿರಕ್ಷೆಯಿಂದ ಹಾಜರುಪಡಿಸಿದಲ್ಲಿ, ವಿದ್ಯುನ್ಮಾನ ಮತ್ತು ಡಿಜಿಟಲ್ ದಾಖಲೆಯು ವಿವಾದಾತ್ಮಕವಾಗಿರದ ಹೊರತು ಪ್ರಾಥಮಿಕ ಸಾಕ್ಷ್ಯವಾಗುತ್ತದೆ.

*ವಿವರಣೆ 6.-* ವಿಡಿಯೋ ರೆಕಾರ್ಡಿಂಗ್ ಅನ್ನು ಏಕಕಾಲದಲ್ಲಿ ವಿದ್ಯುನ್ಮಾನ ರೂಪದಲ್ಲಿ ಸಂಗ್ರಹಿಸಿ, ಪ್ರಸಾರ ಮಾಡಿದಲ್ಲಿ ಅಥವಾ ಪ್ರಸ್ತುತಪಡಿಸಿದಲ್ಲಿ ಅಥವಾ ಇನ್ನೊಂದಕ್ಕೆ ವರ್ಗಾಯಿಸಿದಲ್ಲಿ, ಪ್ರತಿಯೊಂದು ಸಂಗ್ರಹಿಸಿದ ದಾಖಲೆಗಳು ಪ್ರಾಥಮಿಕ ಸಾಕ್ಷ್ಯವಾಗುತ್ತದೆ.

*ವಿವರಣೆ 7.-* ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯನ್ನು ಗಣಕಯಂತ್ರ ಸಂಪನ್ಮೂಲದಲ್ಲಿ ಅನೇಕ ಶೇಖರಣಾ ಸ್ಥಳಗಳಲ್ಲಿ ಸಂಗ್ರಹಿಸಲಾಗಿರುವಲ್ಲಿ, ತಾತ್ಕಾಲಿಕ ಕಡತಗಳನ್ನು ಒಳಗೊಂಡಂತೆ ಅಂಥ ಪ್ರತಿಯೊಂದು ಸ್ವಯಂಚಾಲಿತ ಸಂಗ್ರಹಣೆಯು ಪ್ರಾಥಮಿಕ ಸಾಕ್ಷ್ಯವಾಗುತ್ತದೆ.

*ದೃಷ್ಟಾಂತ*

ಒಬ್ಬ ವ್ಯಕ್ತಿಯು ಒಂದೇ ಕಾಲದಲ್ಲಿ ಒಂದೇ ಮೂಲದಿಂದ ಮುದ್ರಿತವಾದ ಅನೇಕ ಭಿತ್ತಿಪತ್ರಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವಂತೆ ತೋರಿಸಲಾಗಿದೆ. ಈ ಭಿತ್ತಿಪತ್ರಗಳಲ್ಲಿ ಯಾವುದೇ ಒಂದು ಇನ್ನೊಂದರ ಒಳಾಂಶಗಳ ಬಗ್ಗೆ ಪ್ರಾಥಮಿಕ ಸಾಕ್ಷ್ಯವಾಗುತ್ತದೆ, ಆದರೆ ಅವುಗಳಲ್ಲಿ ಯಾವುದೂ ಮೂಲದ ಒಳಾಂಶಗಳ ಪ್ರಾಥಮಿಕ ಸಾಕ್ಷ್ಯವಾಗುವುದಿಲ್ಲ.

**58. ಎರಡನೆಯ ಸಾಕ್ಷ್ಯ.-** ಎರಡನೆಯ ಸಾಕ್ಷ್ಯವು,-

(i) ಇದರಲ್ಲಿ ಇನ್ನು ಮುಂದೆ ಒಳಗೊಂಡಿರುವ ಉಪಬಂಧಗಳ ಮೇರೆಗೆ ಕೊಡಲಾದ ಪ್ರಮಾಣಿತ ಪ್ರತಿಗಳು;

(ii) ಯಾವ ಯಾಂತ್ರಿಕ ಪ್ರಕ್ರಿಯೆಯ ಮೂಲಕ, ಮೂಲದಿಂದ ಮಾಡಿದ ಪ್ರತಿಗಳು ಸ್ವತಃ ಆ ಪ್ರತಿಯ ಖಚಿತತೆಯನ್ನು ಸುನಿಶ್ಚಿತಗೊಳಿಸುತ್ತವೆಯೋ ಆ ಪ್ರತಿಗಳು ಮತ್ತು ಅಂಥ ಪ್ರತಿಗಳೊಂದಿಗೆ ತಾಳೆ ನೋಡಲಾದ ಪ್ರತಿಗಳು;

(iii) ಮೂಲದಿಂದ ಮಾಡಿದ ಅಥವಾ ಅದರೊಡನೆ ತಾಳೆ ನೋಡಲಾದ ಪ್ರತಿಗಳು;

(iv) ದಸ್ತಾವೇಜುಗಳನ್ನು ಬರೆದುಕೊಡದಿರುವ ಪಕ್ಷಕಾರರ ವಿರುದ್ಧ ದಸ್ತಾವೇಜುಗಳ ದ್ವಿಪ್ರತಿ ಬರಹಗಳು;

(v) ತಾನೇ ಸ್ವತಃ ಅದನ್ನು ನೋಡಿರುವ ವ್ಯಕ್ತಿಯು ದಸ್ತಾವೇಜಿನ ಒಳಾಂಶಗಳ ಬಗ್ಗೆ ಕೊಡುವ ಮೌಖಿಕ ವಿವರಗಳು;

(vi) ಮೌಖಿಕ ಒಪ್ಪಿಗೆಗಳು;

(vii) ಲಿಖಿತ ಒಪ್ಪಿಗೆಗಳು;

(viii) ಮೂಲ ದಸ್ತಾವೇಜಿನಲ್ಲಿ ಅನೇಕ ಖಾತೆಗಳು ಅಥವಾ ಇತರೆ ದಸ್ತಾವೇಜುಗಳನ್ನು ಒಳಗೊಂಡಿರುವ ದಸ್ತಾವೇಜನ್ನು ಪರೀಕ್ಷಿಸಲು ನ್ಯಾಯಾಲಯದಲ್ಲಿ ಸೌಲಭ್ಯಗಳು ಇಲ್ಲದಿರುವುದರಿಂದ ಅಂಥ ದಸ್ತಾವೇಜನ್ನು ಪರೀಕ್ಷಿಸುವ ಅಥವಾ ಅಂಥ ದಸ್ತಾವೇಜುಗಳನ್ನು ಪರಿಶೀಲಿಸುವಲ್ಲಿ ಕೌಶಲ್ಯವುಳ್ಳ ಆ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು

- ಒಳಗೊಳ್ಳುತ್ತದೆ.

*ದೃಷ್ಟಾಂತಗಳು*

(ಎ) ಮೂಲವಸ್ತುವಿನ ಛಾಯಾಚಿತ್ರವು, ಅವೆರಡನ್ನೂ ಪರಸ್ಪರ ಹೋಲಿಸಿಲ್ಲದಿದ್ದರೂ, ಛಾಯಾಚಿತ್ರ ತೆಗೆದುಕೊಂಡ ವಸ್ತುವು, ಮೂಲವಸ್ತುವೆಂದು ರುಜುವಾತಾದಾಗ ಅದರ ಒಳಾಂಶಗಳ ಬಗ್ಗೆ ಅದು ಎರಡನೆಯ ಸಾಕ್ಷ್ಯವಾಗುತ್ತದೆ.

(ಬಿ) ಪ್ರತಿ ಮಾಡುವ ಯಂತ್ರದಿಂದ ಮಾಡಿದ ಒಂದು ಪತ್ರದ ಪ್ರತಿಯನ್ನು ಮೂಲದಿಂದ ಮಾಡಲಾಗಿದೆಯೆಂದು ತೋರಿಸಿದರೆ, ಪ್ರತಿ ಮಾಡುವ ಯಂತ್ರದಿಂದ ಮಾಡಿದ ಪತ್ರದ ಪ್ರತಿಯೊಡನೆ ತಾಳೆ ನೋಡಲಾದ ಒಂದು ಪ್ರತಿಯು ಆ ಪತ್ರದ ಒಳಾಂಶಗಳ ಬಗ್ಗೆ ಎರಡನೆಯ ಸಾಕ್ಷ್ಯವಾಗುತ್ತದೆ.

(ಸಿ) ಒಂದು ಪ್ರತಿಯಿಂದ ಪ್ರತಿ ಮಾಡಿದ, ಆದರೆ ನಂತರ ಮೂಲದೊಡನೆ ತಾಳೆ ನೋಡಲಾದ ಒಂದು ಪ್ರತಿಯು ಎರಡನೆಯ ಸಾಕ್ಷ್ಯವಾಗಿದೆ; ಆದರೆ ಹಾಗೆ ತಾಳೆ ನೋಡದ ಪ್ರತಿಯು ಯಾವ ಪ್ರತಿಯನ್ನು ಯಾವ ಮೂಲದೊಡನೆ ತಾಳೆ ನೋಡಲಾಗಿದೆಯೋ ಆ ಪ್ರತಿಯಿಂದ ಅದನ್ನು ಪ್ರತಿ ಮಾಡಿದ್ದರೂ, ಮೂಲದ ಎರಡನೆಯ ಸಾಕ್ಷ್ಯವಲ್ಲ.

(ಡಿ) ಮೂಲದೊಡನೆ ತಾಳೆ ನೋಡಲಾದ ಪ್ರತಿಯ ಬಗೆಗಿನ ಮೌಖಿಕ ಹೇಳಿಕೆಯಾಗಲಿ ಅಥವಾ ಮೂಲದ ಛಾಯಾಚಿತ್ರದ ಅಥವಾ ಯಂತ್ರದಿಂದ ತೆಗೆದ ಪ್ರತಿಯ ಬಗೆಗಿನ ಮೌಖಿಕ ಹೇಳಿಕೆಯಾಗಲಿ ಮೂಲದ ಎರಡನೆಯ ಸಾಕ್ಷ್ಯವಲ್ಲ.

**59. ಪ್ರಾಥಮಿಕ ಸಾಕ್ಷ್ಯದಿಂದ ದಸ್ತಾವೇಜುಗಳನ್ನು ರುಜುವಾತುಪಡಿಸುವುದು.-** ಇದರಲ್ಲಿ ಈ ಮುಂದೆ ನಮೂದಿಸಿರುವ ಸಂದರ್ಭಗಳ ಹೊರತು ದಸ್ತಾವೇಜುಗಳನ್ನು ಪ್ರಾಥಮಿಕ ಸಾಕ್ಷ್ಯದಿಂದಲೇ ರುಜುವಾತುಪಡಿಸತಕ್ಕದ್ದು.

**60. ಯಾವ ಸಂದರ್ಭಗಳಲ್ಲಿ ದಸ್ತಾವೇಜುಗಳಿಗೆ ಸಂಬಂಧಪಟ್ಟ ಎರಡನೆಯ ಸಾಕ್ಷ್ಯವನ್ನು ಕೊಡಬಹುದು.-** ಈ ಕೆಳಗಿನ ಸಂದರ್ಭಗಳಲ್ಲಿ ದಸ್ತಾವೇಜಿನ ಅಸ್ತಿತ್ವ, ಸ್ಥಿತಿ ಅಥವಾ ಒಳಾಂಶಗಳ ಬಗ್ಗೆ ಎರಡನೆಯ ಸಾಕ್ಷ್ಯವನ್ನು ಕೊಡಬಹುದು, ಎಂದರೆ:-

(ಎ) (i) ಯಾವ ವ್ಯಕ್ತಿಯ ವಿರುದ್ಧ ದಸ್ತಾವೇಜನ್ನು ರುಜುವಾತುಪಡಿಸಬೇಕೆಂದು ಕೋರಲಾಗಿದೆಯೋ ಆ ವ್ಯಕ್ತಿಯ; ಅಥವಾ

(ii) ನ್ಯಾಯಾಲಯದ ಆದೇಶಿಕೆಗೆ ಸಿಲುಕದಿರುವ ಅಥವಾ ಅದಕ್ಕೆ ಒಳಪಡದಿರುವ ಯಾರೇ ವ್ಯಕ್ತಿಯ; ಅಥವಾ

(iii) ಅದನ್ನು ಹಾಜರುಪಡಿಸುವುದಕ್ಕೆ ಕಾನೂನುಸಮ್ಮತವಾಗಿ ಬದ್ಧನಾಗಿರುವ ಯಾರೇ ವ್ಯಕ್ತಿಯ

- ಸ್ವಾಧೀನದಲ್ಲಿ ಅಥವಾ ಅಧಿಕಾರಕ್ಕೊಳಪಟ್ಟು ಮೂಲವು ಇದೆಯೆಂದು ತೋರಿಸಲಾಗಿದೆಯೋ ಅಥವಾ ಕಂಡುಬರುತ್ತದೆಯೋ

ಮತ್ತು 64ನೇ ಪ್ರಕರಣದಲ್ಲಿ ನಮೂದಿಸಿದ ನೋಟೀಸು ಜಾರಿಯಾದ ನಂತರವೂ ಅದನ್ನು ಅಂಥ ವ್ಯಕ್ತಿಯು ಹಾಜರುಪಡಿಸದಿರುವಾಗ;

(ಬಿ) ಮೂಲದ ಅಸ್ತಿತ್ವ, ಸ್ಥಿತಿ ಅಥವಾ ಒಳಾಂಶಗಳನ್ನು ಯಾರ ವಿರುದ್ಧ ರುಜುವಾತುಪಡಿಸಲಾಗಿದೆಯೋ ಆ ವ್ಯಕ್ತಿ ಅಥವಾ ಅವನ ಹಿತಾಸಕ್ತಿಯ ಪ್ರತಿನಿಧಿಯು ಅವುಗಳನ್ನು ಬರಹದ ಮೂಲಕ ಒಪ್ಪಿದ್ದಾನೆಂದು ರುಜುವಾತುಪಡಿಸಿರುವಾಗ;

(ಸಿ) ಮೂಲವು ನಾಶವಾದಾಗ ಅಥವಾ ಅದು ಕಳೆದುಹೋದಾಗ ಅಥವಾ ಅದರ ಒಳಾಂಶಗಳ ಬಗ್ಗೆ ಸಾಕ್ಷ್ಯ ಕೊಡುವ ಪಕ್ಷಕಾರನು, ತನ್ನ ಸ್ವಂತ ತಪ್ಪಿನಿಂದಾಗಿ ಅಥವಾ ನಿರ್ಲಕ್ಷ್ಯದಿಂದಾಗಿ ಉಂಟಾಗದ ಇತರ ಯಾವುದೇ ಕಾರಣಕ್ಕಾಗಿ ಅದನ್ನು ಯುಕ್ತ ಕಾಲದಲ್ಲಿ ಹಾಜರುಪಡಿಸಲಾಗದಿದ್ದಾಗ;

(ಡಿ) ಮೂಲವು ಸುಲಭವಾಗಿ ಸ್ಥಳಾಂತರಿಸಲಾಗದ ಸ್ವರೂಪದ್ದಾಗಿರುವಾಗ;

(ಇ) ಮೂಲವು, 74ನೇ ಪ್ರಕರಣದ ಅರ್ಥದಲ್ಲಿ ಸಾರ್ವಜನಿಕ ದಸ್ತಾವೇಜು ಆಗಿರುವಾಗ;

(ಎಫ್) ಮೂಲವು ಪ್ರಮಾಣಿತ ಪ್ರತಿಯನ್ನು ಸಾಕ್ಷ್ಯವಾಗಿ ಕೊಡಲು ಈ ಅಧಿನಿಯಮವು ಅಥವಾ ಭಾರತದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಅನುಮತಿಸುವ ದಸ್ತಾವೇಜು ಆಗಿರುವಾಗ;

(ಜಿ) ಮೂಲವು ನ್ಯಾಯಾಲಯದಲ್ಲಿ ಸುಲಭವಾಗಿ ಪರೀಕ್ಷಿಸಲಾಗದ ಅನೇಕ ಖಾತೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಒಳಗೊಂಡಿರುವಾಗ ಮತ್ತು ರುಜುವಾತುಪಡಿಸಬೇಕಾದ ಸಂಗತಿಯು ಇಡೀ ಸಂಗ್ರಹದ ಸಾಮಾನ್ಯ ಫಲಿತಾಂಶವಾಗಿರುವಾಗ.

*ವಿವರಣೆ.*- ಈ ಕೆಳಕಂಡ ಖಂಡಗಳ ಉದ್ದೇಶಗಳಿಗಾಗಿ,-

(i) (ಎ), (ಸಿ) ಮತ್ತು (ಡಿ) ಖಂಡಗಳ ಉದ್ದೇಶಗಳಿಗಾಗಿ, ದಸ್ತಾವೇಜಿನ ಒಳಾಂಶಗಳ ಬಗ್ಗೆ ಯಾವುದೇ ಎರಡನೆಯ ಸಾಕ್ಷ್ಯವು ಅಂಗೀಕಾರಾರ್ಹವಾಗಿರುತ್ತದೆ;

(ii) (ಬಿ) ಖಂಡದ ಉದ್ದೇಶಕ್ಕಾಗಿ, ಲಿಖಿತ ಒಪ್ಪಿಗೆಯು ಅಂಗೀಕಾರಾರ್ಹವಾಗಿರುತ್ತದೆ;

(iii) (ಇ) ಅಥವಾ (ಎಫ್) ಖಂಡಗಳ ಉದ್ದೇಶಗಳಿಗಾಗಿ, ದಸ್ತಾವೇಜಿನ ಪ್ರಮಾಣಿತ ಪ್ರತಿಯು ಅಂಗೀಕಾರಾರ್ಹವಾಗಿರುವುದು. ಆದರೆ, ಇತರ ಯಾವುದೇ ಬಗೆಯ ಎರಡನೆಯ ಸಾಕ್ಷ್ಯವು ಅಂಗೀಕಾರಾರ್ಹವಾಗಿರುವುದಿಲ್ಲ;

(iv) (ಜಿ) ಖಂಡದ ಉದ್ದೇಶಕ್ಕಾಗಿ, ದಸ್ತಾವೇಜುಗಳನ್ನು ಪರೀಕ್ಷಿಸಿರುವ ಮತ್ತು ಅಂಥ ದಸ್ತಾವೇಜುಗಳನ್ನು ಪರೀಕ್ಷಿಸುವಲ್ಲಿ ಕೌಶಲ್ಯವುಳ್ಳ ಯಾರೇ ವ್ಯಕ್ತಿಯು ದಸ್ತಾವೇಜುಗಳ ಸಾಮಾನ್ಯ ಫಲಿತಾಂಶದ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

**61. ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆ.-** ಈ ಅಧಿನಿಯಮದಲ್ಲಿರುವುದು ಯಾವುದೂ, ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯೆಂಬ ಕಾರಣದ ಮೇಲೆ ಸಾಕ್ಷ್ಯದಲ್ಲಿ ಅದರ ಅಂಗೀಕಾರಾರ್ಹತೆಯನ್ನು ನಿರಾಕರಿಸುವುದಕ್ಕೆ ಅನ್ವಯಿಸತಕ್ಕದ್ದಲ್ಲ ಮತ್ತು ಅಂಥ ದಾಖಲೆಯು 63ನೇ ಪ್ರಕರಣಕ್ಕೆ ಒಳಪಟ್ಟು, ಇತರೆ ದಸ್ತಾವೇಜಿನಂತೆಯೇ ಅದೇ ರೀತಿಯ ಕಾನೂನು ಪರಿಣಾಮ, ಸಿಂಧುತ್ವ ಮತ್ತು ಜಾರಿಗೊಳಿಸುವಿಕೆಯನ್ನು ಹೊಂದಿರತಕ್ಕದ್ದು.

**62. ವಿದ್ಯುನ್ಮಾನ ದಾಖಲೆಗೆ ಸಂಬಂಧಿಸಿದ ಸಾಕ್ಷ್ಯದ ಬಗೆಗಿನ ವಿಶೇಷ ಉಪಬಂಧಗಳು.-** 63ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವಿದ್ಯುನ್ಮಾನ ದಾಖಲೆಗಳ ಒಳಾಂಶಗಳನ್ನು ರುಜುವಾತುಪಡಿಸಬಹುದು.

**63. ವಿದ್ಯುನ್ಮಾನ ದಾಖಲೆಗಳ ಅಂಗೀಕಾರಾರ್ಹತೆ.-** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗಿಯೂ, ಕಾಗದದ ಮೇಲೆ ಮುದ್ರಿತವಾದ, ಗಣಕಯಂತ್ರ ಅಥವಾ ಯಾವುದೇ ಸಂವಹನ ಸಾಧನದಿಂದ ಸಿದ್ಧಪಡಿಸಲಾದ ದೃಷ್ಟಿಗೋಚರ (ಆಪ್ಟಿಕಲ್) ಅಥವಾ ಅಯಸ್ಕಾಂತೀಯ (ಮ್ಯಾಗ್ನಟಿಕ್) ಮಾಧ್ಯಮದಲ್ಲಿ ಅಥವಾ ಅರೆವಾಹಕ (ಸೆಮಿಕಂಡಕ್ಟರ್) ಮೆಮೊರಿಯಲ್ಲಿ ಸಂಗ್ರಹಿಸಲಾದ, ದಾಖಲಿಸಲಾದ ಅಥವಾ ಪ್ರತಿ ಮಾಡಲಾದ ಅಥವಾ ಯಾವುದೇ ವಿದ್ಯುನ್ಮಾನ ರೂಪದಲ್ಲಿ ಅನ್ಯಥಾ ಸಂಗ್ರಹಿಸಲಾದ, ದಾಖಲಿಸಲಾದ ಅಥವಾ ಪ್ರತಿ ಮಾಡಲಾದ ವಿದ್ಯುನ್ಮಾನ ದಾಖಲೆಯಲ್ಲಿ ಒಳಗೊಂಡಿರುವ ಯಾವುದೇ ಮಾಹಿತಿಯನ್ನು ಸಹ (ಇದರಲ್ಲಿ ಇನ್ನು ಮುಂದೆ ಗಣಕಯಂತ್ರ ಉತ್ಪನ್ನ ಎಂದು ಉಲ್ಲೇಖಿಸಲಾಗಿದೆ) ಈ ಪ್ರಕರಣದಲ್ಲಿ ನಮೂದಿಸಲಾದ ಷರತ್ತುಗಳು ಮಾಹಿತಿಗೆ ಮತ್ತು ಸಂಬಂಧಪಟ್ಟ ಗಣಕಯಂತ್ರಕ್ಕೆ ಸಂಬಂಧಿಸಿದಂತೆ ತೃಪ್ತಿಕರವಾಗಿದ್ದರೆ, ಅದನ್ನು ದಸ್ತಾವೇಜು ಎಂದು ಭಾವಿಸತಕ್ಕದ್ದು ಮತ್ತು ಅಂಗೀಕಾರಾರ್ಹವಾಗಿರುವ ಪ್ರತ್ಯಕ್ಷ ಸಾಕ್ಷ್ಯವಿದ್ದು ಮೂಲ ಪ್ರತಿಯಲ್ಲಿರುವ ಯಾವುದೇ ಒಳಾಂಶವನ್ನು ಅಥವಾ ಅದರಲ್ಲಿ ಹೇಳಲಾದ ಯಾವುದೇ ಸಂಗತಿಯು ಸಾಕ್ಷ್ಯವೆಂದು, ಯಾವುದೇ ಹೆಚ್ಚಿನ ರುಜುವಾತು ಇಲ್ಲದೆ ಮತ್ತು ಮೂಲ ಪ್ರತಿಯನ್ನು ಹಾಜರುಪಡಿಸದೆಯೇ, ಯಾವುದೇ ವ್ಯವಹರಣೆಯಲ್ಲಿ ಅಂಗೀಕಾರಾರ್ಹವಾಗತಕ್ಕದ್ದು.

(2) ಗಣಕಯಂತ್ರದ ಉತ್ಪನ್ನಕ್ಕೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(ಎ) ಗಣಕಯಂತ್ರದ ಅಥವಾ ಸಂಪರ್ಕ ಸಾಧನದ ಬಳಕೆಯ ಮೇಲೆ ಕಾನೂನುಬದ್ಧ ನಿಯಂತ್ರಣ ಹೊಂದಿರುವ ವ್ಯಕ್ತಿಯು, ಆ ಅವಧಿಯೊಳಗೆ ನಿಯತವಾಗಿ ನಿರ್ವಹಿಸಿದ ಯಾವುದೇ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಸೃಷ್ಟಿಸಲು, ಸಂಗ್ರಹಿಸಲು ಅಥವಾ ಸಂಸ್ಕರಿಸಲು ಗಣಕಯಂತ್ರವನ್ನು ಅಥವಾ ಸಂಪರ್ಕ ಸಾಧನವನ್ನು ನಿಯತವಾಗಿ ಬಳಸಿದ ಅವಧಿಯಲ್ಲಿ ಗಣಕಯಂತ್ರ ಅಥವಾ ಸಂಪರ್ಕ ಸಾಧನವು ಉತ್ಪಾದಿಸಿದ ಮಾಹಿತಿಯನ್ನು ಒಳಗೊಂಡ ಗಣಕಯಂತ್ರ ಉತ್ಪತ್ತಿ (ಔಟ್‌ಪುಟ್);

(ಬಿ) ಸದರಿ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಯಲ್ಲಿ ಒಳಗೊಂಡ ಮಾಹಿತಿಯ ಪ್ರಕಾರವು ಅಥವಾ ಹಾಗೆ ಒಳಗೊಂಡ ಮಾಹಿತಿ ಪ್ರಕಾರವನ್ನು ಸದರಿ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಪಡೆಯಲಾಗಿದ್ದು, ಅದನ್ನು ಗಣಕಯಂತ್ರದೊಳಕ್ಕೆ ಅಥವಾ ಸಂಪರ್ಕ ಸಾಧನದೊಳಕ್ಕೆ ನಿಯಮಿತವಾಗಿ ಸೇರಿಸುವುದು;

(ಸಿ) ಸದರಿ ಅವಧಿಯ ಪ್ರಮುಖ ಭಾಗದುದ್ದಕ್ಕೂ ಗಣಕಯಂತ್ರವು ಅಥವಾ ಸಂಪರ್ಕ ಸಾಧನವು ಸಮರ್ಪಕ ಕಾರ್ಯನಿರ್ವಹಿಸಿದ್ದರೆ ಅಥವಾ ನಿರ್ವಹಿಸಿರದಿದ್ದರೆ, ಸರಿಯಾಗಿ ಕಾರ್ಯನಿರ್ವಹಿಸಿರದ ಅವಧಿಯಲ್ಲಿ ಅಥವಾ ಕಾರ್ಯನಿರ್ವಹಿಸದೆ ಇದ್ದಂಥ ಯಾವುದೇ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಗಳಿಗೆ ಅಥವಾ ಅದರ ಒಳಾಂಶಗಳ ಖಚಿತತೆಗೆ ಯಾವುದೇ ರೀತಿಯ ಪರಿಣಾಮ ಉಂಟಾಗದಿರುವುದು; ಮತ್ತು

(ಡಿ) ವಿದ್ಯುನ್ಮಾನ ದಾಖಲೆಯೂ ಒಳಗೊಂಡಿರುವ ಮಾಹಿತಿಯು ಸದರಿ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಗಣಕಯಂತ್ರದಲ್ಲಿ ಅಥವಾ ಸಂಪರ್ಕ ಸಾಧನದಲ್ಲಿ ಸೇರಿಸಿರುವ ಅಂಥ ಮಾಹಿತಿಯಿಂದ ಪುನರುತ್ಪತ್ತಿಯಾದುದು ಅಥವಾ ಪಡೆದಿರುವುದು.

(3) ಉಪಪ್ರಕರಣ (2)ರ (ಎ) ಖಂಡದಲ್ಲಿ ನಮೂದಿಸಿರುವಂತೆ ಆ ಅವಧಿಯಲ್ಲಿ ನಿಯಮಿತವಾಗಿ ನಿರ್ವಹಿಸಿದ ಯಾವುದೇ ಕಾರ್ಯಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು, ಸೃಜಿಸುವ, ಸಂಗ್ರಹಿಸುವ ಅಥವಾ ಸಂಸ್ಕರಿಸುವ ಕಾರ್ಯವನ್ನು ಯಾವುದೇ ಅವಧಿಯಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಗಣಕಯಂತ್ರಗಳಿಂದ ಅಥವಾ ಸಂಪರ್ಕ ಸಾಧನದಿಂದ ನಿಯತವಾಗಿ ಅಂದರೆ:-

(ಎ) ಏಕ ವಿಧಾನದಲ್ಲಿ (standalone mode); ಅಥವಾ

(ಬಿ) ಒಂದು ಗಣಕ ವ್ಯವಸ್ಥೆಯಲ್ಲಿ; ಅಥವಾ

(ಸಿ) ಒಂದು ಗಣಕಯಂತ್ರ ಜಾಲದಲ್ಲಿ; ಅಥವಾ

(ಡಿ) ಮಾಹಿತಿ ಸೃಜನೆ ಅಥವಾ ಸಂಸ್ಕರಣೆ ಮತ್ತು ಸಂಗ್ರಹಣಾ ಮಾಹಿತಿಯನ್ನು ಒದಗಿಸುವ ಒಂದು ಗಣಕಯಂತ್ರ ಸಂಪನ್ಮೂಲದಲ್ಲಿ;

(ಇ) ಮಧ್ಯವರ್ತಿ ಮುಖಾಂತರ

- ನಿರ್ವಹಿಸಿರುವಲ್ಲಿ ಆ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ಬಳಸಲಾದ ಎಲ್ಲ ಗಣಕಯಂತ್ರಗಳನ್ನು ಅಥವಾ ಸಂಪರ್ಕ ಸಾಧನಗಳನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಒಂದೇ ಗಣಕಯಂತ್ರವೆಂದು ಅಥವಾ ಸಂಪರ್ಕ ಸಾಧನವೆಂದು ಪರಿಗಣಿಸತಕ್ಕದ್ದು ಮತ್ತು ಈ ಪ್ರಕರಣದಲ್ಲಿ ಗಣಕಯಂತ್ರಕ್ಕೆ ಅಥವಾ ಸಂಪರ್ಕ ಸಾಧನಕ್ಕೆ ಮಾಡಲಾದ ಉಲ್ಲೇಖಗಳನ್ನು ಅದಕ್ಕನುಗುಣವಾಗಿ ಅರ್ಥೈಸತಕ್ಕದ್ದು.

(4) ಯಾವುವೇ ವ್ಯವಹರಣೆಗಳಲ್ಲಿ ಈ ಪ್ರಕರಣದ ಬಲದಿಂದಾಗಿ ಸಾಕ್ಷ್ಯದಲ್ಲಿ ಹೇಳಿಕೆಯನ್ನು ನೀಡಲು ಅಪೇಕ್ಷಿಸಿದಾಗ ಈ ಮುಂದಿನ ಯಾವುವೇ ವಿಷಯಗಳ ಬಗೆಗಿನ ಪ್ರಮಾಣಪತ್ರವನ್ನು ಅಂಗೀಕಾರಕ್ಕಾಗಿ ಅದನ್ನು ಸಲ್ಲಿಸುವ ಪ್ರತಿಯೊಂದು ಸಂದರ್ಭದಲ್ಲೂ ವಿದ್ಯುನ್ಮಾನ ದಾಖಲೆಗಳ ಜೊತೆಗೆ ಸಲ್ಲಿಸತಕ್ಕದ್ದು, ಎಂದರೆ:-

(ಎ) ಹೇಳಿಕೆಯನ್ನೊಳಗೊಂಡ ವಿದ್ಯುನ್ಮಾನ ದಾಖಲೆಯನ್ನು ಗುರುತಿಸುವ ಮತ್ತು ಅದನ್ನು ಯಾವ ರೀತಿಯಲ್ಲಿ ಉತ್ಪಾದಿಸಲಾಯಿತೆಂದು ವಿವರಿಸುವ;

(ಬಿ) ವಿದ್ಯುನ್ಮಾನ ದಾಖಲೆಯನ್ನು (3)ನೇ ಉಪಪ್ರಕರಣದ (ಎ) ಯಿಂದ (ಇ) ಖಂಡಗಳವರೆಗೆ ಉಲ್ಲೇಖಿಸಿರುವ ಗಣಕಯಂತ್ರ ಅಥವಾ ಸಂಪರ್ಕ ಸಾಧನದ ಮೂಲಕ ಉತ್ಪಾದಿಸಲಾಯಿತೆಂದು ತೋರಿಸುವ ಉದ್ದೇಶಕ್ಕಾಗಿ

ಯುಕ್ತವೆನಿಸಬಹುದಾದಂತೆ ಆ ವಿದ್ಯುನ್ಮಾನ ದಾಖಲೆಯ ತಯಾರಿಕೆಯಲ್ಲಿ ಒಳಗೊಂಡ ಯಾವುದೇ ಸಾಧನದ ಅಂಥ ವಿವರಗಳನ್ನು ನೀಡುವ;

(ಸಿ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಷರತ್ತುಗಳಿಗೆ ಸಂಬಂಧಿಸುವ ಯಾವುವೇ ವಿಷಯಗಳ ಬಗ್ಗೆ ವ್ಯವಹರಿಸುವ

ಮತ್ತು ಗಣಕಯಂತ್ರದ ಅಥವಾ ಸಂಪರ್ಕ ಸಾಧನದ ಅಥವಾ ಸಂಬಂಧಪಟ್ಟ ಕಾರ್ಯಚಟುವಟಿಕೆಗಳ ವ್ಯವಸ್ಥಾಪನೆಯ (ಯಾವುದು ಸಮುಚಿತವೋ ಅದು) ಪ್ರಭಾರವನ್ನು ಹೊಂದಿರುವ ವ್ಯಕ್ತಿ ಮತ್ತು ತಜ್ಞನು ಸಹಿ ಮಾಡಿರುವನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವು, ಅದರಲ್ಲಿ ತಿಳಿಸಿರುವ ಯಾವುದೇ ವಿಷಯದ ಸಾಕ್ಷ್ಯವಾಗಿರತಕ್ಕದ್ದು ಮತ್ತು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣಪತ್ರದಲ್ಲಿ ಅದನ್ನು ತಿಳಿಸುವ ವ್ಯಕ್ತಿಯು ತಿಳಿದಿರುವಷ್ಟು ಮತ್ತು ನಂಬುವಷ್ಟರಮಟ್ಟಿಗೆ ತಿಳಿಸುವ ವಿಷಯಕ್ಕಾಗಿ ಸಾಕಷ್ಟಾಗಿರತಕ್ಕದ್ದು.

(5) ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಒಂದು ಗಣಕಯಂತ್ರಕ್ಕೆ ಅಥವಾ ಸಂಪರ್ಕ ಸಾಧನಕ್ಕೆ ಒದಗಿಸುವ ಮಾಹಿತಿಯನ್ನು, ಅದಕ್ಕೆ ಸೂಕ್ತ ವಿಧಾನದಲ್ಲಿ ಒದಗಿಸಿದ್ದರೆ ಮತ್ತು ಹಾಗೆ ನೇರವಾಗಿ ಒದಗಿಸಿದ್ದರೆ ಅಥವಾ (ಮನುಷ್ಯನ ಮಧ್ಯಪ್ರವೇಶದಿಂದ ಅಥವಾ ಮಧ್ಯಪ್ರವೇಶವಿಲ್ಲದೆ) ಯಾವುದೇ ಸೂಕ್ತ ಸಲಕರಣೆಯಿಂದ ಒದಗಿಸಿದ್ದರೆ ಆ ಮಾಹಿತಿಯನ್ನು ಒದಗಿಸಲಾಗಿದೆಯೆಂದು ಭಾವಿಸತಕ್ಕದ್ದು.

(ಬಿ) ಗಣಕಯಂತ್ರ ಉತ್ಪನ್ನವನ್ನು (ಔಟ್‌ಪುಟ್), ನೇರವಾಗಿಯಾಗಲಿ ಅಥವಾ (ಮನುಷ್ಯನ ಹಸ್ತಕ್ಷೇಪದಿಂದ ಅಥವಾ ಹಸ್ತಕ್ಷೇಪವಿಲ್ಲದೆ) ಯಾವುದೇ ಸೂಕ್ತ ಸಲಕರಣೆಯ ಮೂಲಕವಾಗಿಯಾಗಲಿ ಅಥವಾ (3)ನೇ ಉಪಪ್ರಕರಣದ (ಎ) ಯಿಂದ (ಇ)ವರೆಗಿನ ಖಂಡಗಳಲ್ಲಿ ಉಲ್ಲೇಖಿಸಲಾದ ಇತರೆ ವಿದ್ಯುನ್ಮಾನ ಸಾಧನಗಳ ಮೂಲಕವಾಗಿಯಾಗಲಿ ಪಡೆದಿರುವಾಗ ಅದನ್ನು ಗಣಕಯಂತ್ರದಿಂದ ಅಥವಾ ಸಂಪರ್ಕ ಸಾಧನದಿಂದ ಉತ್ಪಾದಿಸಲಾಗಿದೆಯೆಂದು ಭಾವಿಸತಕ್ಕದ್ದು.

**64. ಹಾಜರುಪಡಿಸಲು ಕೊಡುವ ನೋಟೀಸಿನ ಬಗ್ಗೆ ನಿಯಮಗಳು.-** ಎರಡನೆಯ ಸಾಕ್ಷ್ಯವನ್ನು ಕೊಡಲು ಉದ್ದೇಶಿಸುವ ಪಕ್ಷಕಾರನು ಯಾರ ಸ್ವಾಧೀನದಲ್ಲಿ ಅಥವಾ ಅಧಿಕಾರಕ್ಕೆ ಒಳಪಟ್ಟು ದಸ್ತಾವೇಜು ಇದೆಯೋ ಅಂಥ ಪಕ್ಷಕಾರನಿಗೆ ಅಥವಾ ಅವನ ನ್ಯಾಯವಾದಿಗೆ ಅಥವಾ ಪ್ರತಿನಿಧಿಗೆ ಕಾನೂನು ನಿಯಮಿಸಿದ ರೀತಿಯಲ್ಲಿ ಅದನ್ನು ಹಾಜರುಪಡಿಸಬೇಕೆಂದು ನೋಟೀಸನ್ನು ಮತ್ತು ಕಾನೂನಿನ ಮೂಲಕ ಯಾವ ನೋಟೀಸನ್ನೂ ನಿಯಮಿಸಿರದಿದ್ದರೆ, ಮೊಕದ್ದಮೆಯ ಸಂದರ್ಭಗಳ ಮೇರೆಗೆ ಯುಕ್ತವೆಂದು ನ್ಯಾಯಾಲಯವು ಪರಿಗಣಿಸುವಂಥ ನೋಟೀಸನ್ನು ಹಿಂದೆಯೇ ಕೊಟ್ಟಿದ್ದ ಹೊರತು 60ನೇ ಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿತವಾದ ದಸ್ತಾವೇಜುಗಳ ಒಳಾಂಶಗಳ ಬಗ್ಗೆ ಎರಡನೆಯ ಸಾಕ್ಷ್ಯವನ್ನು ಕೊಡತಕ್ಕದ್ದಲ್ಲ:

ಪರಂತು, ಈ ಕೆಳಗಿನ ಯಾವುದೇ ಸಂದರ್ಭದಲ್ಲೇ ಆಗಲಿ ಅಥವಾ ನ್ಯಾಯಾಲಯವು ಅನಾವಶ್ಯವೆಂದು ಭಾವಿಸುವ ಇತರ ಯಾವುದೇ ಸಂದರ್ಭದಲ್ಲಿ ಎರಡನೆಯ ಸಾಕ್ಷ್ಯವನ್ನು ಅಂಗೀಕಾರಾರ್ಹ ಮಾಡುವುದಕ್ಕಾಗಿ,-

(ಎ) ರುಜುವಾತುಪಡಿಸಬೇಕಾದ ದಸ್ತಾವೇಜು ತನ್ನಷ್ಟಕ್ಕೇನೆ ನೋಟೀಸು ಆಗಿರುವಾಗ;

(ಬಿ) ಮೊಕದ್ದಮೆಯ ಸ್ವರೂಪದಿಂದ ಎದುರು ಪಕ್ಷಕಾರನು ತಾನು ಅದನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಲಾಗುವುದೆಂದು ತಿಳಿದಿರಲೇಬೇಕಾದಾಗ;

(ಸಿ) ಎದುರು ಪಕ್ಷಕಾರನು ಮೋಸದಿಂದ ಅಥವಾ ಬಲಪ್ರಯೋಗಿಸಿ ಮೂಲ ದಸ್ತಾವೇಜನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾನೆಂದು ಕಂಡುಬಂದಾಗ ಅಥವಾ ರುಜುವಾತಾದಾಗ;

(ಡಿ) ಎದುರು ಪಕ್ಷಕಾರನು ಅಥವಾ ಅವನ ಏಜೆಂಟನು ಮೂಲ ದಸ್ತಾವೇಜನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ;

(ಇ) ಎದುರು ಪಕ್ಷಕಾರನು ಅಥವಾ ಅವನ ಏಜೆಂಟನು ದಸ್ತಾವೇಜು ಕಳೆದುಹೋಗಿವೆಯೆಂದು ಒಪ್ಪಿಕೊಂಡಾಗ;

(ಎಫ್) ದಸ್ತಾವೇಜನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು ನ್ಯಾಯಾಲಯದ ಆದೇಶಿಕೆಗೆ ಸಿಲುಕದಿರುವಾಗ ಅಥವಾ ಅದಕ್ಕೆ ಒಳಪಡದಿರುವಾಗ

- ಅಂಥ ನೋಟೀಸಿನ ಅಗತ್ಯವಿರತಕ್ಕದ್ದಲ್ಲ.

**65. ಹಾಜರುಪಡಿಸಿದ ದಸ್ತಾವೇಜಿಗೆ ಸಹಿ ಮಾಡಿದ್ದಾನೆಂದು ಅಥವಾ ಅದನ್ನು ಬರೆದಿದ್ದಾನೆಂದು ಹೇಳಲಾದ ವ್ಯಕ್ತಿಯ ಸಹಿ ಮತ್ತು ಕೈಬರಹದ ರುಜುವಾತು.-** ಯಾರೇ ವ್ಯಕ್ತಿಯು, ಒಂದು ದಸ್ತಾವೇಜಿಗೆ ಸಹಿ ಹಾಕಿದ್ದಾನೆಂದು ಅಥವಾ ಅದನ್ನು ಪೂರ್ಣವಾಗಿ ಅಥವಾ ಭಾಗಶಃ ಬರೆದಿದ್ದಾನೆಂದು ಹೇಳಲಾಗಿದ್ದರೆ, ಆ ಸಹಿಯನ್ನು ಅಥವಾ ದಸ್ತಾವೇಜಿನ ಎಷ್ಟು ಭಾಗವನ್ನು ಅವನು ಬರೆದಿದ್ದಾನೆಂದು ಹೇಳಲಾಗಿದೆಯೋ ಆ ಭಾಗದ ಬರವಣಿಗೆಯು ಅವನ ಕೈಬರಹದಲ್ಲಿದೆಯೆಂಬುದನ್ನು ರುಜುವಾತುಪಡಿಸಬೇಕು.

**66. ವಿದ್ಯುನ್ಮಾನ ಸಹಿಗೆ ಸಂಬಂಧಿಸಿದ ರುಜುವಾತು.-** ಸುರಕ್ಷಿತ ವಿದ್ಯುನ್ಮಾನ ಸಹಿಯ ಸಂದರ್ಭದಲ್ಲಿಯ ಹೊರತು, ಯಾರೇ ವಂತಿಗೆದಾರನ ವಿದ್ಯುನ್ಮಾನ ಸಹಿಯನ್ನು ಒಂದು ವಿದ್ಯುನ್ಮಾನ ದಾಖಲೆಗೆ ಸೇರಿಸಲಾಗಿದೆಯೆಂದು ಹೇಳಿರುವಾಗ ಅಂಥ ವಿದ್ಯುನ್ಮಾನ ಸಹಿಯು ಆ ವಂತಿಗೆದಾರನ ವಿದ್ಯುನ್ಮಾನ ಸಹಿಯೆಂದು ರುಜುವಾತುಪಡಿಸತಕ್ಕದ್ದು.

**67. ಕಾನೂನಿನ ಮೂಲಕ ದೃಢೀಕರಣಗೊಳಿಸಬೇಕೆಂದು ಅಗತ್ಯಪಡಿಸಲಾಗಿರುವ ದಸ್ತಾವೇಜನ್ನು ಬರೆದುಕೊಟ್ಟ ಬಗ್ಗೆ ರುಜುವಾತು.-** ಕಾನೂನಿನ ಮೇರೆಗೆ ಒಂದು ದಸ್ತಾವೇಜನ್ನು ದೃಢೀಕರಿಸಬೇಕಾಗಿರುವಾಗ, ದೃಢೀಕರಿಸುವ ಒಬ್ಬ ಸಾಕ್ಷಿದಾರನು ಜೀವಂತವಾಗಿದ್ದರೆ ಮತ್ತು ನ್ಯಾಯಾಲಯದ ಪ್ರಕ್ರಿಯೆಗೆ ಒಳಪಟ್ಟಿದ್ದರೆ ಮತ್ತು ಅವನು ಸಾಕ್ಷ್ಯವನ್ನು ಕೊಡಲು ಸಮರ್ಥನಾಗಿದ್ದರೆ, ಅದನ್ನು ಬರೆದುಕೊಟ್ಟಿರುವುದನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಕೊನೆ ಪಕ್ಷ ಒಬ್ಬ ದೃಢೀಕರಣ ಸಾಕ್ಷಿದಾರನನ್ನು ಕರೆಸುವವರೆಗೆ ಅದನ್ನು ಸಾಕ್ಷ್ಯವಾಗಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಯಾವ ವ್ಯಕ್ತಿಯು ಆ ದಸ್ತಾವೇಜನ್ನು ಬರೆದುಕೊಟ್ಟಿದ್ದಾನೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯು ತಾನು ಅದನ್ನು ಬರೆದಿದ್ದೇನೆಂಬುದನ್ನು ನಿರ್ದಿಷ್ಟವಾಗಿ ನಿರಾಕರಿಸಿದ ಹೊರತು, ಮರಣಶಾಸನವಲ್ಲದ ಆದರೆ ಭಾರತ ನೋಂದಣಿ ಅಧಿನಿಯಮ, 1908 (1908ರ 16)ರ ಉಪಬಂಧಗಳಿಗೆ ಅನುಸಾರವಾಗಿ ನೋಂದಾಯಿಸಲಾಗಿರುವ ಯಾವುದೇ ದಸ್ತಾವೇಜನ್ನು ಬರೆದುಕೊಟ್ಟಿರುವುದನ್ನು ರುಜುವಾತುಪಡಿಸುವ ಬಗ್ಗೆ ಒಬ್ಬ ದೃಢೀಕರಿಸುವ ಸಾಕ್ಷಿದಾರನನ್ನು ಕರೆಸುವುದು ಅವಶ್ಯಕವಾಗತಕ್ಕದ್ದಲ್ಲ.

**68. ದೃಢೀಕರಿಸುವ ಸಾಕ್ಷಿದಾರರು ದೊರಕದಿರುವಾಗ ರುಜುವಾತು.-** ದೃಢೀಕರಿಸುವ ಅಂಥ ಯಾವ ಸಾಕ್ಷಿದಾರನೂ ದೊರಕದಿದ್ದರೆ, ಕಡೇಪಕ್ಷ ಒಬ್ಬ ದೃಢೀಕರಿಸುವ ಸಾಕ್ಷಿದಾರನ ದೃಢೀಕರಣವು ಅವನ ಕೈಬರಹದಲ್ಲಿ ಇದೆಯೆಂದು ಮತ್ತು ದಸ್ತಾವೇಜನ್ನು ಬರೆದುಕೊಟ್ಟಿರುವ ವ್ಯಕ್ತಿಯ ಸಹಿಯು ಆ ವ್ಯಕ್ತಿಯ ಕೈಬರಹದಲ್ಲಿದೆಯೆಂದು ರುಜುವಾತುಪಡಿಸಬೇಕು.

**69. ದೃಢೀಕರಿಸಿದ ದಸ್ತಾವೇಜನ್ನು ಬರೆದುಕೊಟ್ಟಿರುವ ಬಗ್ಗೆ ಪಕ್ಷಕಾರನ ಒಪ್ಪಿಗೆ.-** ದೃಢೀಕರಿಸಿದ ದಸ್ತಾವೇಜನ್ನು ತಾನೇ ಬರೆದುಕೊಟ್ಟಿರುವ ಬಗ್ಗೆ ಪಕ್ಷಕಾರನ ಒಪ್ಪಿಗೆಯು, ಅದು ಕಾನೂನು ಪ್ರಕಾರ ದೃಢೀಕರಿಸಬೇಕಾದ ದಸ್ತಾವೇಜು ಆಗಿದ್ದರೂ, ಅದನ್ನು ಬರೆದುಕೊಟ್ಟಿರುವುದರ ಬಗ್ಗೆ ಅವನ ವಿರುದ್ಧ ಸಾಕಷ್ಟು ರುಜುವಾತಾಗಿರತಕ್ಕದ್ದು.

**70. ದೃಢೀಕರಿಸುವ ಸಾಕ್ಷಿದಾರನು ಆತನು ಬರೆದುಕೊಟ್ಟಿದ್ದನ್ನು ನಿರಾಕರಿಸಿದಾಗ ರುಜುವಾತು.-** ದಸ್ತಾವೇಜನ್ನು ಆತನು ಬರೆದುಕೊಟ್ಟಿರುವುದನ್ನು ದೃಢೀಕರಿಸುವ ಸಾಕ್ಷಿದಾರನು ನಿರಾಕರಿಸಿದರೆ ಅಥವಾ ನೆನಪು ಮಾಡಿಕೊಳ್ಳದಿದ್ದರೆ, ಬರೆದುಕೊಟ್ಟಿದ್ದನ್ನು ಇತರ ಸಾಕ್ಷ್ಯದಿಂದ ಅದನ್ನು ರುಜುವಾತುಪಡಿಸಬಹುದು.

**71. ದೃಢೀಕರಿಸಬೇಕೆಂದು ಕಾನೂನಿನ ಮೂಲಕ ಅಗತ್ಯಪಡಿಸಿರದ ದಸ್ತಾವೇಜಿನ ರುಜುವಾತು.-** ದೃಢೀಕರಿಸಬೇಕೆಂದು ಕಾನೂನಿನ ಮೂಲಕ ಅಗತ್ಯಪಡಿಸಿರದ ದೃಢೀಕೃತ ದಸ್ತಾವೇಜನ್ನು, ಅದನ್ನು ದೃಢೀಕರಿಸಿರದಿದ್ದರೆ ಹೇಗೋ ಹಾಗೆ ರುಜುವಾತುಪಡಿಸಬಹುದು.

**72. ಒಪ್ಪಲಾದ ಅಥವಾ ರುಜುವಾತುಪಡಿಸಲಾದ ಸಹಿ, ಬರವಣಿಗೆ ಅಥವಾ ಮೊಹರಿನ ಹೋಲಿಕೆ.-** (1) ಬರೆದಿದ್ದಾನೆಂದು ಅಥವಾ ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ವ್ಯಕ್ತಿಯ ಸಹಿಯೇ, ಬರವಣಿಗೆಯೇ ಅಥವಾ ಮೊಹರೇ ಎಂಬುದನ್ನು ನಿಶ್ಚಯಿಸುವುದಕ್ಕಾಗಿ, ಆ ವ್ಯಕ್ತಿಯು ಬರೆದಿದ್ದಾನೆಂದು ಅಥವಾ ಸಹಿ ಮಾಡಿದ್ದಾನೆಂದು ಒಪ್ಪಿದ ಅಥವಾ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿರುವ ಯಾವುದೇ ಸಹಿ, ಬರವಣಿಗೆ ಅಥವಾ ಮೊಹರನ್ನು, ಇತರ ಯಾವ ಉದ್ದೇಶಕ್ಕಾಗಿ ಆ ಸಹಿ, ಬರವಣಿಗೆ ಅಥವಾ ಮೊಹರನ್ನು ಹಾಜರುಪಡಿಸಿಲ್ಲದಿದ್ದರೂ ಅಥವಾ ರುಜುವಾತುಪಡಿಸಿರದಿದ್ದರೂ, ಅವುಗಳನ್ನು ರುಜುವಾತುಪಡಿಸಬೇಕಾಗಿರುವುದರೊಂದಿಗೆ ಹೋಲಿಸಬಹುದು.

(2) ಹಾಗೆ ಬರೆಯಲಾಗಿರುವ ಯಾವುವೇ ಪದಗಳು ಅಥವಾ ಅಂಕಿಗಳನ್ನು, ಅಂಥ ವ್ಯಕ್ತಿಯು ಬರೆದಿದ್ದಾನೆಂದು ಹೇಳಲಾಗಿರುವ ಪದಗಳು ಅಥವಾ ಅಂಕಿಗಳೊಡನೆ ಹೋಲಿಸಲು ನ್ಯಾಯಾಲಯಕ್ಕೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ನ್ಯಾಯಾಲಯದಲ್ಲಿ ಹಾಜರಿರುವ ಅಂಥ ಯಾರೇ ವ್ಯಕ್ತಿಗೆ ಯಾವುದೇ ಪದಗಳನ್ನು ಅಥವಾ ಅಂಕಿಗಳನ್ನು ಬರೆಯುವಂತೆ ನ್ಯಾಯಾಲಯವು ನಿರ್ದೇಶಿಸಬಹುದು.

(3) ಈ ಪ್ರಕರಣವು ಅವಶ್ಯಕವಾದ ಮಾರ್ಪಾಟುಗಳೊಡನೆ ಬೆರಳೊತ್ತುಗಳಿಗೂ ಅನ್ವಯಿಸುತ್ತದೆ.

**73. ಡಿಜಿಟಲ್ ಸಹಿಯ ಪರಿಶೀಲನೆಗೆ ಸಂಬಂಧಿಸಿದ ರುಜುವಾತು.-** ಒಂದು ಡಿಜಿಟಲ್ ಸಹಿಯನ್ನು ಯಾವ ವ್ಯಕ್ತಿಯು ಹಾಕಿರುವನೆಂದು ತಾತ್ಪರ್ಯವಾಗುವುದೋ ಅದು ಅವನದೆಂದು ಖಚಿತಪಡಿಸಿಕೊಳ್ಳುವುದಕ್ಕಾಗಿ, ನ್ಯಾಯಾಲಯವು,-

(ಎ) ಆ ವ್ಯಕ್ತಿಗೆ ಅಥವಾ ನಿಯಂತ್ರಕನಿಗೆ ಅಥವಾ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಡಿಜಿಟಲ್ ಸಹಿ ಪ್ರಮಾಣಪತ್ರವನ್ನು ಹಾಜರುಪಡಿಸಬೇಕೆಂದು;

(ಬಿ) ಡಿಜಿಟಲ್ ಸಹಿ ಪ್ರಮಾಣಪತ್ರದಲ್ಲಿ ಪಟ್ಟಿ ಮಾಡಿದ ಪಬ್ಲಿಕ್ ಕೀಯನ್ನು ಬಳಸಿ ಆ ವ್ಯಕ್ತಿಯು ಸೇರಿಸಿರುವುದಾಗಿ ತಾತ್ಪರ್ಯವಾಗುವ ಡಿಜಿಟಲ್ ಸಹಿಯನ್ನು ಪರಿಶೀಲಿಸಬೇಕೆಂದು

- ನಿರ್ದೇಶನ ನೀಡಬಹುದು.

***ಸಾರ್ವಜನಿಕ ದಸ್ತಾವೇಜುಗಳು***

**74. ಸಾರ್ವಜನಿಕ ಮತ್ತು ಖಾಸಗಿ ದಸ್ತಾವೇಜುಗಳು.-** (1) ಈ ಕೆಳಕಂಡ ದಸ್ತಾವೇಜುಗಳು,-

(ಎ) (i) ಸಾರ್ವಭೌಮ ಪ್ರಾಧಿಕಾರಿಯ;

(ii) ಅಧಿಕೃತ ನಿಕಾಯಗಳ ಮತ್ತು ನ್ಯಾಯ ಮಂಡಳಿಗಳ; ಮತ್ತು

(iii) ಭಾರತದ ಅಥವಾ ವಿದೇಶದ ಸಾರ್ವಜನಿಕ ಅಧಿಕಾರಿಗಳು, ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದ ಕಾರ್ಯಗಳನ್ನು ರೂಪಿಸುವ ಅಥವಾ ಕಾರ್ಯಗಳ ದಾಖಲೆಗಳನ್ನು ರೂಪಿಸುವ ದಸ್ತಾವೇಜುಗಳು;

(ಬಿ) ಯಾವುದೇ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಇಟ್ಟಿರುವ ಖಾಸಗಿ ದಸ್ತಾವೇಜುಗಳ ಸಾರ್ವಜನಿಕ ದಾಖಲೆಗಳು

- ಸಾರ್ವಜನಿಕ ದಸ್ತಾವೇಜುಗಳಾಗಿವೆ.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ದಸ್ತಾವೇಜುಗಳನ್ನು ಹೊರತುಪಡಿಸಿ, ಇತರ ಎಲ್ಲ ದಸ್ತಾವೇಜುಗಳು ಖಾಸಗಿ ದಸ್ತಾವೇಜುಗಳು ಆಗಿರುತ್ತವೆ.

**75. ಸಾರ್ವಜನಿಕ ದಸ್ತಾವೇಜುಗಳ ಪ್ರಮಾಣಿತ ಪ್ರತಿಗಳು.-** ಯಾರೇ ವ್ಯಕ್ತಿಯು, ಪರಿಶೀಲಿಸಲು ಹಕ್ಕನ್ನು ಹೊಂದಿರುವ ಸಾರ್ವಜನಿಕ ದಸ್ತಾವೇಜನ್ನು ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯೂ, ಅದರ ಒಂದು ಪ್ರತಿಯನ್ನು ಆ ವ್ಯಕ್ತಿಯು ಕೋರಿದಾಗ ಆ ಬಗ್ಗೆ ಕಾನೂನುಸಮ್ಮತವಾದ ಶುಲ್ಕವನ್ನು ಸಂದಾಯ ಮಾಡಿದ ನಂತರ, ಸಂದರ್ಭಾನುಸಾರ, ಅದು ಅಂಥ ದಸ್ತಾವೇಜಿನ ಅಥವಾ ಅದರ ಭಾಗದ ಯಥಾಪ್ರತಿಯೆಂದು ಅಂಥ ಪ್ರತಿಯ ಅಡಿಯಲ್ಲಿ ಬರೆದ ಪ್ರಮಾಣಪತ್ರದೊಡನೆ ಅವನಿಗೆ ಕೊಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರಕ್ಕೆ ಅಧಿಕಾರಿಯು ದಿನಾಂಕವನ್ನು ನಮೂದಿಸತಕ್ಕದ್ದು ಮತ್ತು ತನ್ನ ಹೆಸರನ್ನು ಮತ್ತು ತನ್ನ ಹುದ್ದೆಯ ಹೆಸರನ್ನು ನಮೂದಿಸಿ ಸಹಿ ಹಾಕತಕ್ಕದ್ದು ಮತ್ತು ಅಂಥ ಅಧಿಕಾರಿಯು ಮೊಹರನ್ನು ಉಪಯೋಗಿಸಲು ಕಾನೂನು ಪ್ರಕಾರ ಅಧಿಕಾರ ಹೊಂದಿರುವಾಗ, ಮೊಹರನ್ನು ಹಾಕತಕ್ಕದ್ದು ಮತ್ತು ಹಾಗೆ ಪ್ರಮಾಣಿಸಿದಂಥ ಪ್ರತಿಗಳನ್ನು ಪ್ರಮಾಣಿತ ಪ್ರತಿಗಳೆಂದು ಕರೆಯತಕ್ಕದ್ದು.

*ವಿವರಣೆ.-* ತನ್ನ ಹುದ್ದೆಯ ಕರ್ತವ್ಯ ನಿರ್ವಹಣೆಯ ಸಾಮಾನ್ಯ ಕ್ರಮದಲ್ಲಿ ಅಂಥ ಪ್ರತಿಗಳನ್ನು ಕೊಡಲು ಅಧಿಕಾರ ಹೊಂದಿರುವ ಯಾರೇ ಅಧಿಕಾರಿಯು ಈ ಪ್ರಕರಣದ ಅರ್ಥದಲ್ಲಿ ಅಂಥ ದಸ್ತಾವೇಜುಗಳನ್ನು ಅಭಿರಕ್ಷೆಯಲ್ಲಿ ಇಟ್ಟುಕೊಂಡಿದ್ದಾನೆಂದು ಭಾವಿಸತಕ್ಕದ್ದು.

**76. ಪ್ರಮಾಣಿತ ಪ್ರತಿಗಳನ್ನು ಹಾಜರುಪಡಿಸುವ ಮೂಲಕ ದಸ್ತಾವೇಜುಗಳ ರುಜುವಾತು.-** ಅಂಥ ಪ್ರಮಾಣಿತ ಪ್ರತಿಗಳನ್ನು, ಅವು ಯಾವುದರ ಪ್ರತಿಗಳೆಂದು ತಾತ್ಪರ್ಯವಾಗುವುದೋ ಆ ಸಾರ್ವಜನಿಕ ದಸ್ತಾವೇಜುಗಳ ಅಥವಾ ಅವುಗಳ ಭಾಗಗಳ ಒಳಾಂಶಗಳನ್ನು ರುಜುವಾತುಪಡಿಸುವುದಕ್ಕಾಗಿ ಹಾಜರುಪಡಿಸಬಹುದು.

**77. ಇತರ ಸರ್ಕಾರಿ ದಸ್ತಾವೇಜುಗಳ ರುಜುವಾತು.-** ಈ ಕೆಳಕಂಡ ಸಾರ್ವಜನಿಕ ದಸ್ತಾವೇಜುಗಳನ್ನು ಈ ಕೆಳಕಂಡಂತೆ,-

(ಎ) ಕೇಂದ್ರ ಸರ್ಕಾರದ ಯಾವುದೇ ಮಂತ್ರಾಲಯಗಳ ಮತ್ತು ಇಲಾಖೆಗಳ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಯಾವುದೇ ಇಲಾಖೆಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತದ ಅಧಿನಿಯಮಗಳನ್ನು, ಆದೇಶಗಳನ್ನು ಅಥವಾ ಅಧಿಸೂಚನೆಗಳನ್ನು,-

(i) ಅನುಕ್ರಮವಾಗಿ ಆ ಇಲಾಖೆಗಳ ಮುಖ್ಯಾಧಿಕಾರಿಗಳಿಂದ ಪ್ರಮಾಣಿತವಾದ, ಇಲಾಖೆಗಳ ದಾಖಲೆಗಳ ಮೂಲಕ; ಅಥವಾ

(ii) ಅಂಥ ಯಾವುದೇ ಸರ್ಕಾರದ ಆದೇಶದ ಮೇರೆಗೆ ಮುದ್ರಿತವಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜಿನ ಮೂಲಕ;

(ಬಿ) ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲಗಳ ವ್ಯವಹರಣೆಗಳನ್ನು, ಅನುಕ್ರಮವಾಗಿ ಆ ನಿಕಾಯಗಳ ನಿಯತಕಾಲಿಕೆಗಳ ಮೂಲಕ ಅಥವಾ ಪ್ರಕಟವಾದ ಅಧಿನಿಯಮಗಳ ಅಥವಾ ಅವುಗಳ ಉದ್ಧೃತ ಭಾಗಗಳ ಮೂಲಕ ಅಥವಾ ಸಂಬಂಧಪಟ್ಟ ಸರ್ಕಾರದ ಆದೇಶದ ಮೇರೆಗೆ ಮುದ್ರಿತವಾಗಿದೆಯೆಂದು ತಾತ್ಪರ್ಯವಾಗುವ ಪ್ರತಿಗಳ ಮೂಲಕ;

(ಸಿ) ಭಾರತದ ರಾಷ್ಟ್ರಪತಿ ಅಥವಾ ಒಂದು ರಾಜ್ಯದ ರಾಜ್ಯಪಾಲ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರ ಅಥವಾ ಉಪ ರಾಜ್ಯಪಾಲನು ಹೊರಡಿಸಿದ ಉದ್ಘೋಷಣೆಗಳು, ಆದೇಶಗಳು ಅಥವಾ ವಿನಿಯಮಗಳು ಅಧಿಕೃತ ರಾಜಪತ್ರದಲ್ಲಿ ಒಳಗೊಂಡಿರುವ ಪ್ರತಿಗಳ ಅಥವಾ ಉದ್ಧೃತ ಭಾಗಗಳ ಮೂಲಕ;

(ಡಿ) ವಿದೇಶದ ಕಾರ್ಯಾಂಗದ ಕಾರ್ಯಗಳನ್ನು ಅಥವಾ ವಿಧಾನಮಂಡಲದ ವ್ಯವಹರಣೆಗಳನ್ನು, ಅವುಗಳ ಅಧಿಕಾರದ ಮೇರೆಗೆ ಪ್ರಕಟಿತವಾದ ಅಥವಾ ಆ ರಾಷ್ಟ್ರದಲ್ಲಿ ಸಾಮಾನ್ಯವಾಗಿ ಹಾಗೆ ಮನ್ನಣೆ ಪಡೆದ ನಿಯತಕಾಲಿಕೆಗಳ ಮೂಲಕ ಅಥವಾ ಆ ದೇಶದ ಅಥವಾ ಸಾರ್ವಭೌಮತೆಯ ಮೊಹರಿನಿಂದ ಪ್ರಮಾಣೀಕರಿಸಿದ ಪ್ರತಿಯ ಮೂಲಕ ಅಥವಾ ಕೆಲವು ಕೇಂದ್ರ ಅಧಿನಿಯಮದಲ್ಲಿ ಅದನ್ನು ಮಾನ್ಯ ಮಾಡುವ ಮೂಲಕ;

(ಇ) ಒಂದು ರಾಜ್ಯದಲ್ಲಿರುವ ಪೌರಸಭೆಯ ಅಥವಾ ಸ್ಥಳೀಯ ನಿಕಾಯದ ವ್ಯವಹರಣೆಗಳನ್ನು, ಅದರ ಕಾನೂನುಸಮ್ಮತ ಪಾಲಕನು ಪ್ರಮಾಣೀಕರಿಸಿದ, ಅಂಥ ವ್ಯವಹರಣೆಗಳ ಪ್ರತಿಯ ಮೂಲಕ ಅಥವಾ ಅಂಥ ನಿಕಾಯದ ಅಧಿಕಾರದ ಮೇರೆಗೆ ಪ್ರಕಟವಾಗಿದೆಯೆಂದು ತಾತ್ಪರ್ಯವಾಗುವ ಮುದ್ರಿತ ಪುಸ್ತಕದ ಮೂಲಕ;

(ಎಫ್) ಒಂದು ವಿದೇಶದಲ್ಲಿನ ಇತರ ಯಾವುದೇ ವರ್ಗದ ಸಾರ್ವಜನಿಕ ದಸ್ತಾವೇಜುಗಳನ್ನು, ಮೂಲ ದಸ್ತಾವೇಜಿನ ಮೂಲಕ ಅಥವಾ ಕಾನೂನುಸಮ್ಮತ ಪಾಲಕನ ಅಭಿರಕ್ಷೆಯಲ್ಲಿ ಇಟ್ಟುಕೊಂಡಿರುವ ಮೂಲಕ ಯಥೋಚಿತ್ತವಾಗಿ ಪ್ರಮಾಣಿಕರಿಸಲಾಗಿದೆಯೆಂದು ರೋಟರಿ ಪಬ್ಲಿಕ್ ಅಥವಾ ಭಾರತೀಯ ಕೌನ್ಸೆಲ್‌ನ ಅಥವಾ ರಾಜತಾಂತ್ರಿಕ ಏಜೆಂಟನ ಮೊಹರನ್ನುಳ್ಳ ಪ್ರಮಾಣಪತ್ರದೊಡನೆ ಅದರ ಕಾನೂನುಸಮ್ಮತ ಪಾಲಕನು ಪ್ರಮಾಣೀಕರಿಸಿದ ಪ್ರತಿಯ ಮೂಲಕ ಮತ್ತು ವಿದೇಶದ ಕಾನೂನಿಗೆ ಅನುಸಾರವಾಗಿ ದಸ್ತಾವೇಜಿನ ಸ್ವರೂಪದ ರುಜುವಾತಿನ ಮೂಲಕ

- ರುಜುವಾತುಪಡಿಸಬಹುದು

*ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆಗಳು*

**78. ಪ್ರಮಾಣಿತ ಪ್ರತಿಗಳ ಯಥಾರ್ಥತೆಯ ಬಗ್ಗೆ ಪೂರ್ವಭಾವನೆ.-** (1) ಯಾವುದೇ ವಿಶಿಷ್ಟ ಸಂಗತಿಯ ಬಗ್ಗೆ ಸಾಕ್ಷ್ಯವೆಂದು ಅಂಗೀಕರಿಸಬಹುದೆಂದು ಕಾನೂನು ಪ್ರಕಾರ ಘೋಷಿತವಾಗಿರುವ ಪ್ರಮಾಣಪತ್ರ, ಪ್ರಮಾಣಿತ ಪ್ರತಿ ಅಥವಾ ಇತರ ದಸ್ತಾವೇಜು ಎಂದು ತಾತ್ಪರ್ಯವಾಗುವ ಮತ್ತು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯಿಂದ ಕ್ರಮಬದ್ಧವಾಗಿ ಪ್ರಮಾಣಿತವಾಗಿದೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ದಸ್ತಾವೇಜು ಯಥಾರ್ಥವಾಗಿದೆ ಎಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು:

ಪರಂತು, ಅಂಥ ದಸ್ತಾವೇಜು ಬಹುಮಟ್ಟಿಗೆ ಆ ಸಂಬಂಧದಲ್ಲಿ ಕಾನೂನು ಪ್ರಕಾರ ನಿರ್ದೇಶಿತವಾದ ರೂಪದಲ್ಲಿರತಕ್ಕದ್ದು ಮತ್ತು ಆ ರೀತಿಯಲ್ಲಿ ಬರೆದುಕೊಡಲಾಗಿದೆಯೆಂದು ತಾತ್ಪರ್ಯವಾಗತಕ್ಕದ್ದು.

(2) ಯಾವ ಅಧಿಕಾರಿಯು ಅಂಥ ಯಾವುದೇ ದಸ್ತಾವೇಜಿಗೆ ಸಹಿ ಮಾಡಿದ್ದಾನೆಂದು ಅಥವಾ ಪ್ರಮಾಣೀಕರಿಸಿದ್ದಾನೆಂದು ತಾತ್ಪರ್ಯವಾಗುವುದೋ ಆ ಯಾರೇ ಅಧಿಕಾರಿಯು ಅದಕ್ಕೆ ಸಹಿ ಮಾಡಿದಾಗ, ಯಾವ ಹುದ್ದೆಯ ಸ್ಥಾನಮಾನವನ್ನು ತಾನು ಹೊಂದಿರುವನೆಂದು ಅಂಥ ಪತ್ರದಲ್ಲಿ ಸೂಚಿಸುವನೋ ಅಂಥ ಸ್ಥಾನಮಾನವನ್ನು ಆತನು ಹೊಂದಿರುವನೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

**79. ಸಾಕ್ಷ್ಯದ ದಾಖಲೆ, ಇತ್ಯಾದಿಗಳನ್ನು ಹಾಜರುಪಡಿಸಿದ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ.-** ಒಂದು ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ಸಾಕ್ಷ್ಯವನ್ನು ತೆಗೆದುಕೊಳ್ಳಲು ಕಾನೂನು ಮೂಲಕ ಅಧಿಕೃತನಾಗಿರುವ ಯಾರೇ ಅಧಿಕಾರಿಯ ಮುಂದೆ ಸಾಕ್ಷಿದಾರನು ಕೊಟ್ಟಂಥ ಸಾಕ್ಷ್ಯದ ಅಥವಾ ಅದರ ಯಾವುದೇ ಭಾಗದ ದಾಖಲೆಯೆಂದು ಅಥವಾ ಜ್ಞಾಪನಪತ್ರವೆಂದು ಅಥವಾ ಕಾನೂನಿಗನುಸಾರವಾಗಿ ಯಾರೇ ಕೈದಿಯು ಅಥವಾ ಆಪಾದಿತ ವ್ಯಕ್ತಿಯಿಂದ ತೆಗೆದುಕೊಂಡ ಹೇಳಿಕೆ ಅಥವಾ ತಪ್ಪೊಪ್ಪಿಗೆಯೆಂದು ತಾತ್ಪರ್ಯವಾಗುವ ಮತ್ತು ಯಾರೇ ನ್ಯಾಯಾಧೀಶನು ಅಥವಾ ಮ್ಯಾಜಿಸ್ಟ್ರೇಟನು ಅಥವಾ ಹಿಂದೆ ಹೇಳಿದ ಯಾರೇ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಯಾವುದೇ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ, ಆ ನ್ಯಾಯಾಲಯವು -

(i) ಆ ದಸ್ತಾವೇಜು ಯಥಾರ್ಥವಾದುದೆಂದು;

(ii) ಯಾವ ಸಂದರ್ಭಗಳಲ್ಲಿ ಹೇಳಿಕೆಗಳನ್ನು ತೆಗೆದುಕೊಳ್ಳಲಾಯಿತೋ ಆ ಸಂದರ್ಭಗಳ ಬಗ್ಗೆ ಅವುಗಳಿಗೆ ಸಹಿ ಹಾಕುವ ವ್ಯಕ್ತಿಯು ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುವೇ ಹೇಳಿಕೆಗಳು ನಿಜವಾದವುಗಳೆಂದು; ಮತ್ತು

(iii) ಅಂಥ ಸಾಕ್ಷ್ಯವನ್ನು, ಹೇಳಿಕೆಯನ್ನು ಅಥವಾ ತಪ್ಪೊಪ್ಪಿಗೆಯನ್ನು ಕ್ರಮಬದ್ಧವಾಗಿ ತೆಗೆದುಕೊಳ್ಳಲಾಯಿತೆಂದು

- ಪೂರ್ವಭಾವನೆ ಮಾಡತಕ್ಕದ್ದು.

**80. ರಾಜಪತ್ರಗಳು, ವೃತ್ತಪತ್ರಿಕೆಗಳು ಮತ್ತು ಇತರ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ.-** ಅಧಿಕೃತ ರಾಜಪತ್ರ ಅಥವಾ ವೃತ್ತಪತ್ರಿಕೆ ಅಥವಾ ನಿಯತಕಾಲಿಕೆ ಎಂದು ತಾತ್ಪರ್ಯವಾಗುವ ಪ್ರತಿಯೊಂದು ದಸ್ತಾವೇಜು ಮತ್ತು ಯಾರೇ ವ್ಯಕ್ತಿಯು ಇಡಬೇಕೆಂದು ಯಾವುದೇ ಕಾನೂನಿನಿಂದ ನಿರ್ದೇಶಿತವಾದ ದಸ್ತಾವೇಜು ಎಂದು ತಾತ್ಪರ್ಯವಾಗುವ ಪ್ರತಿಯೊಂದು ದಸ್ತಾವೇಜು, ಅಂಥ ದಸ್ತಾವೇಜನ್ನು ಕಾನೂನಿನಿಂದ ಅಗತ್ಯಪಡಿಸಲಾದ ರೂಪದಲ್ಲಿ ಬಹುಮಟ್ಟಿಗೆ ಇಟ್ಟಿದ್ದರೆ ಮತ್ತು ಯುಕ್ತ ಅಭಿರಕ್ಷೆಯಿಂದ ಹಾಜರುಪಡಿಸಿದ್ದರೆ, ಅದು ಯಥಾರ್ಥವಾದುದೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ.-* ಈ ಪ್ರಕರಣ ಮತ್ತು 92ನೇ ಪ್ರಕರಣದ ಉದ್ದೇಶಗಳಿಗಾಗಿ, ಒಂದು ದಸ್ತಾವೇಜು ಯಾವ ಸ್ಥಳದಲ್ಲಿ ಅಥವಾ ಯಾರ ಬಳಿ ಇಡಲು ಅಗತ್ಯಪಡಿಸಲಾಗಿದೆಯೋ ಆ ಸ್ಥಳದಲ್ಲಿ ಮತ್ತು ಅವನ ಅಭಿರಕ್ಷೆಯಲ್ಲಿ ಇದ್ದರೆ, ಅಂಥ ದಸ್ತಾವೇಜು ಯುಕ್ತ ಅಭಿರಕ್ಷೆಯಲ್ಲಿದೆ ಎಂದು ಹೇಳಲಾಗುತ್ತದೆ; ಆದರೆ ಯಾವುದೇ ಅಭಿರಕ್ಷೆಯು ನ್ಯಾಯಸಮ್ಮತ ಮೂಲವನ್ನು ಹೊಂದಿದೆಯೆಂದು ರುಜುವಾತಾಗಿದ್ದರೆ ಅಥವಾ ನಿರ್ದಿಷ್ಟ ಪ್ರಕರಣದ ಸನ್ನಿವೇಶಗಳು ಸಂಭಾವ್ಯ ಮೂಲಗಳಾಗುವಂಥವುಗಳಾಗಿದ್ದರೆ ಅಂಥ ಯಾವುದೇ ಅಭಿರಕ್ಷೆಯು ಅನುಚಿತವಾಗಿವೆಯೆಂದು ಹೇಳಲಾಗುವುದಿಲ್ಲ.

**81. ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯಲ್ಲಿರುವ ರಾಜಪತ್ರಗಳ ಬಗ್ಗೆ ಪೂರ್ವಭಾವನೆ.-** ಅಧಿಕೃತ ರಾಜಪತ್ರವೆಂಬುದಾಗಿ ತಾತ್ಪರ್ಯವಾಗುವ ಅಥವಾ ಯಾರೇ ವ್ಯಕ್ತಿಯು ಇಡಬೇಕೆಂದು ಯಾವುದೇ ಕಾನೂನಿನ ಮೂಲಕ ನಿರ್ದೇಶಿಸಲಾದ ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯನ್ನು, ಅಂಥ ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯನ್ನು ಕಾನೂನು ಮೂಲಕ ಅಗತ್ಯಪಡಿಸಿದ ರೂಪದಲ್ಲಿ ಬಹುಮಟ್ಟಿಗೆ ಇಟ್ಟಿದ್ದರೆ ಮತ್ತು ಯುಕ್ತ ಅಭಿರಕ್ಷೆಯಿಂದ ಅದನ್ನು ಹಾಜರುಪಡಿಸಿದ್ದರೆ, ಅಂಥ ಪ್ರತಿಯೊಂದು ವಿದ್ಯುನ್ಮಾನ ಅಥವಾ ಡಿಜಿಟಲ್ ದಾಖಲೆಯು ಯಥಾರ್ಥವಾದುದೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ.-* ಈ ಪ್ರಕರಣ ಮತ್ತು 93ನೇ ಪ್ರಕರಣದ ಉದ್ದೇಶಗಳಿಗಾಗಿ, ವಿದ್ಯುನ್ಮಾನ ದಾಖಲೆಗಳು ಯಾವ ಸ್ಥಳದಲ್ಲಿ ಅಥವಾ ಯಾರ ಬಳಿ ಇಡಲು ಅಗತ್ಯಪಡಿಸಲಾಗಿದೆಯೋ ಆ ಸ್ಥಳದಲ್ಲಿ ಮತ್ತು ಅವನ ಅಭಿರಕ್ಷೆಯಲ್ಲಿ ಇದ್ದರೆ, ಅಂಥ ವಿದ್ಯುನ್ಮಾನ ದಾಖಲೆಗಳು ಯುಕ್ತ ಅಭಿರಕ್ಷೆಯಲ್ಲಿವೆ ಎಂದು ಹೇಳಲಾಗುತ್ತದೆ; ಆದರೆ ಯಾವುದೇ ಅಭಿರಕ್ಷೆಯು ನ್ಯಾಯಸಮ್ಮತ ಮೂಲವನ್ನು ಹೊಂದಿದೆಯೆಂದು ರುಜುವಾತಾಗಿದ್ದರೆ ಅಥವಾ ನಿರ್ದಿಷ್ಟ ಪ್ರಕರಣದ ಸನ್ನಿವೇಶಗಳು ಸಂಭಾವ್ಯ ಮೂಲಗಳಾಗುವಂಥವುಗಳಾಗಿದ್ದರೆ ಅಂಥ ಯಾವುದೇ ಅಭಿರಕ್ಷೆಯು ಅನುಚಿತವಾಗಿವೆಯೆಂದು ಹೇಳಲಾಗುವುದಿಲ್ಲ.

**82. ಸರ್ಕಾರದ ಅಧಿಕಾರದ ಮೇರೆಗೆ ರಚಿಸಿದ ಭೂಪಟಗಳು ಅಥವಾ ನಕ್ಷೆಗಳ ಬಗ್ಗೆ ಪೂರ್ವಭಾವನೆ.-** ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧಿಕಾರದ ಮೇರೆಗೆ ರಚಿಸಲಾಯಿತೆಂದು ತಾತ್ಪರ್ಯವಾಗುವ ಭೂಪಟಗಳು ಅಥವಾ ನಕ್ಷೆಗಳನ್ನು ಹಾಗೆ ರಚಿಸಲಾಯಿತೆಂದು ಮತ್ತು ಅವು ನಿಖರವಾಗಿವೆಯೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು. ಆದರೆ ಯಾವುದೇ ಕಾರಣದ ಉದ್ದೇಶಕ್ಕಾಗಿ ರಚಿತವಾದ ಭೂಪಟಗಳು ಅಥವಾ ನಕ್ಷೆಗಳು ನಿಖರವಾಗಿವೆಯೆಂದು ರುಜುವಾತುಪಡಿಸಬೇಕು.

**83. ಕಾನೂನುಗಳ ಸಂಗ್ರಹಣೆ ಮತ್ತು ತೀರ್ಪುಗಳ ವರದಿಗಳ ಬಗ್ಗೆ ಪೂರ್ವಭಾವನೆ.-** ಯಾವುದೇ ದೇಶದ ಸರ್ಕಾರದ ಅಧಿಕಾರದ ಮೇರೆಗೆ ಮುದ್ರಿಸಲಾಗಿದೆ ಅಥವಾ ಪ್ರಕಟಿಸಲಾಗಿದೆ ಮತ್ತು ಆ ದೇಶದ ಯಾವುದೇ ಕಾನೂನುಗಳನ್ನು ಒಳಗೊಳ್ಳುತ್ತದೆ ಎಂದು ತಾತ್ಪರ್ಯವಾಗುವ ಪ್ರತಿಯೊಂದು ಪುಸ್ತಕ ಮತ್ತು ಅಂಥ ದೇಶದ ನ್ಯಾಯಾಲಯಗಳ ತೀರ್ಪುಗಳ ವರದಿಗಳನ್ನು ಒಳಗೊಂಡಿದೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ಪುಸ್ತಕವೂ ಯಥಾರ್ಥವಾಗಿವೆಯೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

**84. ಪವರ್ ಆಫ್ ಅಟಾರ್ನಿ ಬಗ್ಗೆ ಪೂರ್ವಭಾವನೆ.-** ಪವರ್ ಆಫ್ ಅಟಾರ್ನಿಯೆಂದು ಮತ್ತು ನೋಟರಿ ಅಥವಾ ಯಾವುದೇ ನ್ಯಾಯಾಲಯದ, ನ್ಯಾಯಾಧೀಶನ, ಮ್ಯಾಜಿಸ್ಟ್ರೇಟ್‌ನ, ಭಾರತೀಯ ಕೌನ್ಸೆಲ್‌ನ ಅಥವಾ ಉಪ-ಕೌನ್ಸೆಲ್‌ನ ಅಥವಾ ಕೇಂದ್ರ ಸರ್ಕಾರದ ಪ್ರತಿನಿಧಿಯ ಮುಂದೆ ಬರೆದುಕೊಡಲಾಗಿದೆಯೆಂದು ಮತ್ತು ಅವರಿಂದ ಪ್ರಮಾಣೀಕರಿಸಲಾಗಿದೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ದಸ್ತಾವೇಜನ್ನು ಹಾಗೆ ಬರೆದುಕೊಡಲಾಗಿದೆ ಮತ್ತು ಪ್ರಮಾಣೀಕರಿಸಲಾಗಿದೆಯೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

**85. ವಿದ್ಯುನ್ಮಾನ ಒಪ್ಪಂದಗಳ ಬಗ್ಗೆ ಸಂಬಂಧಿಸಿದ ಪೂರ್ವಭಾವನೆ.-** ನ್ಯಾಯಾಲಯವು, ಪಕ್ಷಕಾರರ ವಿದ್ಯುನ್ಮಾನ ಅಥವಾ ಡಿಜಿಟಲ್ ಸಹಿಗಳನ್ನು ಒಳಗೊಂಡ ಒಂದು ಒಪ್ಪಂದವೆಂಬುದಾಗಿ ತಾತ್ಪರ್ಯವಾಗುವ ಪ್ರತಿಯೊಂದು ವಿದ್ಯುನ್ಮಾನ ದಾಖಲೆಯನ್ನು, ಆ ಪಕ್ಷಕಾರರು ವಿದ್ಯುನ್ಮಾನ ಅಥವಾ ಡಿಜಿಟಲ್ ಸಹಿಗಳನ್ನೂ ಸೇರಿಸುವ ಮೂಲಕ ಮಾಡಿಕೊಳ್ಳಲಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**86. ವಿದ್ಯುನ್ಮಾನ ದಾಖಲೆಗಳಿಗೆ ಮತ್ತು ವಿದ್ಯುನ್ಮಾನ ಸಹಿಗಳಿಗೆ ಸಂಬಂಧಿಸಿದ ಪೂರ್ವಭಾವನೆ.-** (1) ಸುರಕ್ಷಿತ ವಿದ್ಯುನ್ಮಾನ ದಾಖಲೆಯನ್ನು ಒಳಗೊಳ್ಳುವ ಯಾವುವೇ ವ್ಯವಹರಣೆಗಳಲ್ಲಿ, ನ್ಯಾಯಾಲಯವು, ತದ್ವಿರುದ್ಧವಾದುದು ರುಜುವಾತಾದ ಹೊರತು, ಸುರಕ್ಷಿತ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸಮಯದ ಆ ಸುರಕ್ಷಿತ ವಿದ್ಯುನ್ಮಾನ ದಾಖಲೆಯನ್ನು ವ್ಯತ್ಯಾಸ ಮಾಡಿಲ್ಲ ಎಂಬುದಾಗಿ ಪೂರ್ವಭಾವನೆ ಮಾಡತಕ್ಕದ್ದು.

(2) ಸುರಕ್ಷಿತ ವಿದ್ಯುನ್ಮಾನ ಸಹಿಯನ್ನು ಒಳಗೊಂಡಿರುವ, ಯಾವುವೇ ವ್ಯವಹರಣೆಗಳಲ್ಲಿ ನ್ಯಾಯಾಲಯವು, ಅದಕ್ಕೆ ತದ್ವಿರುದ್ಧವಾದುದನ್ನು ರುಜುವಾತುಪಡಿಸದ ಹೊರತು ನ್ಯಾಯಾಲಯವು,-

(ಎ) ವಿದ್ಯುನ್ಮಾನ ದಾಖಲೆಗೆ ಸಹಿ ಮಾಡುವ ಅಥವಾ ಅದನ್ನು ಅನುಮೋದಿಸುವ ಉದ್ದೇಶದಿಂದ ವಂತಿಗೆದಾರನು ಸುರಕ್ಷಿತ ವಿದ್ಯುನ್ಮಾನ ಸಹಿಯನ್ನು ಹಾಕಿದ್ದಾನೆಂದು;

(ಬಿ) ಸುರಕ್ಷಿತ ವಿದ್ಯುನ್ಮಾನ ದಾಖಲೆ ಅಥವಾ ಸುರಕ್ಷಿತ ವಿದ್ಯುನ್ಮಾನ ಸಹಿಯ ಸಂದರ್ಭವನ್ನು ಹೊರತುಪಡಿಸಿ, ಈ ಪ್ರಕರಣದಲ್ಲಿರುವುದು ಯಾವುದೂ ವಿದ್ಯುನ್ಮಾನ ದಾಖಲೆಯ ಅಥವಾ ಯಾವುದೇ ವಿದ್ಯುನ್ಮಾನ ಸಹಿಯ ಅಧಿಕೃತತೆಗೆ ಮತ್ತು ಸಮಗ್ರತೆಗೆ ಸಂಬಂಧಿಸಿ ಯಾವುದೇ ಪೂರ್ವಭಾವನೆಯನ್ನು ಸೃಜಿಸತಕ್ಕದ್ದಲ್ಲ

- ಎಂದು ಪೂರ್ವಭಾವನೆ ಮಾಡತಕ್ಕದ್ದು.

**87. ವಿದ್ಯುನ್ಮಾನ ಸಹಿ ಇರುವ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಪೂರ್ವಭಾವನೆ.-** ನ್ಯಾಯಾಲಯವು, ತದ್ವಿರುದ್ಧವಾದುದು ರುಜುವಾತಾದ ಹೊರತು, ಪ್ರಮಾಣಪತ್ರವನ್ನು ವಂತಿಗೆದಾರನು ಅಂಗೀಕರಿಸಿದ್ದರೆ, ವಂತಿಗೆದಾರನ ಮಾಹಿತಿಯೆಂದು ನಿರ್ದಿಷ್ಟಪಡಿಸಲಾದ ಮತ್ತು ಪರಿಶೀಲಿಸದಿರುವ ಮಾಹಿತಿಯನ್ನು ಹೊರತುಪಡಿಸಿ, ವಿದ್ಯುನ್ಮಾನ ಸಹಿಯ ಪ್ರಮಾಣಪತ್ರದಲ್ಲಿ ಪಟ್ಟಿ ಮಾಡಿದ ಮಾಹಿತಿ ಸರಿಯಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**88. ವಿದೇಶಿ ನ್ಯಾಯಿಕ ದಾಖಲೆಗಳ ಪ್ರಮಾಣಿತ ಪ್ರತಿಗಳ ಬಗ್ಗೆ ಪೂರ್ವಭಾವನೆ.-** (1) ಭಾರತದ ಹೊರಗಿನ, ಯಾವುದೇ ದೇಶದ ಯಾವುದೇ ನ್ಯಾಯಿಕ ದಾಖಲೆಗಳ ಪ್ರಮಾಣಿತ ಪ್ರತಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜು, ಅಂಥ ದೇಶದಲ್ಲಿ ಅಥವಾ ಅಂಥ ದೇಶಕ್ಕಾಗಿ ಇರುವ ಕೇಂದ್ರ ಸರ್ಕಾರದ ಯಾರೇ ಪ್ರತಿನಿಧಿಯು, ನ್ಯಾಯಿಕ ದಾಖಲೆಗಳ ಪ್ರತಿಗಳನ್ನು ಪ್ರಮಾಣೀಕರಿಸುವುದಕ್ಕೆ ಆ ದೇಶದಲ್ಲಿ ಸಾಮಾನ್ಯವಾಗಿ ಯಾವ ರೀತಿಯನ್ನು ಅನುಸರಿಸಲಾಗುತ್ತಿದೆಯೋ ಆ ರೀತಿಯಲ್ಲಿ ಪ್ರಮಾಣೀಕರಿಸಿದ್ದಾನೆಂದು ತಾತ್ಪರ್ಯವಾದರೆ ಅಂಥ ನೈಜವಾಗಿದೆ ಮತ್ತು ನಿಖರವಾದುದಾಗಿದೆಯೆಂದು ಪೂರ್ವಭಾವನೆ ಮಾಡಬಹುದು.

(2) ಭಾರತದ ಭಾಗವಾಗಿರುವ ಯಾವುದೇ ರಾಜ್ಯಕ್ಷೇತ್ರದ ಅಥವಾ ಭಾರತದ ಹೊರಗಿನ ಸ್ಥಳದ ಸಂಬಂಧದಲ್ಲಿ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897 ರ 10)ರ 3ನೇ ಪ್ರಕರಣದ (43)ನೇ ಖಂಡದಲ್ಲಿ ಪರಿಭಾಷಿಸಿರುವಂತೆ, ಅದರ ರಾಜತಾಂತ್ರಿಕನಾಗಿರುವ ಅಧಿಕಾರಿಯು, ಈ ಪ್ರಕರಣದ ಉದ್ದೇಶಕ್ಕಾಗಿ ಆ ರಾಜ್ಯಕ್ಷೇತ್ರವನ್ನು ಅಥವಾ ಸ್ಥಳವನ್ನು ಒಳಗೊಂಡಿರುವ ದೇಶದಲ್ಲಿ ಮತ್ತು ಕೇಂದ್ರ ಸರ್ಕಾರದ ಪ್ರತಿನಿಧಿಯೆಂದು ಭಾವಿಸತಕ್ಕದ್ದು.

**89. ಪುಸ್ತಕಗಳು, ಭೂಪಟಗಳು ಮತ್ತು ಚಿತ್ರಪಟಗಳ ಬಗ್ಗೆ ಪೂರ್ವಭಾವನೆ.-** ನ್ಯಾಯಾಲಯವು ಸಾರ್ವಜನಿಕ ಅಥವಾ ಸಾಮಾನ್ಯ ಹಿತಾಸಕ್ತಿ ವಿಷಯಗಳ ಬಗೆಗಿನ ಮಾಹಿತಿಗಾಗಿ ಅದು ಉಲ್ಲೇಖಿಸಬಹುದಾದಂಥ ಯಾವುದೇ ಪುಸ್ತಕವನ್ನು ಮತ್ತು ಯಾವುದೇ ಪ್ರಕಟಿತ ಭೂಪಟ ಅಥವಾ ಚಿತ್ರಪಟಗಳಲ್ಲಿನ ಹೇಳಿಕೆಗಳು ಸುಸಂಬಂದ್ಧ ಸಂಗತಿಗಳಾಗಿವೆಯೋ ಮತ್ತು ಯಾವುದನ್ನು ಅದರ ಪರಿಶೀಲನೆಗಾಗಿ ಹಾಜರುಪಡಿಸಿದಂಥ ಆ ಯಾವುದೇ ಪ್ರಕಟಿತ ಭೂಪಟವನ್ನು ಅಥವಾ ಚಿತ್ರಪಟವನ್ನು, ಯಾರಿಂದ ಅಥವಾ ಯಾವ ಕಾಲದಲ್ಲಿ ಅದನ್ನು ಬರೆಯಲಾಗಿದೆಯೆಂದು ಅಥವಾ ಪ್ರಕಟಿಸಲಾಗಿದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯು ಮತ್ತು ಆ ಕಾಲದಲ್ಲಿ ಮತ್ತು ಆ ಸ್ಥಳದಲ್ಲಿ ಅದನ್ನು ಬರೆದಿದ್ದಾನೆಂದು ಮತ್ತು ಪ್ರಕಟಿಸಿದ್ದಾನೆಂದು ಪೂರ್ವಭಾವನೆ ಮಾಡಬಹುದು.

**90. ವಿದ್ಯುನ್ಮಾನ ಸಂದೇಶಗಳ ಬಗ್ಗೆ ಪೂರ್ವಭಾವನೆ.-** ಯಾವ ವಿಳಾಸದಾರನಿಗೆ ಸಂದೇಶವನ್ನು ಕಳುಹಿಸಬೇಕಾಗಿದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಗೆ ಮೂಲಕರ್ತನು ಇ-ಮೇಲ್ ಮೂಲಕ ಕಳುಹಿಸಿದ ವಿದ್ಯುನ್ಮಾನ ಸಂದೇಶವು ಅವನ ಗಣಕಯಂತ್ರದಲ್ಲಿ ಅಳವಡಿಸಿದ ಸಂದೇಶಕ್ಕೆ ಸಂವಾದಿಯಾದುದು ಎಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು. ಆದರೆ, ಯಾರು ಅಂಥ ಸಂದೇಶವನ್ನು ಕಳುಹಿಸಿದ್ದಾನೋ ಆ ವ್ಯಕ್ತಿಯ ಬಗ್ಗೆ ನ್ಯಾಯಾಲಯವು ಯಾವುದೇ ಪೂರ್ವಭಾವನೆ ಮಾಡತಕ್ಕದ್ದಲ್ಲ.

**91. ಹಾಜರುಪಡಿಸದಿರುವ ದಸ್ತಾವೇಜುಗಳನ್ನು ಬರೆದುಕೊಟ್ಟಿರುವುದು, ಇತ್ಯಾದಿಗಳ ಬಗ್ಗೆ ಪೂರ್ವಭಾವನೆ.-** ನ್ಯಾಯಾಲಯವು ಹಾಜರುಪಡಿಸಬೇಕೆಂದು ಕೇಳಲಾದ ಮತ್ತು ಹಾಜರುಪಡಿಸಬೇಕೆಂದು ನೋಟೀಸನ್ನು ಕೊಟ್ಟ ತರುವಾಯ ಹಾಜರುಪಡಿಸದಿರುವ ಪ್ರತಿಯೊಂದು ದಸ್ತಾವೇಜು, ಕಾನೂನಿನ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಪ್ರಮಾಣಿತವಾದದ್ದೆಂದು, ಸ್ಟಾಂಪು ಹಾಕಲಾದದ್ದೆಂದು ಮತ್ತು ಜಾರಿಗೊಳಿಸಲಾದದ್ದೆಂದು ಪೂರ್ವಭಾವನೆ ಮಾಡತಕ್ಕದ್ದು.

**92. ಮೂವತ್ತು ವರ್ಷಗಳ ಹಳೆಯದಾದ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ.-** ಮೂವತ್ತು ವರ್ಷ ಹಳೆಯದೆಂದು ತಾತ್ಪರ್ಯವಾಗುವ ಅಥವಾ ರುಜುವಾತಾಗಿರುವ ಯಾವುದೇ ದಸ್ತಾವೇಜನ್ನು ನ್ಯಾಯಾಲಯವು ನಿರ್ದಿಷ್ಟ ಮೊಕದ್ದಮೆಯಲ್ಲಿ ಉಚಿತವೆಂದು ಭಾವಿಸುವ ಯಾವುದೇ ಅಭಿರಕ್ಷೆಯಿಂದ ಅದನ್ನು ಹಾಜರುಪಡಿಸಿದಾಗ, ಅದು ಯಾರೇ ನಿರ್ದಿಷ್ಟ ವ್ಯಕ್ತಿಯ ಕೈಬರಹದಲ್ಲಿದೆಯೆಂದು ತಾತ್ಪರ್ಯವಾಗುವ ಸಹಿ ಮತ್ತು ಅಂಥ ದಸ್ತಾವೇಜಿನ ಇತರ ಪ್ರತಿಯೊಂದು ಭಾಗವೂ ಆ ವ್ಯಕ್ತಿಯ ಕೈಬರಹದಲ್ಲಿದೆಯೆಂದು ಮತ್ತು ಬರೆದುಕೊಟ್ಟ ಅಥವಾ ಅನುಪ್ರಮಾಣಿತ ದಸ್ತಾವೇಜಿನ ಸಂದರ್ಭದಲ್ಲಿ ಅದನ್ನು ಯಾರು ಬರೆದುಕೊಟ್ಟಿದ್ದರೆಂದು ಮತ್ತು ಅನುಪ್ರಮಾಣಿಸಿದ್ದಾರೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಗಳು ಅದನ್ನು ಕ್ರಮಬದ್ಧವಾಗಿ ಬರೆದುಕೊಟ್ಟಿದ್ದಾರೆಂದು ಮತ್ತು ಅನುಪ್ರಮಾಣಿಸಿದ್ದಾರೆಂದು ಪೂರ್ವಭಾವನೆ ಮಾಡಬಹುದು.

ವಿವರಣೆ.- 80ನೇ ಪ್ರಕರಣದ ವಿವರಣೆಯು ಈ ಪ್ರಕರಣಕ್ಕೂ ಸಹ ಅನ್ವಯವಾಗತಕ್ಕದ್ದು.

*ದೃಷ್ಟಾಂತಗಳು*

(ಎ) ಒಬಿಯು ದೀರ್ಘಕಾಲದಿಂದ ಭೂಸಂಪತ್ತಿನ ಸ್ವಾಧೀನವನ್ನು ಹೊಂದಿದ್ದಾನೆ. ಅವನು ಭೂಮಿಯ ತನ್ನ ಹಕ್ಕನ್ನು ತೋರಿಸುವ, ಆ ಭೂಮಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ತನ್ನ ಅಭಿರಕ್ಷೆಯಿಂದ ಹಾಜರುಪಡಿಸುತ್ತಾನೆ. ಅಭಿರಕ್ಷೆಯು ಯುಕ್ತವಾದುದಾಗಿರತಕ್ಕದ್ದು.

(ಬಿ) ಒಬಿಯು ತಾನು ಅಡಮಾನ ಪಡೆದಿರುವ ಭೂಸಂಪತ್ತಿಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಹಾಜರುಪಡಿಸುತ್ತಾನೆ. ಅಡಮಾನ ಮಾಡಿದವನು ಸ್ವಾಧೀನತೆಯನ್ನು ಹೊಂದಿದ್ದಾನೆ, ಅಭಿರಕ್ಷೆಯು ಯುಕ್ತವಾದುದಾಗಿರತಕ್ಕದ್ದು.

(ಸಿ) ಬಿಬಿಯ ಸಂಬಂಧವುಳ್ಳವನಾದ ಒಬನು ತನ್ನಲ್ಲಿ ಬಿಬಿಯು ತನ್ನ ಸ್ವಾಧೀನತೆಯಲ್ಲಿರುವ ಜಮೀನುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸುರಕ್ಷತೆಗಾಗಿ ಠೇವಣಿ ಇಟ್ಟವುಗಳನ್ನು ಒಬಿಯು ಹಾಜರುಪಡಿಸುತ್ತಾನೆ, ಅಭಿರಕ್ಷೆಯು ಯುಕ್ತವಾದುದಾಗಿರತಕ್ಕದ್ದು.

**93. ಐದು ವರ್ಷ ಹಳೆಯ ವಿದ್ಯುನ್ಮಾನ ದಾಖಲೆಗಳಿಗೆ ಸಂಬಂಧಿಸಿದ ಪೂರ್ವಭಾವನೆ.-** ಐದು ವರ್ಷ ಹಳೆಯದೆಂದು ತಾತ್ಪರ್ಯವಾಗುವ ಅಥವಾ ರುಜುವಾತಾದ ಯಾವುದೇ ವಿದ್ಯುನ್ಮಾನ ದಾಖಲೆಯನ್ನು ನ್ಯಾಯಾಲಯವು, ಆ ನಿರ್ದಿಷ್ಟ ಮೊಕದ್ದಮೆಯಲ್ಲಿ ತಾನು ಸೂಕ್ತವೆಂದು ಭಾವಿಸುವ ಯಾವುದೇ ಅಭಿರಕ್ಷೆಯಿಂದ ಹಾಜರುಪಡಿಸಿದಾಗ ಯಾರೇ ನಿರ್ದಿಷ್ಟ ವ್ಯಕ್ತಿಯ ವಿದ್ಯುನ್ಮಾನ ಸಹಿಯೆಂದು ತಾತ್ಪರ್ಯವಾಗುವ ವಿದ್ಯುನ್ಮಾನ ಸಹಿಯನ್ನು ಅವನು ಅಥವಾ ಆತನಿಂದ ಈ ಸಂಬಂಧದಲ್ಲಿ ಅಧಿಕೃತನಾದ ಯಾರೇ ವ್ಯಕ್ತಿಯು ಸೇರಿಸಿದುದು ಎಂದು ಪೂರ್ವಭಾವನೆ ಮಾಡಬಹುದು.

*ವಿವರಣೆ.-* 81ನೇ ಪ್ರಕರಣದ ವಿವರಣೆಯು ಈ ಪ್ರಕರಣಕ್ಕೂ ಸಹ ಅನ್ವಯವಾಗತಕ್ಕದ್ದು.

## ಅಧ್ಯಾಯ VI

## ದಸ್ತಾವೇಜಿನ ಸಾಕ್ಷ್ಯದಿಂದ ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸುವಿಕೆ

**94. ಸ್ವತ್ತಿನ ಬಗ್ಗೆ ದಸ್ತಾವೇಜಿನ ರೂಪದಲ್ಲಿರುವ ಕರಾರುಗಳ, ಅನುದಾನಗಳ ಮತ್ತು ಇತರ ವಿಲೇವಾರಿಗಳ ನಿಬಂಧನೆಗಳ ಬಗ್ಗೆ ಸಾಕ್ಷ್ಯ.-** ಯಾವುದೇ ಸ್ವತ್ತಿನ ಬಗೆಗಿನ ಕರಾರು ಅಥವಾ ಅನುದಾನ ಅಥವಾ ಇತರ ವಿಲೇವಾರಿಯ ನಿಬಂಧನೆಗಳನ್ನು ದಸ್ತಾವೇಜಿನ ರೂಪಕ್ಕೆ ತರಲಾಗಿದ್ದರೆ ಮತ್ತು ಯಾವ ವಿಷಯವನ್ನೇ ಆಗಲಿ ದಸ್ತಾವೇಜಿನ ರೂಪಕ್ಕೆ ತರಬೇಕೆಂದು ಕಾನೂನು ಮೂಲಕ ಅಗತ್ಯಪಡಿಸಲಾಗಿರುವ ಎಲ್ಲ ಸಂದರ್ಭಗಳಲ್ಲಿ ಸ್ವತ್ತಿನ ಬಗೆಗಿನ ಅಂಥ ಕರಾರು, ಅನುದಾನ ಅಥವಾ ಇತರ ವಿಲೇವಾರಿ ಅಥವಾ ಅಂಥ ವಿಷಯದ ನಿಬಂಧನೆಗಳ ಸಾಕ್ಷ್ಯವಾಗಿ ಆ ದಸ್ತಾವೇಜಿನ ಹೊರತು ಅಥವಾ ಈ ಹಿಂದೆ ಒಳಗೊಂಡ ಉಪಬಂಧಗಳ ಮೇರೆಗೆ ಎರಡನೆಯ ಸಾಕ್ಷ್ಯವು ಅಂಗೀಕಾರಾರ್ಹವಾದ ಸಂದರ್ಭಗಳಲ್ಲಿ ಅದರ ಒಳಾಂಶಗಳ ಬಗೆಗಿನ ಎರಡನೆಯ ಸಾಕ್ಷ್ಯದ ಹೊರತು ಇತರ ಯಾವ ಸಾಕ್ಷ್ಯವನ್ನೂ ಕೊಡತಕ್ಕದ್ದಲ್ಲ.

*ಅಪವಾದ 1.-* ಸಾರ್ವಜನಿಕ ಅಧಿಕಾರಿಯ ನೇಮಕವನ್ನು ಲಿಖಿತದಲ್ಲಿ ಮಾಡಬೇಕೆಂದು ಕಾನೂನು ಮೂಲಕ ಅಗತ್ಯಪಡಿಸಿರುವಾಗ ಮತ್ತು ಯಾರೇ ನಿರ್ದಿಷ್ಟ ವ್ಯಕ್ತಿಯು ಅಂಥ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾನೆಂದು ತೋರಿಸಿರುವಾಗ ಆತನನ್ನು ಯಾವ ಲಿಖಿತದ ಮೂಲಕ ನೇಮಕ ಮಾಡಲಾಗಿದೆಯೋ ಅದನ್ನು ರುಜುವಾತುಪಡಿಸಬೇಕಾಗಿಲ್ಲ.

*ಅಪವಾದ 2.-* ಭಾರತದಲ್ಲಿ ಯಾವ ಮರಣಶಾಸನಗಳ ಬಗ್ಗೆ ಪ್ರೊಬೇಟ್‌ನ್ನು ಪಡೆಯಲಾಗಿದೆಯೋ ಆ ಮರಣಶಾಸನಗಳನ್ನು ಆ ಪ್ರೊಬೇಟಿನ ಮೂಲಕವೇ ರುಜುವಾತುಪಡಿಸಬಹುದು.

*ವಿವರಣೆ 1.-* ಉಲ್ಲೇಖಿಸಿದ ಸ್ವತ್ತಿನ ಬಗೆಗಿನ ಕರಾರುಗಳು, ಅನುದಾನಗಳು ಅಥವಾ ವಿಲೇವಾರಿಗಳು ಒಂದೇ ದಸ್ತಾವೇಜಿನಲ್ಲಿ ಅಡಕವಾಗಿರುವ ಸಂದರ್ಭಗಳಿಗೂ ಮತ್ತು ಒಂದಕ್ಕಿಂತ ಹೆಚ್ಚು ದಸ್ತಾವೇಜುಗಳಲ್ಲಿ ಅಡಕವಾಗಿರುವ ಸಂದರ್ಭಗಳಿಗೂ ಸಮನಾಗಿ ಈ ಪ್ರಕರಣವು ಅನ್ವಯಿಸುತ್ತದೆ.

*ವಿವರಣೆ 2.-* ಒಂದಕ್ಕಿಂತ ಹೆಚ್ಚು ಮೂಲ ದಸ್ತಾವೇಜುಗಳಿರುವಾಗ ಒಂದು ಮೂಲ ದಸ್ತಾವೇಜನ್ನು ಮಾತ್ರ ರುಜುವಾತುಪಡಿಸಿದರೆ ಸಾಕು.

*ವಿವರಣೆ 3.-* ಯಾವುದೇ ಬಗೆಯ ದಸ್ತಾವೇಜಿನಲ್ಲಿ ಈ ಪ್ರಕರಣದಲ್ಲಿ ಉಲ್ಲೇಖಿಸಿದ ಸಂಗತಿಗಳನ್ನುಳಿದು ಇತರ ಸಂಗತಿಯ ಬಗೆಗಿನ ಹೇಳಿಕೆಯು ಆ ಸಂಗತಿಯ ಬಗ್ಗೆ ಮೌಖಿಕ ಸಾಕ್ಷ್ಯದ ಅಂಗೀಕಾರಕ್ಕೆ ಅಡ್ಡಿಯಾಗತಕ್ಕದ್ದಲ್ಲ.

*ದೃಷ್ಟಾಂತಗಳು*

(ಎ) ಒಂದು ಕರಾರು ಅನೇಕ ಪತ್ರಗಳಲ್ಲಿ ಒಳಗೊಂಡಿದ್ದರೆ, ಅದನ್ನು ಒಳಗೊಂಡಿರುವ ಎಲ್ಲ ಪತ್ರಗಳನ್ನೂ ರುಜುವಾತುಪಡಿಸತಕ್ಕದ್ದು.

(ಬಿ) ಕರಾರು ಒಂದು ವಿನಿಮಯ ಪತ್ರದಲ್ಲಿ ಒಳಗೊಂಡಿದ್ದರೆ, ಆ ವಿನಿಮಯ ಪತ್ರವನ್ನು ರುಜುವಾತುಪಡಿಸತಕ್ಕದ್ದು.

(ಸಿ) ವಿನಿಮಯ ಪತ್ರವನ್ನು ಮೂರರ ಒಂದು ಕಟ್ಟಿನಲ್ಲಿ ಬರೆದಿದ್ದರೆ ಒಂದನ್ನು ಮಾತ್ರ ರುಜುವಾತುಪಡಿಸಬೇಕು.

(ಡಿ) ಓಎಯು ಕೆಲವು ನಿಬಂಧನೆಗಳ ಮೇಲೆ ನೀಲಿಯನ್ನು ಕೊಡುವುದಕ್ಕಾಗಿ ಓಬಿಯೊಡನೆ ಲಿಖಿತ ಕರಾರು ಮಾಡಿಕೊಳ್ಳುತ್ತಾನೆ. ಬೇರೆ ಸಂದರ್ಭದಲ್ಲಿ ಮೌಖಿಕವಾಗಿ ಕರಾರು ಮಾಡಿಕೊಂಡ ಇತರ ನೀಲಿಯ ಬೆಲೆಯನ್ನು ಓಬಿಯು ಓಎಗೆ ಸಂದಾಯ ಮಾಡಿದ್ದಾನೆ ಎಂಬ ಸಂಗತಿಯನ್ನು ಕರಾರು ಸೂಚಿಸುತ್ತದೆ. ಇತರ ನೀಲಿಗೆ ಯಾವ ಸಂದಾಯವನ್ನು ಮಾಡಲಿಲ್ಲವೆಂಬುದರ ಬಗ್ಗೆ ಮೌಖಿಕ ಸಾಕ್ಷ್ಯವನ್ನು ನೀಡಲಾಗಿದೆ. ಆ ಸಾಕ್ಷ್ಯವು ಅಂಗೀಕಾರಾರ್ಹವಾಗಿದೆ.

(ಇ) ಓಬಿಯು ಸಂದಾಯ ಮಾಡಿದ ಹಣಕ್ಕೆ ಓಎಯು ಓಬಿಗೆ ರಸೀತಿಯನ್ನು ಕೊಡುತ್ತಾನೆ. ಸಂದಾಯದ ಬಗ್ಗೆ ಮೌಖಿಕ ಸಾಕ್ಷ್ಯವನ್ನು ಕೊಡಲಾಗಿದೆ. ಸಾಕ್ಷ್ಯವು ಅಂಗೀಕಾರಾರ್ಹವಾಗಿದೆ.

**95. ಮೌಖಿಕ ಒಪ್ಪಂದದ ಸಾಕ್ಷ್ಯವನ್ನು ಹೊರತುಪಡಿಸುವಿಕೆ.-** ಅಂಥ ಯಾವುದೇ ಕರಾರು, ಅನುದಾನ ಅಥವಾ ಸ್ವತ್ತಿನ ಇತರ ವಿಲೇವಾರಿಯ ನಿಬಂಧನೆಗಳನ್ನು ಅಥವಾ ಕಾನೂನು ಮೂಲಕ ದಸ್ತಾವೇಜಿನ ರೂಪಕ್ಕೆ ಇಳಿಸಲು ಅಗತ್ಯಪಡಿಸಲಾದ ಯಾವುದೇ ವಿಷಯವನ್ನು 94ನೇ ಪ್ರಕರಣಕ್ಕೆ ಅನುಸಾರವಾಗಿ ರುಜುವಾತುಪಡಿಸಿರುವಾಗ, ಅಂಥ ಯಾವುದೇ ಲಿಖಿತದ ಪಕ್ಷಕಾರರ ಅಥವಾ ಅವರ ಹಿತಾಸಕ್ತಿಯುಳ್ಳ ಪ್ರತಿನಿಧಿಗಳ ನಡುವೆ ಅದರ ನಿಬಂಧನೆಗಳನ್ನು ವಿರೋಧಿಸುವ, ವ್ಯತ್ಯಾಸಗೊಳಿಸುವ ಅದಕ್ಕೆ ಸೇರಿಸುವ ಅಥವಾ ಅದರಿಂದ ಕಡಿಮೆ ಮಾಡುವ ಉದ್ದೇಶಕ್ಕಾಗಿ ಯಾವುದೇ ಮೌಖಿಕ ಒಪ್ಪಂದದ ಸಾಕ್ಷ್ಯವನ್ನು ಅಥವಾ ಹೇಳಿಕೆಯನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಮೋಸ, ಬೆದರಿಕೆ, ಅಕ್ರಮತೆ, ಯುಕ್ತವಾಗಿ ಬರೆದುಕೊಡುವಲ್ಲಿ ನ್ಯೂನತೆ, ಕರಾರು ಮಾಡಿಕೊಳ್ಳುವ ಪಕ್ಷಕಾರರ ಅರ್ಹತೆಯ ಕೊರತೆ, ಪ್ರತಿಫಲದ ಅಭಾವ ಅಥವಾ ನಿಷ್ಫಲತೆ ಅಥವಾ ಸಂಗತಿಯ ಅಥವಾ ಕಾನೂನಿನ ತಪ್ಪುಗ್ರಹಿಕೆಯಂಥ ಯಾವುದೇ ದಸ್ತಾವೇಜನ್ನು ಅಸಿಂಧುಗೊಳಿಸುವ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಡಿಕ್ರಿ ಅಥವಾ ಆದೇಶಕ್ಕೆ ಯಾರೇ ವ್ಯಕ್ತಿಯನ್ನು ಹಕ್ಕುದಾರರನ್ನಾಗಿ ಮಾಡುವ ಯಾವುದೇ ಸಂಗತಿಯನ್ನು ರುಜುವಾತುಪಡಿಸಬಹುದು:

ಮತ್ತು ಪರಂತು, ಯಾವ ವಿಷಯದ ಸಂಬಂಧದಲ್ಲಿ ದಸ್ತಾವೇಜಿನಲ್ಲಿ ಏನನ್ನೂ ಹೇಳಿಲ್ಲವೋ ಮತ್ತು ಯಾವುದು ಅದರ ನಿಬಂಧನೆಗಳಿಗೆ ಅಸಂಗತವಾಗಿಲ್ಲವೋ ಅಂಥ ಯಾವುದೇ ವಿಷಯದ ಬಗ್ಗೆ ಯಾವುದೇ ಪ್ರತ್ಯೇಕ ಮೌಖಿಕ ಒಪ್ಪಂದದ ಅಸ್ತಿತ್ವವನ್ನು ಸಾಬೀತು ಮಾಡಬಹುದು. ಈ ಪರಂತುಕವು ಅನ್ವಯಿಸುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವಾಗ ನ್ಯಾಯಾಲಯವು ದಸ್ತಾವೇಜಿನ ಕ್ರಮಬದ್ಧತೆಯ ಮಟ್ಟವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು:

ಮತ್ತೂ ಪರಂತು, ಅಂಥ ಯಾವುದೇ ಕರಾರು, ಅನುದಾನ ಅಥವಾ ಸ್ವತ್ತಿನ ವಿಲೇವಾರಿಯ ಮೇರೆಗಿನ ಯಾವುದೇ ಬಾಧ್ಯತೆಗೆ ಸಂಬಂಧಿಸಿದ ಯಾವುದೇ ಪೂರ್ವ ಷರತ್ತನ್ನು ಒಳಗೊಂಡಿರುವ ಯಾವುದೇ ಪ್ರತ್ಯೇಕ ಮೌಖಿಕ ಒಪ್ಪಂದದ ಅಸ್ತಿತ್ವವನ್ನು ರುಜುವಾತುಪಡಿಸಬಹುದು:

ಮತ್ತೂ ಪರಂತು, ಅಂಥ ಯಾವುದೇ ಕರಾರು, ಅನುದಾನ ಅಥವಾ ಸ್ವತ್ತಿನ ಇತರ ವಿಲೇವಾರಿಯನ್ನು ರದ್ದುಗೊಳಿಸುವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ ಸಂಬಂಧಿಸಿದ ತರುವಾಯದ ನಿರ್ದಿಷ್ಟವಾದ ಮೌಖಿಕ ಒಪ್ಪಂದದ ಅಸ್ತಿತ್ವವನ್ನು, ಯಾವ ಸಂದರ್ಭಗಳಲ್ಲಿ ಅಂಥ ಕರಾರು, ಅನುದಾನ ಅಥವಾ ಸ್ವತ್ತಿನ ಇತರ ವಿಲೇವಾರಿಯು, ಕಾನೂನಿನ ಮೂಲಕ ಅಗತ್ಯಪಡಿಸಲಾದಂತೆ ಬರವಣಿಗೆಯಲ್ಲಿರಬೇಕಾಗಿದೆಯೋ ಅಥವಾ ದಸ್ತಾವೇಜುಗಳ ನೋಂದಣಿಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ಅದನ್ನು ನೋಂದಾಯಿಸಲಾಗಿದೆಯೋ ಅಂಥ ಸಂದರ್ಭಗಳನ್ನು ಹೊರತುಪಡಿಸಿ ರುಜುವಾತುಪಡಿಸಬಹುದು:

ಮತ್ತೂ ಪರಂತು, ಯಾವ ಆಚರಣೆ ಅಥವಾ ರೂಢಿಯ ಮೂಲಕ ಯಾವುದೇ ಕರಾರಿನಲ್ಲಿ ಸ್ಪಷ್ಟವಾಗಿ ಪ್ರಸಂಗಗಳನ್ನು ನಮೂದಿಸಿಲ್ಲವೋ ಆ ಯಾವುದೇ ಆಚರಣೆ ಅಥವಾ ರೂಢಿಯನ್ನು ಆ ವಿವರಣೆಯ ಕರಾರುಗಳಿಗೆ ಸಾಮಾನ್ಯವಾಗಿ ಅನುಬಂಧಿಸಲಾಗುತ್ತದೆಯೋ, ಅದನ್ನು ರುಜುವಾತುಪಡಿಸಬಹುದು:

ಮತ್ತೂ ಪರಂತು, ಅಂಥ ಪ್ರಸಂಗವನ್ನು ಅನುಬಂಧಿಸುವುದು ಕರಾರಿನ ಸ್ಪಷ್ಟ ನಿಬಂಧನೆಗಳಿಗೆ ವಿರುದ್ಧವಾಗಿರತಕ್ಕದ್ದಲ್ಲ ಅಥವಾ ಅಸಂಗತವಾಗಿರತಕ್ಕದ್ದಲ್ಲ:

ಮತ್ತೂ ಪರಂತು, ದಸ್ತಾವೇಜಿನ ಭಾಷೆಯು ಯಾವ ರೀತಿಯಲ್ಲಿ ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಸಂಬಂಧಪಟ್ಟಿದೆ ಎಂಬುದನ್ನು ತೋರಿಸುವ ಯಾವುದೇ ಸಂಗತಿಯನ್ನು ರುಜುವಾತುಪಡಿಸಬಹುದು.

*ದೃಷ್ಟಾಂತಗಳು*

(ಎ) “ಕೋಲ್ಕತ್ತಾದಿಂದ ವಿಶಾಖಪಟ್ಟಣಕ್ಕೆ ಹೋಗುವ ಹಡಗುಗಳಲ್ಲಿನ” ಸರಕುಗಳಿಗೆ ವಿಮೆ ಪಾಲಿಸಿಯನ್ನು ಪಡೆಯಲಾಗಿದೆ. ಯಾವ ನಿರ್ದಿಷ್ಟ ಹಡಗಿನಲ್ಲಿ ಸರಕುಗಳನ್ನು ಭರ್ತಿ ಮಾಡಲಾಗಿದೆಯೋ ಆ ಹಡಗು ಕಾಣೆಯಾಗಿದೆ. ಆ ವಿಶಿಷ್ಟ ಹಡಗನ್ನು ಆ ವಿಮಾಪತ್ರದಿಂದ ಮೌಖಿಕವಾಗಿ ಹೊರತುಪಡಿಸಲಾಗಿತ್ತೆಂಬ ಸಂಗತಿಯನ್ನು ರುಜುವಾತುಪಡಿಸಲಾಗುವುದಿಲ್ಲ.

(ಬಿ) “ಎ”ಯು 2023ರ ಮಾರ್ಚ್ 1ನೇ ದಿನಾಂಕದಂದು “ಬಿ”ಗೆ ಒಂದು ಸಾವಿರ ರೂಪಾಯಿಗಳನ್ನು ಸಂದಾಯ ಮಾಡಲು ಬರವಣಿಗೆಯಲ್ಲಿ ನಿರುಪಾಧಿಕವಾಗಿ ಒಪ್ಪಿಕೊಳ್ಳುತ್ತಾನೆ. ಅದೇ ಕಾಲದಲ್ಲಿ, 2023ರ ಮಾರ್ಚ್ 31ರವರೆಗೆ ಹಣವನ್ನು ಸಂದಾಯ ಮಾಡಕೂಡದೆಂದು ಮೌಖಿಕ ಒಪ್ಪಂದವನ್ನು ಮಾಡಿಕೊಳ್ಳಲಾಯಿತೆಂಬ ಸಂಗತಿಯನ್ನು ರುಜುವಾತುಪಡಿಸಲಾಗುವುದಿಲ್ಲ.

(ಸಿ) ಒಂದು ಲಿಖಿತದ ಮೂಲಕ “ರಾಮಪುರ ಟೀ ಎಸ್ಟೇಟ್” ಎಂಬ ಹೆಸರಿನ ಒಂದು ಎಸ್ಟೇಟ್ ಅನ್ನು ಮಾರಾಟ ಮಾಡಲಾಗಿದೆ. ಅದು ಮಾರಾಟ ಮಾಡಿದ ಸ್ವತ್ತಿನ ನಕಾಶೆಯನ್ನು ಒಳಗೊಂಡಿದೆ ನಕಾಶೆಯಲ್ಲಿ ಸೇರಿಸಿಲ್ಲದ ಒಂದು ಜಮೀನನ್ನು ಎಸ್ಟೇಟ್‌ನ ಒಂದು ಭಾಗವಾಗಿ ಯಾವಾಗಲೂ ಪರಿಗಣಿಸಲಾಗಿತ್ತು ಮತ್ತು ಲಿಖಿತದ ಮೂಲಕ ವರ್ಗಾಯಿಸಬೇಕೆಂದು ಅಭಿಪ್ರಾಯಪಡಲಾಗಿತ್ತು ಎಂಬ ಸಂಗತಿಯನ್ನು ರುಜುವಾತುಪಡಿಸಲಾಗುವುದಿಲ್ಲ.

(ಡಿ) “ಎ”ಯು ಕೆಲವು ನಿಬಂಧನೆಗಳ ಮೇರೆಗೆ “ಬಿ”ಯ ಸ್ವತ್ತಾಗಿರುವ ಕೆಲವು ಗಣಿಗಳ ಕೆಲಸ ಮಾಡುವುದಕ್ಕಾಗಿ “ಬಿ”ಯೊಡನೆ ಲಿಖಿತ ಕರಾರನ್ನು ಮಾಡಿಕೊಳ್ಳುತ್ತಾನೆ. ಅವುಗಳ ಮೌಲ್ಯದ ಬಗ್ಗೆ “ಬಿ”ಯು ತಪ್ಪು ನಿರೂಪಣೆಯಿಂದ ಹಾಗೆ ಮಾಡಲು “ಎ”ಯು ಪ್ರೇರೇಪಿತನಾಗಿದ್ದನು. ಈ ಸಂಗತಿಯನ್ನು ರುಜುವಾತುಪಡಿಸಬಹುದು.

(ಇ) “ಎ”ಯು ಒಂದು ಕರಾರಿನ ನಿರ್ದಿಷ್ಟ ಪಾಲನೆಗಾಗಿ “ಬಿ”ಯ ವಿರುದ್ಧ ಒಂದು ದಾವೆಯನ್ನು ಹೂಡುತ್ತಾನೆ ಮತ್ತು ಕರಾರಿನ ಒಂದು ಉಪಬಂಧವನ್ನು ತಪ್ಪಿನಿಂದಾಗಿ ಸೇರಿಸಲಾಗಿರುವುದರಿಂದ, ಆ ಕರಾರನ್ನು ಬದಲಾಯಿಸಬೇಕೆಂದು ಕೋರುತ್ತಾನೆ. ಹಾಗೆ

ಮಾಡಲಾದ ತಪ್ಪು ಕರಾರನ್ನು ಬದಲಾಯಿಸುವುದಕ್ಕೆ ಕಾನೂನು ತನಗೆ ಹಕ್ಕನ್ನುಂಟುಮಾಡುತ್ತದೆಂಬುದನ್ನು “ಎ”ಯು ರುಜುವಾತುಪಡಿಸಬಹುದು.

(ಎಫ್) “ಎ”ಯು ಸಂದಾಯ ಮಾಡುವ ಕಾಲದ ಬಗ್ಗೆ ಏನನ್ನೂ ಹೇಳದಿರುವ ಒಂದು ಪತ್ರದ ಮೂಲಕ “ಬಿ”ಗೆ ಸರಕುಗಳನ್ನು ಒದಗಿಸಬೇಕೆಂದು ಕೋರುತ್ತಾನೆ ಮತ್ತು ಅವುಗಳನ್ನು ಕೊಟ್ಟಾಗ ಸರಕುಗಳನ್ನು ಸ್ವೀಕರಿಸುತ್ತಾನೆ. “ಬಿ”ಯು ಬೆಲೆಗಾಗಿ “ಎ”ಯ ಮೇಲೆ ದಾವೆ ಹೂಡುತ್ತಾನೆ. “ಎ”ಯು ಸರಕುಗಳನ್ನು ಇನ್ನೂ ಮುಗಿಯದ ಅವಧಿಗಾಗಿ ಸಾಲದ ಮೇಲೆ ಪೂರೈಸಲಾಗಿತ್ತೆಂದು ತೋರಿಸಬಹುದು.

(ಜಿ) “ಎ”ಯು “ಬಿ”ಗೆ ಒಂದು ಕುದುರೆಯನ್ನು ಮಾರುತ್ತಾನೆ ಮತ್ತು ಚೆನ್ನಾಗಿದೆಯೆಂದು ಮೌಖಿಕವಾಗಿ ಭರವಸೆ ಕೊಡುತ್ತಾನೆ. “‘ಎ’ಯಿಂದ ಮೂವತ್ತು ಸಾವಿರ ರೂಪಾಯಿಗಳಿಗೆ ಒಂದು ಕುದುರೆಯನ್ನು ಕೊಳ್ಳಲಾಗಿದೆ” ಎಂಬ ಪದಗಳಿಂದ ಕೂಡಿದ ಒಂದು ಕಾಗದವನ್ನು “ಎ”ಯು “ಬಿ”ಗೆ ಕೊಡುತ್ತಾನೆ. “ಬಿ”ಯು ಮೌಖಿಕ ಭರವಸೆಯನ್ನು ರುಜುವಾತುಪಡಿಸಬಹುದು.

(ಹೆಚ್) “ಎ”ಯು “ಬಿ”ಯ ವಸತಿ ಗೃಹವನ್ನು ಬಾಡಿಗೆಗೆ ಪಡೆಯುತ್ತಾನೆ ಮತ್ತು “ಕೊಠಡಿಗಳು ತಿಂಗಳಿಗೆ ಹತ್ತು ಸಾವಿರ ರೂಪಾಯಿಗಳು” ಎಂದು ಬರೆದಿರುವ ಕಾರ್ಡನ್ನು “ಬಿ”ಯು ಕೊಡುತ್ತಾನೆ. “ಎ”ಯು ಈ ನಿಬಂಧನೆಗಳಲ್ಲಿ ಭಾಗಶಃ ಭೋಜನವು ಸೇರಿರುವುದೆಂಬ ಮೌಖಿಕ ಒಪ್ಪಂದವನ್ನು ರುಜುವಾತುಪಡಿಸಬಹುದು. “ಎ”ಯು “ಬಿ”ಯ ವಸತಿಗೃಹವನ್ನು ಒಂದು ವರ್ಷದವರೆಗೆ ಬಾಡಿಗೆಗೆ ಪಡೆಯುತ್ತಾನೆ ಮತ್ತು ಅವರ ನಡುವೆ ನ್ಯಾಯವಾದಿಯ ಮೂಲಕ ಸ್ಟಾಂಪು ಕಾಗದದ ಮೇಲೆ ತಯಾರಿಸಿದ ಕ್ರಮಬದ್ಧವಾದ ಒಪ್ಪಂದವಾಗಿದೆ. ಅದರಲ್ಲಿ ಭೋಜನದ ವಿಷಯದ ಬಗ್ಗೆ ಏನನ್ನೂ ಹೇಳಿಲ್ಲ. “ಎ”ಯು ಭೋಜನವನ್ನು ನಿಬಂಧನೆಗಳಲ್ಲಿ ಮೌಖಿಕವಾಗಿ ಸೇರಿಸಲಾಗಿತ್ತೆಂದು ರುಜುವಾತುಪಡಿಸಲಾಗದು.

(ಐ) “ಎ”ಗೆ ಸಂದಾಯವಾಗಬೇಕಾದ ಸಾಲಕ್ಕಾಗಿ “ಎ”ಯು “ಬಿ”ಗೆ ಹಣದ ರಸೀದಿಯನ್ನು ಕಳುಹಿಸಿ ಸಾಲವನ್ನು ತೀರಿಸಬೇಕೆಂದು “ಎ”ನು ಕೇಳುತ್ತಾನೆ. “ಬಿ”ಯು ರಸೀದಿಯನ್ನು ಇಟ್ಟುಕೊಳ್ಳುತ್ತಾನೆ ಮತ್ತು ಹಣವನ್ನು ಕಳುಹಿಸುವುದಿಲ್ಲ. ಆ ಹಣಕ್ಕಾಗಿನ ದಾವೆಯಲ್ಲಿ “ಎ”ಯು ಇದನ್ನು ರುಜುವಾತುಪಡಿಸಬಹುದು.

(ಜೆ) “ಎ” ಮತ್ತು “ಬಿ” ಇಬ್ಬರೂ ಒಂದು ಆಕಸ್ಮಿಕ ಘಟನೆ ನಡೆದ ನಂತರ ಕಾರ್ಯರೂಪಕ್ಕೆ ಬರಬೇಕೆಂದು ಒಂದು ಲಿಖಿತ ಕರಾರನ್ನು ಮಾಡಿಕೊಳ್ಳುತ್ತಾರೆ. ಆ ಲಿಖಿತ ಕರಾರುಪತ್ರವು “ಬಿ”ನಲ್ಲಿ ಉಳಿದಿದೆ. ಅವನು ಆ ಆಧಾರದ ಮೇಲೆ “ಎ”ಯ ಮೇಲೆ ದಾವೆ ಹೂಡುತ್ತಾನೆ. ಯಾವ ಸನ್ನಿವೇಶಗಳಲ್ಲಿ ಅದನ್ನು ಕೊಡಲಾಗಿತ್ತೆಂಬುದನ್ನು “ಎ”ನು ತೋರಿಸಬಹುದು.

**96. ಅಸ್ಪಷ್ಟ ದಸ್ತಾವೇಜನ್ನು ವಿವರಿಸುವ ಅಥವಾ ತಿದ್ದುಪಡಿ ಮಾಡುವ ಸಾಕ್ಷ್ಯವನ್ನು ಹೊರತುಪಡಿಸುವುದು.-** ಒಂದು ದಸ್ತಾವೇಜಿನಲ್ಲಿ ಉಪಯೋಗಿಸಿದ ಭಾಷೆಯು ಮೇಲ್ನೋಟಕ್ಕೆ ಅಸ್ಪಷ್ಟವಾಗಿದೆ ಅಥವಾ ದೋಷಯುಕ್ತವಾಗಿದೆ ಎಂದು ಕಂಡುಬಂದಾಗ, ಅದರ ಅರ್ಥವನ್ನು ತೋರಿಸುವ ಅಥವಾ ಅದರ ದೋಷವನ್ನು ನಿವಾರಿಸುವ ಸಂಗತಿಗಳ ಬಗ್ಗೆ ಸಾಕ್ಷ್ಯವನ್ನು ಕೊಡುವಂತಿಲ್ಲ.

*ದೃಷ್ಟಾಂತಗಳು*

(ಎ) “ಎ”ಯು “ಬಿ”ಗೆ “ಒಂದು ಲಕ್ಷ ರೂಪಾಯಿಗಳಿಗೆ ಅಥವಾ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೆ” ಒಂದು ಕುದುರೆಯನ್ನು ಮಾರಲು ಬರವಣಿಗೆಯಲ್ಲಿ ಒಪ್ಪಿಕೊಳ್ಳುತ್ತಾನೆ. ಯಾವ ಬೆಲೆಯನ್ನು ಕೊಡಬೇಕೆಂಬುದನ್ನು ತೋರಿಸುವುದಕ್ಕಾಗಿ ಸಾಕ್ಷ್ಯವನ್ನು ಕೊಡಲಾಗದು.

(ಬಿ) ಒಂದು ಲಿಖಿತದಲ್ಲಿ ಕೆಲವು ಖಾಲಿ ಸ್ಥಾನಗಳಿವೆ. ಅವುಗಳನ್ನು ಯಾವ ರೀತಿಯಲ್ಲಿ ತುಂಬಬೇಕೆಂದು ಭಾವಿಸಲಾಗಿತ್ತೆಂಬುದನ್ನು ತೋರಿಸುವ ಸಂಗತಿಗಳ ಬಗ್ಗೆ ಸಾಕ್ಷ್ಯ ಕೊಡಲಾಗದು.

**97. ಅಸ್ತಿತ್ವದಲ್ಲಿರುವ ಸಂಗತಿಗಳ ಬಗ್ಗೆ ದಸ್ತಾವೇಜಿನ ಅನ್ವಯಿಸುವಿಕೆಯ ವಿರುದ್ಧ ಸಾಕ್ಷ್ಯವನ್ನು ಹೊರತುಪಡಿಸುವುದು.-** ಒಂದು ದಸ್ತಾವೇಜಿನಲ್ಲಿ ಉಪಯೋಗಿಸಿದ ಭಾಷೆಯು ಸ್ವತಃ ಸ್ಪಷ್ಟವಾಗಿರುವಾಗ ಮತ್ತು ಅದು ಅಸ್ತಿತ್ವದಲ್ಲಿರುವ ಸಂಗತಿಗಳಿಗೆ ಖಚಿತವಾಗಿ ಅನ್ವಯಿಸುವಾಗ ಅದು ಅಂಥ ಸಂಗತಿಗಳಿಗೆ ಅನ್ವಯಿಸಲು ಉದ್ದೇಶಿಸಿಲ್ಲವೆಂದು ತೋರಿಸುವುದಕ್ಕೆ ಸಾಕ್ಷ್ಯವನ್ನು ಕೊಡಕೂಡದು.

*ದೃಷ್ಟಾಂತ*

“ಎ”ಯು “ಬಿ”ಗೆ “ರಾಮಪುರದಲ್ಲಿರುವ ಒಂದು ನೂರು ಬಿಘಾಗಳ ನನ್ನ ಎಸ್ಟೇಟ್ ಅನ್ನು” ಎಂದು ಬರೆದ ಲಿಖಿತದ ಮೂಲಕ ಅದನ್ನು ಮಾರುತ್ತಾನೆ. “ಎ”ಯು ಒಂದು ನೂರು ಬಿಘಾಗಳ ಎಸ್ಟೇಟ್ ಅನ್ನು ರಾಮಪುರದಲ್ಲಿ ಹೊಂದಿದ್ದಾನೆ. ಮಾರಬೇಕೆಂದು ಭಾವಿಸಿದ್ದ ಎಸ್ಟೇಟ್ ಬೇರೆ ಸ್ಥಳದಲ್ಲಿ ಇದ್ದ ಬೇರೆ ವಿಸ್ತೀರ್ಣದ್ದೆಂಬ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡಲಾಗದು.

**98. ಅಸ್ತಿತ್ವದಲ್ಲಿರುವ ಸಂಗತಿಗಳ ಸಂಬಂಧದಲ್ಲಿ ಅರ್ಥವಾಗದ ದಸ್ತಾವೇಜುಗಳ ಬಗ್ಗೆ ಸಾಕ್ಷ್ಯ.-** ಒಂದು ದಸ್ತಾವೇಜಿನಲ್ಲಿ ಬಳಸಿದ ಭಾಷೆಯು ಸ್ವತಃ ಸ್ಪಷ್ಟವಾಗಿರುವಾಗ ಅಸ್ತಿತ್ವದಲ್ಲಿರುವ ಸಂಗತಿಗಳ ಸಂಬಂಧದಲ್ಲಿ ಅರ್ಥವಾಗದಿದ್ದಾಗ ಅದನ್ನು ಒಂದು ವಿಶೇಷ ಅರ್ಥದಲ್ಲಿ ಬಳಸಲಾಯಿತೆಂಬುದನ್ನು ತೋರಿಸುವುದಕ್ಕಾಗಿ ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

‘ಎ’ಯು “ಬಿ”ಗೆ “ಕೋಲ್ಕತ್ತಾದಲ್ಲಿರುವ ನನ್ನ ಮನೆ” ಎಂದು ಬರೆದಿರುವ ಲಿಖಿತದ ಮೂಲಕ ಮಾರುತ್ತಾನೆ. “ಎ”ಯು ಕೋಲ್ಕತ್ತಾದಲ್ಲಿ ಯಾವ ಮನೆಯನ್ನೂ ಹೊಂದಿರಲಿಲ್ಲ, ಆದರೆ ಹೌರಾದಲ್ಲಿ ಅವನು ಒಂದು ಮನೆಯನ್ನು ಹೊಂದಿದ್ದಂತೆ ಕಂಡುಬರುತ್ತದೆ ಮತ್ತು ಲಿಖಿತವನ್ನು ಬರೆದುಕೊಟ್ಟ ಕಾಲದಿಂದ ಅದು “ಬಿ”ಯ ಸ್ವಾಧೀನದಲ್ಲಿದೆ. ಆ ಲಿಖಿತವು ಹೌರಾದಲ್ಲಿರುವ ಮನೆಗೆ ಸಂಬಂಧಪಟ್ಟಿದೆಯೆಂಬುದನ್ನು ತೋರಿಸುವುದಕ್ಕಾಗಿ ಸಂಗತಿಗಳನ್ನು ರುಜುವಾತುಪಡಿಸಬಹುದು.

**99. ಅನೇಕ ವ್ಯಕ್ತಿಗಳಲ್ಲಿ ಕೇವಲ ಒಬ್ಬನಿಗೆ ಮಾತ್ರ ಅನ್ವಯಿಸಬಹುದಾದ ಭಾಷೆಯ ಅನ್ವಯದ ಬಗ್ಗೆ ಸಾಕ್ಷ್ಯ.-** ದಸ್ತಾವೇಜಿನಲ್ಲಿ ಬಳಸಿದ ಭಾಷೆಯು ಹಲವಾರು ವ್ಯಕ್ತಿಗಳಲ್ಲಿ ಅಥವಾ ವಸ್ತುಗಳಲ್ಲಿ ಯಾವುದೇ ಒಂದಕ್ಕೆ ಅನ್ವಯಿಸಲು ಉದ್ದೇಶಿಸಿರುವಾಗ ಮತ್ತು ಒಂದಕ್ಕಿಂತ ಹೆಚ್ಚಿಗೆ ಅನ್ವಯಿಸಲು ಉದ್ದೇಶಿಸಿಲ್ಲದಿರುವಾಗ ಯಾವ ವ್ಯಕ್ತಿಗಳಲ್ಲಿ ಅಥವಾ ವಸ್ತುಗಳಲ್ಲಿ ಯಾವುದಾದರೂ ಒಬ್ಬ ವ್ಯಕ್ತಿಗೆ ಅಥವಾ ಒಂದು ವಸ್ತುವಿಗೆ ಅನ್ವಯಿಸಲು ಉದ್ದೇಶಿಸಲಾಗಿತ್ತೋ ಎಂಬುದನ್ನು ತೋರಿಸುವ ಸಂಗತಿಗಳ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತಗಳು*

(ಎ) “ಎ”ಯು “ನನ್ನ ಬಿಳಿಯ ಕುದುರೆ” ಎಂದು ಹೇಳಿ ಅದನ್ನು ಒಂದು ಸಾವಿರ ರೂಪಾಯಿಗಳಿಗೆ “ಬಿ”ಗೆ ಮಾರಲು ಒಪ್ಪಿಕೊಳ್ಳುತ್ತಾನೆ. “ಎ”ಯು ಎರಡು ಬಿಳಿ ಕುದುರೆಗಳನ್ನು ಹೊಂದಿದ್ದಾನೆ. ಅವುಗಳಲ್ಲಿ ಯಾವುದನ್ನು ಕುರಿತು ಹೇಳಲಾಗಿತ್ತೆಂಬ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

(ಬಿ) “ಎ”ಯು “ಬಿ”ಯೊಡನೆ ರಾಮ್‌ಗಡ್‌ಗೆ ಹೋಗಲು ಒಪ್ಪಿಕೊಳ್ಳುತ್ತಾನೆ. ಅದು ರಾಜಸ್ಥಾನದ ರಾಮ್‌ಗಡ್‌ಗೆ ಅಥವಾ ಉತ್ತರಖಂಡದ ರಾಮ್‌ಗಡ್ ಎಂಬುದನ್ನು ತೋರಿಸುವ ಸಂಗತಿಗಳ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

**100. ಸಂಗತಿಗಳ ಎರಡು ಸಮೂಹ (set)ಗಳ ಪೈಕಿ ಯಾವುದೊಂದಕ್ಕೂ ಭಾಷೆಯು ಪೂರ್ಣವಾಗಿ ಮತ್ತು ಸರಿಯಾಗಿ ಅನ್ವಯಿಸದಿದ್ದಾಗ ಒಂದು ಸಮೂಹಕ್ಕೆ ಅನ್ವಯಿಸುವ ಬಗ್ಗೆ ಸಾಕ್ಷ್ಯ.-** ಬಳಸಿದ ಭಾಷೆಯು ಅಸ್ತಿತ್ವದಲ್ಲಿರುವ ಸಂಗತಿಗಳ ಒಂದು ಸಮೂಹಕ್ಕೆ ಭಾಗಶಃ ಮತ್ತು ಅಸ್ತಿತ್ವದಲ್ಲಿರುವ ಇನ್ನೊಂದು ಸಮೂಹಕ್ಕೆ ಭಾಗಶಃ ಅನ್ವಯಿಸುವಾಗ, ಆದರೆ ಅದು ಒಟ್ಟಾರೆ ಯಾವ ಸಮೂಹಕ್ಕೂ ಸರಿಯಾಗಿ ಅನ್ವಯಿಸದಿರುವಾಗ, ಅವೆರಡರಲ್ಲಿ ಯಾವುದಕ್ಕೆ ಅದನ್ನು ಅನ್ವಯಿಸಲು ಉದ್ದೇಶಿಸಿದೆ ಎಂಬುದನ್ನು ತೋರಿಸಲು ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

“‘ವೈ’ನ ಸ್ವಾಧೀನದಲ್ಲಿರುವ ‘ಎಕ್ಸ್’ ಎಂಬ ಸ್ಥಳದಲ್ಲಿರುವ ನನ್ನ ಭೂಮಿಯನ್ನು” ಎಂದು ನಮೂದಿಸಿ ‘ಎ’ಯು ಅದನ್ನು ‘ಬಿ’ಗೆ ಮಾರಲು ಒಪ್ಪಿಕೊಳ್ಳುತ್ತಾನೆ. ‘ಎ’ಯು ‘ಎಕ್ಸ್’ ಸ್ಥಳದಲ್ಲಿ ಭೂಮಿಯನ್ನು ಹೊಂದಿದ್ದಾನೆ, ಆದರೆ ಅದು ‘ವೈ’ನ ಸ್ವಾಧೀನದಲ್ಲಿಲ್ಲ ಮತ್ತು ‘ವೈ’ನ ಸ್ವಾಧೀನದಲ್ಲಿರುವ ಭೂಮಿಯನ್ನು ಹೊಂದಿದ್ದಾನೆ. ಆದರೆ ಅದು ‘ಎಕ್ಸ್’ ಎಂಬ ಸ್ಥಳದಲ್ಲಿಲ್ಲ. ಅವನು ಯಾವುದನ್ನು ಮಾರಲು ಉದ್ದೇಶಿಸಿದ್ದಾನೆಂಬುದನ್ನು ತೋರಿಸುವ ಸಂಗತಿಗಳ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

**101. ಓದಲಾಗದ ಬರಹ, ಇತ್ಯಾದಿಗಳ ಅರ್ಥದ ಬಗ್ಗೆ ಸಾಕ್ಷ್ಯ.-** ಓದಲಾಗದ ಅಥವಾ ಸಾಮಾನ್ಯವಾಗಿ ತಿಳಿಯಲಾಗದ ಬರಹದ, ವಿದೇಶದ, ಅಪ್ರಚಲಿತ, ತಾಂತ್ರಿಕ, ಸ್ಥಳೀಯ ಮತ್ತು ಪ್ರಾಂತೀಯ ಶಬ್ದ ಪ್ರಯೋಗಗಳ, ಸಂಕ್ಷಿಪ್ತ ರೂಪಗಳ ಮತ್ತು ವಿಶಿಷ್ಟಾರ್ಥದಲ್ಲಿ ಬಳಸಿದ ಶಬ್ದಗಳ ಅರ್ಥವನ್ನು ತೋರಿಸುವುದಕ್ಕಾಗಿ ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

‘ಎ’ ಎಂಬ ಶಿಲ್ಪಿಯು, “ನನ್ನ ಎಲ್ಲ ಆಕೃತಿಗಳನ್ನು” ಎಂದು ನಮೂದಿಸಿ ‘ಬಿ’ಗೆ ಅವುಗಳನ್ನು ಮಾರಲು ಒಪ್ಪಿಕೊಳ್ಳುತ್ತಾನೆ. ‘ಎ’ಯು ಆಕೃತಿಗಳನ್ನು ಮತ್ತು ಆಕೃತಿಗಳನ್ನು ಮಾಡುವ ಉಪಕರಣಗಳನ್ನು ಹೊಂದಿರುತ್ತಾನೆ, ಅವನು ಯಾವುದನ್ನು ಮಾರಲು ಉದ್ದೇಶಿಸಿದ್ದನೆಂಬುದನ್ನು ತೋರಿಸುವುದಕ್ಕೆ ಸಾಕ್ಷ್ಯವನ್ನು ಕೊಡಬಹುದು.

**102. ದಸ್ತಾವೇಜಿನ ನಿಬಂಧನೆಗಳನ್ನು ವ್ಯತ್ಯಾಸಗೊಳಿಸುವ ಒಪ್ಪಂದದ ಬಗ್ಗೆ ಸಾಕ್ಷ್ಯವನ್ನು ಯಾರು ಕೊಡಬಹುದು.-** ಒಂದು ದಸ್ತಾವೇಜಿನ ಪಕ್ಷಕಾರರಲ್ಲದ ಅಥವಾ ಅವರ ಹಿತಾಸಕ್ತಿಯ ಪ್ರತಿನಿಧಿಗಳಲ್ಲದ ವ್ಯಕ್ತಿಗಳು ಆ ದಸ್ತಾವೇಜಿನ ನಿಬಂಧನೆಗಳನ್ನು ವ್ಯತ್ಯಾಸಗೊಳಿಸುವ ಸಮಕಾಲೀನ ಒಪ್ಪಂದವನ್ನು ತೋರಿಸುವಂಥ ಯಾವುದೇ ಸಂಗತಿಗಳ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

‘ಬಿ’ಯು ‘ಎ’ಗೆ ನಿರ್ದಿಷ್ಟ ಹತ್ತಿಯನ್ನು ಮಾರತಕ್ಕದ್ದೆಂದೂ, ಅದನ್ನು ಸರಬರಾಜು ಮಾಡಿದಾಗ ಹಣಸಂದಾಯ ಮಾಡಬೇಕೆಂದೂ ‘ಎ’ ಮತ್ತು ‘ಬಿ’ಯು ಒಂದು ಲಿಖಿತ ಕರಾರನ್ನು ಮಾಡಿಕೊಳ್ಳುತ್ತಾರೆ. ಅದೇ ಸಂದರ್ಭದಲ್ಲಿ ಹಣ ಸಂದಾಯ ಮಾಡಲು ‘ಎ’ಗೆ ಮೂರು ತಿಂಗಳ ವಾಯಿದೆಯನ್ನು ಕೊಡತಕ್ಕದ್ದೆಂದು ಅವರು ಒಂದು ಮೌಖಿಕ ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ. ಇದನ್ನು ‘ಎ’ ಮತ್ತು ‘ಬಿ’ ಮಧ್ಯೆ ನಡೆದುದೆಂದು ತೋರಿಸಲಾಗುವುದಿಲ್ಲ. ಆದರೆ ಅದು ತನ್ನ ಹಿತಾಸಕ್ತಿಯನ್ನು ಬಾಧಿಸುವಂತಿದ್ದರೆ, ‘ಸಿ’ಯು ಅದನ್ನು ತೋರಿಸಬಹುದು.

**103. ಮರಣಶಾಸನಗಳಿಗೆ ಸಂಬಂಧಪಟ್ಟ ಭಾರತ ಉತ್ತರಾಧಿಕಾರ ಅಧಿನಿಯಮದ ಉಪಬಂಧಗಳ ಉಳಿಸುವಿಕೆ.-** ಈ ಅಧ್ಯಾಯದಲ್ಲಿ ಒಳಗೊಂಡಿರುವುದು ಯಾವುದೂ, ಮರಣಶಾಸನದ ಅರ್ಥಾನ್ವಯಕ್ಕೆ ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ರ ಯಾವುದೇ ಉಪಬಂಧಗಳನ್ನು ಬಾಧಿಸತಕ್ಕದ್ದಲ್ಲ.

## ಭಾಗ IV

## ಸಾಕ್ಷ್ಯವನ್ನು ಹಾಜರುಪಡಿಸುವುದು ಮತ್ತು ಅದರ ಪರಿಣಾಮ

## ಅಧ್ಯಾಯ VII

## ರುಜುವಾತಿನ ಹೊಣೆ

**104. ರುಜುವಾತಿನ ಹೊಣೆ.-** ತಾನು ಹೇಳುವ ಸಂಗತಿಗಳ ಅಸ್ತಿತ್ವದ ಮೇಲೆ ಅವಲಂಬಿಸಿರುವ ಯಾವುದೇ ಕಾನೂನುಸಮ್ಮತ ಹಕ್ಕು ಅಥವಾ ಹೊಣೆಗಾರಿಕೆಯ ಬಗ್ಗೆ ನ್ಯಾಯಾಲಯವು ತೀರ್ಪು ಕೊಡಬೇಕೆಂದು ಇಚ್ಛಿಸುವ ಯಾರೇ ವ್ಯಕ್ತಿಯು ಆ ಸಂಗತಿಗಳು ಅಸ್ತಿತ್ವದಲ್ಲಿವೆ ಎಂದು ರುಜುವಾತು ಮಾಡತಕ್ಕದ್ದು. ಒಬ್ಬ ವ್ಯಕ್ತಿಯು ಯಾವುದೇ ಸಂಗತಿಯ ಅಸ್ತಿತ್ವವನ್ನು ರುಜುವಾತು ಮಾಡಲು ಬದ್ಧನಾಗಿರುವಾಗ, ಅದರ ರುಜುವಾತಿನ ಹೊಣೆಯು ಆ ವ್ಯಕ್ತಿಯ ಮೇಲಿರುವುದೆಂದು ಹೇಳಲಾಗುತ್ತದೆ.

*ದೃಷ್ಟಾಂತಗಳು*

(ಎ) "ಬಿ"ಯು ಮಾಡಿರುವನೆಂದು "ಎ"ಯು ಹೇಳುವ ಅಪರಾಧಕ್ಕಾಗಿ "ಬಿ"ಯನ್ನು ದಂಡಿಸತಕ್ಕದ್ದೆಂದು ತೀರ್ಪು ಕೊಡುವಂತೆ ನ್ಯಾಯಾಲಯವನ್ನು "ಎ"ಯು ಕೋರುತ್ತಾನೆ. "ಬಿ"ಯು ಅಪರಾಧ ಮಾಡಿರುವನೆಂಬುದನ್ನು "ಎ"ಯು ರುಜುವಾತು ಮಾಡತಕ್ಕದ್ದು.

(ಬಿ) ತಾನು ಸಮರ್ಥಿಸುವ ಸಂಗತಿಗಳ ಕಾರಣದಿಂದ, "ಬಿ"ಯ ಸ್ವಾಧೀನದಲ್ಲಿರುವ ನಿರ್ದಿಷ್ಟ ಭೂಮಿಯ ಮೇಲೆ ತನಗೆ ಹಕ್ಕಿದೆಯೆಂದು ತೀರ್ಪು ಕೊಡಬೇಕೆಂದು "ಎ"ಯು ನ್ಯಾಯಾಲಯವನ್ನು ಕೋರುತ್ತಾನೆ ಮತ್ತು "ಬಿ"ಯು ಅದು ನಿಜವೆಂಬುದನ್ನು ನಿರಾಕರಿಸುತ್ತಾನೆ. ಆ ಸಂಗತಿಗಳ ಅಸ್ತಿತ್ವವನ್ನು "ಎ"ಯು ರುಜುವಾತುಪಡಿಸತಕ್ಕದ್ದು.

**105. ರುಜುವಾತಿನ ಹೊಣೆಯು ಯಾರ ಮೇಲಿರುತ್ತದೆ.-** ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಉಭಯ ಪಕ್ಷಗಳು ಯಾವುದೇ ಸಾಕ್ಷ್ಯವನ್ನು ಒದಗಿಸದಿದ್ದರೆ ವಿಫಲನಾಗುವ ವ್ಯಕ್ತಿಯ ಮೇಲೆ ರುಜುವಾತಿನ ಹೊಣೆ ಇರುತ್ತದೆ.

*ದೃಷ್ಟಾಂತಗಳು*

(ಎ) "ಬಿ"ಯ ಸ್ವಾಧೀನದಲ್ಲಿರುವ ಭೂಮಿಗಾಗಿ "ಎ"ಯು "ಬಿ"ಯ ಮೇಲೆ ದಾವೆ ಹೂಡುತ್ತಾನೆ ಮತ್ತು "ಎ"ಯು ಸಮರ್ಥಿಸುವಂತೆ ಆ ಭೂಮಿಯನ್ನು "ಬಿ"ಯ ತಂದೆಯಾದ "ಸಿ"ಯು ಮರಣಶಾಸನದ ಮೂಲಕ "ಎ"ಗೆ ಬಿಟ್ಟಿದ್ದಾನೆ. ಉಭಯ ಪಕ್ಷವೂ ಸಾಕ್ಷ್ಯವನ್ನು ಒದಗಿಸದಿದ್ದರೆ, ಆ ಭೂಮಿಯನ್ನು ತನ್ನ ಸ್ವಾಧೀನದಲ್ಲಿ ಉಳಿಸಿಕೊಳ್ಳಲು "ಬಿ"ಯು ಹಕ್ಕುಳ್ಳವನಾಗಿರುತ್ತಾನೆ, ಆದುದರಿಂದ ರುಜುವಾತಿನ ಹೊಣೆಯು "ಎ"ಯ ಮೇಲಿರುತ್ತದೆ.

(ಬಿ) ಒಂದು ಬಾಂಡ್‌ನ ಮೇರೆಗೆ ಬರಬೇಕಾದ ಹಣಕ್ಕಾಗಿ "ಎ"ಯು "ಬಿ"ಯ ಮೇಲೆ ದಾವೆ ಹೂಡುತ್ತಾನೆ. ಬಾಂಡನ್ನು ಬರೆದುಕೊಟ್ಟಿರುವುದನ್ನು ಒಪ್ಪಲಾಗಿದೆ, ಆದರೆ ಅದನ್ನು ಮೋಸದಿಂದ ಪಡೆದುಕೊಳ್ಳಲಾಯಿತೆಂದು "ಬಿ"ಯು ಹೇಳುತ್ತಾನೆ. "ಎ"ಯು ಅದನ್ನು ನಿರಾಕರಿಸುತ್ತಾನೆ. ಉಭಯ ಪಕ್ಷವೂ ಸಾಕ್ಷ್ಯವನ್ನು ಒದಗಿಸದಿದ್ದರೆ, ಬಾಂಡ್ ವಿವಾದಿತವಾಗದಿರುವುದರಿಂದ ಮತ್ತು ಮೋಸವು ರುಜುವಾತಾಗದಿರುವುದರಿಂದ "ಎ"ಯು ಗೆಲ್ಲುತ್ತಾನೆ. ಆದುದರಿಂದ ರುಜುವಾತಿನ ಹೊಣೆಯು "ಬಿ"ಯ ಮೇಲೆ ಇರುತ್ತದೆ.

**106. ಒಂದು ನಿರ್ದಿಷ್ಟ ಸಂಗತಿಗೆ ಸಂಬಂಧಿಸಿದಂತೆ ರುಜುವಾತಿನ ಹೊಣೆ.-** ಯಾವುದೇ ನಿರ್ದಿಷ್ಟ ಸಂಗತಿಗೆ ಸಂಬಂಧಿಸಿದಂತೆ ರುಜುವಾತು ಮಾಡುವ ಹೊಣೆಯು, ಯಾರೇ ನಿರ್ದಿಷ್ಟ ವ್ಯಕ್ತಿಯು ಆ ಸಂಗತಿಯನ್ನು ರುಜುವಾತು ಮಾಡಬೇಕೆಂದು ಯಾವುದೇ ಕಾನೂನಿನ ಮೂಲಕ ಉಪಬಂಧಿಸಿದ್ದ ಹೊರತು, ನ್ಯಾಯಾಲಯವು ಅದರ ಅಸ್ತಿತ್ವವನ್ನು ನಂಬಬೇಕೆಂದು ಅಪೇಕ್ಷಿಸುವ ವ್ಯಕ್ತಿಯ ಮೇಲೆ ಇರುತ್ತದೆ.

*ದೃಷ್ಟಾಂತಗಳು*

ಕಳವಿಗಾಗಿ "ಎ"ಯು "ಬಿ"ಯನ್ನು ಪ್ರಾಸಿಕ್ಯೂಟ್ ಮಾಡುತ್ತಾನೆ ಮತ್ತು "ಬಿ"ಯು ಕಳವು ಮಾಡಿರುವುದಾಗಿ "ಸಿ"ಯ ಮುಂದೆ ಒಪ್ಪಿಕೊಂಡಿದ್ದನೆಂಬುದನ್ನು ನ್ಯಾಯಾಲಯವು ನಂಬಬೇಕೆಂದು ಅಪೇಕ್ಷಿಸುತ್ತಾನೆ. "ಎ"ಯು ಆ ಒಪ್ಪಿಗೆಯನ್ನು ರುಜುವಾತುಪಡಿಸತಕ್ಕದ್ದು. ಆ ಸಮಯದಲ್ಲಿ ತಾನು ಬೇರೆಡೆಯಲ್ಲಿ ಇದ್ದನೆಂಬುದನ್ನು ನ್ಯಾಯಾಲಯವು ನಂಬಬೇಕೆಂದು "ಬಿ"ಯು ಅಪೇಕ್ಷಿಸುತ್ತಾನೆ, ಅದನ್ನು ಅವನು ರುಜುವಾತುಪಡಿಸತಕ್ಕದ್ದು.

**107. ಸಾಕ್ಷ್ಯವನ್ನು ಅಂಗೀಕಾರಾರ್ಹವನ್ನಾಗಿ ಮಾಡಲು ರುಜುವಾತು ಮಾಡಬೇಕಾದ ಸಂಗತಿಯನ್ನು ರುಜುವಾತು ಮಾಡುವ ಹೊಣೆ.-** ಇತರ ಯಾವುದೇ ಸಂಗತಿಯ ಬಗ್ಗೆ ಸಾಕ್ಷ್ಯ ಕೊಡಲು ಯಾರೇ ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರುಜುವಾತು ಮಾಡುವ ಅಗತ್ಯವಿರುವ ಯಾವುದೇ ಸಂಗತಿಯನ್ನು ರುಜುವಾತು ಮಾಡುವ ಹೊಣೆಯು ಅಂಥ ಸಾಕ್ಷ್ಯವನ್ನು ಕೊಡಲು ಬಯಸುವ ವ್ಯಕ್ತಿಯ ಮೇಲೆ ಇರುತ್ತದೆ.

*ದೃಷ್ಟಾಂತಗಳು*

(ಎ) ಔ/ಯ ಮರಣನ್ಮೋಖ ಹೇಳಿಕೆಯನ್ನು ರುಜುವಾತು ಮಾಡಲು ಓ/ಯು ಬಯಸುತ್ತಾನೆ. ಓ/ಯು ಔ/ಯ ಮರಣವನ್ನು ರುಜುವಾತುಪಡಿಸತಕ್ಕದ್ದು.

(ಬಿ) ಕಳೆದುಹೋದ ಒಂದು ದಸ್ತಾವೇಜಿನ ಒಳಾಂಶಗಳನ್ನು ಎರಡನೆಯ ಸಾಕ್ಷ್ಯದ ಮೂಲಕ ರುಜುವಾತುಪಡಿಸಲು ಓ/ಯು ಬಯಸುತ್ತಾನೆ. ಆ ದಸ್ತಾವೇಜು ಕಳೆದುಹೋಗಿರುವುದನ್ನು ಓ/ಯು ರುಜುವಾತುಪಡಿಸತಕ್ಕದ್ದು.

**108. ಆಪಾದಿತನ ಮೊಕದ್ದಮೆಯು ಅಪವಾದಗಳೊಳಗೆ ಬರುತ್ತದೆಂಬುದನ್ನು ರುಜುವಾತುಪಡಿಸುವ ಹೊಣೆ.-** ಯಾವುದೇ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯು ಆಪಾದಿತನಾಗಿರುವಾಗ, ಭಾರತೀಯ ನ್ಯಾಯ ಸಂಹಿತೆ, 2023 ರಲ್ಲಿನ ಸಾಮಾನ್ಯ ಅಪವಾದಗಳಲ್ಲಿ ಯಾವುದಾದರೂ ಒಂದಕ್ಕೆ ಅಥವಾ ಸದರಿ ಸಂಹಿತೆಯ ಇತರ ಯಾವುದೇ ಭಾಗದಲ್ಲಿರುವ ಯಾವುದೇ ವಿಶೇಷ ಅಪವಾದಕ್ಕೆ ಅಥವಾ ಪರಂತುಕಕ್ಕೆ ಅಥವಾ ಅಪರಾಧವನ್ನು ವ್ಯಾಖ್ಯಾನಿಸುವ ಯಾವುದೇ ಕಾನೂನಿನಲ್ಲಿ ಆ ಮೊಕದ್ದಮೆಯನ್ನು ಒಳಪಡಿಸುವ ಸನ್ನಿವೇಶಗಳ ಅಸ್ತಿತ್ವವನ್ನು ರುಜುವಾತುಪಡಿಸುವ ಹೊಣೆಯು ಅವನ ಮೇಲೆಯೇ ಇರುತ್ತದೆ ಮತ್ತು ಅಂಥ ಸನ್ನಿವೇಶಗಳು ಇರಲಿಲ್ಲವೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

*ದೃಷ್ಟಾಂತಗಳು*

(ಎ) ಕೊಲೆಯ ಆಪಾದಿತನಾದ ಓ/ಯು, ಮಾನಸಿಕ ಅಸ್ವಸ್ಥತೆಯಿಂದಾಗಿ ತಾನು ಮಾಡಿದ ಕೃತ್ಯದ ಸ್ವರೂಪವು ತನಗೆ ತಿಳಿದಿರಲಿಲ್ಲವೆಂದು ಹೇಳುತ್ತಾನೆ. ಅದನ್ನು ರುಜುವಾತುಪಡಿಸುವ ಹೊಣೆಯು ಓ/ಯ ಮೇಲಿರುತ್ತದೆ.

(ಬಿ) ಕೊಲೆಯ ಆಪಾದಿತನಾದ ಓ/ಯು, ತೀವ್ರ ಮತ್ತು ಹಠಾತ್ ಪ್ರಚೋದನೆಯಿಂದಾಗಿ ತಾನು ತನ್ನ ಮೇಲಿನ ನಿಯಂತ್ರಣ ಶಕ್ತಿಯನ್ನು ಕಳೆದುಕೊಂಡಿದ್ದಾಗಿ ಹೇಳುತ್ತಾನೆ. ಅದನ್ನು ರುಜುವಾತುಪಡಿಸುವ ಹೊಣೆಯು ಓ/ಯ ಮೇಲಿರುತ್ತದೆ;

(ಸಿ) ಭಾರತೀಯ ನ್ಯಾಯ ಸಂಹಿತೆ, 2023ರ 117ನೇ ಪ್ರಕರಣ, 122ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಉಪಬಂಧಿಸಿರುವುದನ್ನು ಹೊರತುಪಡಿಸಿ, ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟುಮಾಡುವ ವ್ಯಕ್ತಿಯು ಕೆಲವು ದಂಡನೆಗಳಿಗೆ ಒಳಪಡತಕ್ಕದ್ದೆಂದು ಉಪಬಂಧಿಸುತ್ತದೆ. ಓ/ಯು ಸ್ವಯಿಚ್ಛೆಯಿಂದ ತೀವ್ರ ಗಾಯ ಉಂಟುಮಾಡಿದ್ದಾನೆಂದು 117ನೇ ಪ್ರಕರಣದ ಮೇರೆಗೆ ಆರೋಪಿಸಲಾಗಿದೆ. ಈ ಮೊಕದ್ದಮೆಯನ್ನು 122ನೇ ಪ್ರಕರಣದ (2)ನೇ ಉಪಪ್ರಕರಣಕ್ಕೆ ಒಳಪಡಿಸುವ ಸನ್ನಿವೇಶಗಳನ್ನು ರುಜುವಾತುಪಡಿಸುವ ಹೊಣೆಯು ಓ/ಯ ಮೇಲಿರುತ್ತದೆ.

**109. ವಿಶೇಷತಃ ತನಗೆ ತಿಳಿದಿರುವ ಸಂಗತಿಯನ್ನು ರುಜುವಾತುಪಡಿಸುವ ಹೊಣೆ.-** ಒಬ್ಬ ವ್ಯಕ್ತಿಗೆ ಯಾವುದೇ ಸಂಗತಿಯು ವಿಶೇಷವಾಗಿ ತಿಳಿದಿರುವಾಗ ಆ ಸಂಗತಿಯನ್ನು ರುಜುವಾತುಪಡಿಸುವ ಹೊಣೆ ಅವನ ಮೇಲೆಯೇ ಇರುತ್ತದೆ.

*ದೃಷ್ಟಾಂತಗಳು*

(ಎ) ಕೃತ್ಯದ ಸ್ವರೂಪ ಮತ್ತು ಸನ್ನಿವೇಶಗಳು ಸೂಚಿಸುವ ಉದ್ದೇಶವಲ್ಲದ ಇತರ ಉದ್ದೇಶದಿಂದ ಕೃತ್ಯವನ್ನು ಒಬ್ಬ ವ್ಯಕ್ತಿಯು ಮಾಡಿದಾಗ, ಆ ಉದ್ದೇಶವನ್ನು ರುಜುವಾತುಪಡಿಸುವ ಹೊಣೆಯು ಆ ವ್ಯಕ್ತಿಯ ಮೇಲಿರುತ್ತದೆ.

(ಬಿ) ಓ/ಯು ಟಿಕೇಟು ಇಲ್ಲದೆ ರೈಲಿನಲ್ಲಿ ಪ್ರಯಾಣ ಮಾಡಿದ್ದಾನೆಂದು ಆಪಾದಿತನಾಗಿದ್ದಾನೆ. ತಾನು ಟಿಕೇಟು ಹೊಂದಿದ್ದೆನೆಂಬುದನ್ನು ರುಜುವಾತುಪಡಿಸುವ ಹೊಣೆಯು ಅವನ ಮೇಲೆ ಇರುತ್ತದೆ.

**110. ಮೂವತ್ತು ವರ್ಷಗಳಿಂದೀಚೆಗೆ ಬದುಕಿರುವವನೆಂದು ತಿಳಿದ ವ್ಯಕ್ತಿಯ ಮರಣದ ಬಗ್ಗೆ ರುಜುವಾತುಪಡಿಸುವ ಹೊಣೆ.-** ಒಬ್ಬ ವ್ಯಕ್ತಿಯು ಬದುಕಿರುವನೇ ಅಥವಾ ಮರಣ ಹೊಂದಿರುವನೇ ಎಂಬ ಪ್ರಶ್ನೆ ಇರುವಾಗ ಮತ್ತು ಮೂವತ್ತು ವರ್ಷಗಳಿಂದೀಚೆಗೆ ಅವನು ಬದುಕಿದ್ದನು ಎಂದು ತೋರಿಸಿಕೊಟ್ಟಾಗ, ಅವನು ಮರಣ ಹೊಂದಿದನೆಂಬ ಬಗ್ಗೆ ರುಜುವಾತುಪಡಿಸುವ ಹೊಣೆಯು ಅದನ್ನು ಸಮರ್ಥಿಸುವ ವ್ಯಕ್ತಿಯ ಮೇಲೆ ಇರುತ್ತದೆ.

**111. ಯಾವ ವ್ಯಕ್ತಿಯ ಬಗ್ಗೆ ಏಳು ವರ್ಷಗಳಿಂದ ಸುದ್ದಿಯಿಲ್ಲವೋ ಆ ವ್ಯಕ್ತಿಯು ಬದುಕಿರುವನೆಂದು ರುಜುವಾತುಪಡಿಸುವ ಹೊಣೆ.-** ಒಬ್ಬ ವ್ಯಕ್ತಿಯು ಬದುಕಿರುವನೇ ಅಥವಾ ಮರಣ ಹೊಂದಿರುವನೇ ಎಂಬ ಪ್ರಶ್ನೆಯು ಇರುವಾಗ ಮತ್ತು ಅವನು ಬದುಕಿದ್ದಿದ್ದರೆ ಸ್ವಾಭಾವಿಕವಾಗಿಯೇ ಅವನ ಬಗ್ಗೆ ತಿಳಿದಿರಬಹುದಾದ ವ್ಯಕ್ತಿಗಳು ಏಳು ವರ್ಷಗಳಿಂದ ಅವನ ಬಗ್ಗೆ ಯಾವ ಸುದ್ದಿಯನ್ನೂ ಕೇಳಿಲ್ಲವೆಂದು ರುಜುವಾತಾಗಿದ್ದರೆ, ಅವನು ಬದುಕಿರುವನೆಂದು ರುಜುವಾತುಪಡಿಸುವ ಹೊಣೆಯು ಅದನ್ನು ಸಮರ್ಥಿಸುವ ವ್ಯಕ್ತಿಯ ಮೇಲೆ ಇರುತ್ತದೆ.

**112. ಪಾಲುಗಾರರ, ಭೂಮಾಲೀಕ ಮತ್ತು ಗೇಣಿದಾರ, ಯಜಮಾನ ಮತ್ತು ಏಜೆಂಟ್ ಇವರ ಸಂದರ್ಭದಲ್ಲಿ ಪರಸ್ಪರ ಸಂಬಂಧದ ರುಜುವಾತಿನ ಹೊಣೆ.-** ವ್ಯಕ್ತಿಗಳು, ಪಾಲುಗಾರರೇ, ಭೂಮಾಲೀಕರೇ ಮತ್ತು ಗೇಣಿದಾರರೇ ಅಥವಾ ಯಜಮಾನರೇ ಮತ್ತು ಏಜೆಂಟರೇ ಎಂಬ ಪ್ರಶ್ನೆಯು ಇರುವಾಗ ಮತ್ತು ಅವರು ಹಾಗೆ ವರ್ತಿಸುತ್ತಿರುವರೆಂದು ತೋರಿಸಿದಾಗ, ಅನುಕ್ರಮವಾಗಿ ಅವರು ಪರಸ್ಪರ ಅಂಥ ಸಂಬಂಧವನ್ನು ಹೊಂದಿಲ್ಲವೆಂದು ಅಥವಾ ಹೊಂದಿರುವುದು ಕೊನೆಗೊಂಡಿದೆಯೆಂದು ರುಜುವಾತುಪಡಿಸುವ ಹೊಣೆಯು, ಅದನ್ನು ಸಮರ್ಥಿಸುವ ವ್ಯಕ್ತಿಯ ಮೇಲೆ ಇರುತ್ತದೆ.

**113. ಒಡೆತನದ ರುಜುವಾತಿನ ಹೊಣೆ.-** ಯಾರೇ ವ್ಯಕ್ತಿಯು ತನ್ನ ಸ್ವಾಧೀನದಲ್ಲಿದೆಯೆಂದು ತೋರಿಸಲಾದ ಯಾವುದೇ ವಸ್ತುವಿನ ಒಡೆಯನೇ ಎಂಬ ಪ್ರಶ್ನೆ ಇರುವಾಗ, ಅವನು ಒಡೆಯನಲ್ಲವೆಂದು ರುಜುವಾತುಪಡಿಸುವ ಹೊಣೆಯು ಆತನು ಒಡೆಯನಲ್ಲವೆಂದು ಸಮರ್ಥಿಸುವ ವ್ಯಕ್ತಿಯ ಮೇಲೆ ಇರುತ್ತದೆ.

**114. ಒಬ್ಬ ಪಕ್ಷಕಾರನು ಸಕ್ರಿಯ ವಿಶ್ವಾಸ ಸಂಬಂಧ ಹೊಂದಿರುವ ವ್ಯವಹಾರಗಳಲ್ಲಿನ ಸದ್ಭಾವನೆಯ ರುಜುವಾತು.-** ಪಕ್ಷಕಾರರ ನಡುವಣ ವ್ಯವಹಾರದಲ್ಲಿನ ಸದ್ಭಾವನೆಯ ಬಗ್ಗೆ ಪ್ರಶ್ನೆಯು ಇರುವಾಗ, ಅವರಲ್ಲಿ ಒಬ್ಬನು ಮತ್ತೊಬ್ಬನ ಸಕ್ರಿಯ ವಿಶ್ವಾಸಕ್ಕೆ ಪಾತ್ರನಾಗಿದ್ದರೆ ವ್ಯವಹಾರದ ಸದ್ಭಾವನೆಯನ್ನು ರುಜುವಾತುಪಡಿಸುವ ಹೊಣೆಯು ಸಕ್ರಿಯ ವಿಶ್ವಾಸವನ್ನು ಹೊಂದಿರುವ ವ್ಯಕ್ತಿಯ ಮೇಲೆ ಇರುತ್ತದೆ.

*ದೃಷ್ಟಾಂತಗಳು*

(ಎ) ಕಕ್ಷಿಗಾರನು ಹೂಡಿರುವ ದಾವೆಯಲ್ಲಿ ಕಕ್ಷಿಗಾರನು, ತನ್ನ ನ್ಯಾಯವಾದಿಗೆ ಮಾಡಿದ ಮಾರಾಟದಲ್ಲಿನ ಸದ್ಭಾವನೆಯು ಪ್ರಶ್ನಿಸಲ್ಪಟ್ಟಿದೆ. ಆ ವ್ಯವಹಾರದಲ್ಲಿನ ಸದ್ಭಾವನೆಯ ಬಗ್ಗೆ ರುಜುವಾತುಪಡಿಸುವ ಹೊಣೆಯು ಆ ನ್ಯಾಯವಾದಿಯ ಮೇಲೆ ಇರುತ್ತದೆ.

(ಬಿ) ಆಗ ತಾನೆ ವಯಸ್ಸಿಗೆ ಬಂದ ಮಗನು ತನ್ನ ತಂದೆಗೆ ಮಾಡಿದ ಮಾರಾಟದಲ್ಲಿನ ಸದ್ಭಾವನೆಯು ಮಗನು ಹೂಡಿದ ದಾವೆಯಲ್ಲಿ ಪ್ರಶ್ನಿಸಲ್ಪಟ್ಟಿದೆ, ಆ ವ್ಯವಹಾರದಲ್ಲಿನ ಸದ್ಭಾವನೆಯನ್ನು ರುಜುವಾತುಪಡಿಸುವ ಹೊಣೆಯು ತಂದೆಯ ಮೇಲಿರುತ್ತದೆ.

**115. ಕೆಲವು ಅಪರಾಧಗಳಿಗೆ ಸಂಬಂಧಿಸಿದಂತೆ ಪೂರ್ವಭಾವನೆ.-** (1) ಉಪಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಪರಾಧವನ್ನು,-

(ಎ) ಗಲಭೆಯನ್ನು ಹತ್ತಿಕ್ಕುವುದು ಮತ್ತು ಸಾರ್ವಜನಿಕ ಸುವ್ಯವಸ್ಥೆಯನ್ನು ಪೂರ್ವಸ್ಥಿತಿಗೆ ತರುವುದು ಮತ್ತು ಅದನ್ನು ಕಾಯ್ದುಕೊಂಡು ಹೋಗಲು ಉಪಬಂಧವನ್ನು ಕಲ್ಪಿಸುವ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಮೇರೆಗೆ ಗಲಭೆಪೀಡಿತ ಪ್ರದೇಶವೆಂದು ಘೋಷಿಸಲಾದ ಯಾವುದೇ ಪ್ರದೇಶದಲ್ಲಿ; ಅಥವಾ

(ಬಿ) ಒಂದು ತಿಂಗಳಿಗೂ ಮೀರಿದ ಅವಧಿಯಲ್ಲಿ ಸಾರ್ವಜನಿಕ ಶಾಂತಿಗೆ ವ್ಯಾಪಕವಾದ ಭಂಗವುಂಟಾಗಿರುವಂಥ ಯಾವುದೇ ಪ್ರದೇಶದಲ್ಲಿ, ಒಬ್ಬ ವ್ಯಕ್ತಿಯು ಮಾಡಿರುವುದಾಗಿ ಆಪಾದಿತನಾಗಿರುವಲ್ಲಿ

ಮತ್ತು ಯಾವುದೇ ಸಶಸ್ತ್ರ ಬಲಗಳ ಅಥವಾ ಸಾರ್ವಜನಿಕ ಸುವ್ಯವಸ್ಥೆಯ ನಿರ್ವಹಣೆಯ ಜವಾಬ್ದಾರಿ ಹೊತ್ತ ಬಲಗಳ ಸದಸ್ಯರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದಾಗ ಅವರ ಮೇಲೆ ದಾಳಿ ಮಾಡಲು ಅಥವಾ ಅವರನ್ನು ತಡೆಗಟ್ಟಲು ಆ ಸ್ಥಳದಲ್ಲಿ ಅಥವಾ ಆ ಸ್ಥಳದಿಂದ ಬಂದೂಕು ಅಥವಾ ಸ್ಫೋಟಕಗಳನ್ನು ಉಪಯೋಗಿಸಿರುವ ಸಂದರ್ಭದಲ್ಲಿ ಅಂಥ ಪ್ರದೇಶದಲ್ಲಿನ ಸ್ಥಳದಲ್ಲಿ ಅಂಥ ವ್ಯಕ್ತಿಯು

ಅಲ್ಲಿದ್ದನೆಂದು ತೋರಿಸಿದರೆ ಅದಕ್ಕೆ ತದ್ವಿರುದ್ಧವಾದುದನ್ನು ತೋರಿಸಿದ ಹೊರತು, ಅಂಥ ವ್ಯಕ್ತಿಯು ಅಂಥ ಅಪರಾಧವನ್ನು ಮಾಡಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಪರಾಧಗಳು, ಈ ಕೆಳಕಂಡವುಗಳು ಆಗಿರುತ್ತವೆ, ಎಂದರೆ:-

(ಎ) ಭಾರತೀಯ ನ್ಯಾಯ ಸಂಹಿತೆ, 2023ರ 147ನೇ ಪ್ರಕರಣ, 148ನೇ ಪ್ರಕರಣ, 149ನೇ ಪ್ರಕರಣ ಅಥವಾ 150ನೇ ಪ್ರಕರಣದ ಮೇರೆಗಿನ ಅಪರಾಧ;

(ಬಿ) ಭಾರತೀಯ ನ್ಯಾಯ ಸಂಹಿತೆ, 2023ರ 149ನೇ ಪ್ರಕರಣ ಅಥವಾ 150ನೇ ಪ್ರಕರಣದ ಮೇರೆಗಿನ ಆಪರಾಧಿಕ ಒಳಸಂಚು ಅಥವಾ ಅದನ್ನು ಮಾಡಲು ಪ್ರಯತ್ನಿಸುವುದು ಅಥವಾ ದುಷ್ಪ್ರೇರಣೆ ನೀಡುವುದು.

**116. ವೈವಾಹಿಕ ಅವಧಿಯಲ್ಲಿನ ಜನನವು ಔರಸತ್ವದ ನಿರ್ಣಾಯಕ ರುಜುವಾತು.-** ತನ್ನ ತಾಯಿಯ ಮತ್ತು ಯಾರೇ ಪುರುಷನ ನಡುವೆ ನ್ಯಾಯಯುತ ವೈವಾಹಿಕ ಸಂಬಂಧವು ಮುಂದುವರಿಯುತ್ತಿರುವಾಗ ಅಥವಾ ಅಂಥ ಸಂಬಂಧವು ಮುರಿದ ನಂತರ ಇನ್ನೂರ ಎಂಬತ್ತು ದಿನಗಳೊಳಗೆ, ತಾಯಿಯು ಮತ್ತೆ ವಿವಾಹವಾಗದೆ ಇರುವಾಗ ಯಾರೇ ವ್ಯಕ್ತಿಯು ಹುಟ್ಟಿದ ಸಂಗತಿಯು, ಗರ್ಭದಾನವಾಗಬಹುದಾಗಿದ್ದ ಯಾವುದೇ ಸಮಯದಲ್ಲಿ ವಿವಾಹದ ಪಕ್ಷಕಾರರು ಪರಸ್ಪರ ಸಂಪರ್ಕ ಹೊಂದಿರಲಿಲ್ಲವೆಂದು ತೋರಿಸಿಕೊಟ್ಟ ಹೊರತು, ಅವನು ಅಂಥ ಪುರುಷನ ಔರಸತ್ವದ ಮಗನಾಗಿದ್ದನೆಂಬುದಕ್ಕೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

**117. ವಿವಾಹಿತ ಮಹಿಳೆಯ ಆತ್ಮಹತ್ಯೆಯ ದುಷ್ಪ್ರೇರಣೆಯ ಬಗ್ಗೆ ಪೂರ್ವಭಾವನೆ.-** ಒಬ್ಬ ಮಹಿಳೆಯು, ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಅವಳ ಗಂಡ ಅಥವಾ ಅವಳ ಗಂಡನ ಯಾರೇ ಸಂಬಂಧಿಯು ದುಷ್ಪ್ರೇರಿಸಿದ್ದನೋ ಹೇಗೆ, ಎಂಬ ಪ್ರಶ್ನೆ ಉದ್ಭವಿಸಿದಾಗ ಮತ್ತು ಅವಳು ತನ್ನ ವಿವಾಹದ ದಿನಾಂಕದಿಂದ ಏಳು ವರ್ಷಗಳ ಅವಧಿಯೊಳಗೆ ಆತ್ಮಹತ್ಯೆ ಮಾಡಿಕೊಂಡಿದ್ದಳೆಂದು ಮತ್ತು ಅವಳ ಗಂಡ ಅಥವಾ ಅವಳ ಗಂಡನ ಅಂಥ ಸಂಬಂಧಿಯು ಅವಳನ್ನು ಕ್ರೌರ್ಯಕ್ಕೆ ಒಳಪಡಿಸಿದ್ದರೆಂದು ತೋರಿಸಿರುವಾಗ ನ್ಯಾಯಾಲಯವು, ಪ್ರಕರಣದ ಎಲ್ಲ ಇತರ ಸಂದರ್ಭಗಳನ್ನು ಗಮನಿಸಿ, ಅಂಥ ಆತ್ಮಹತ್ಯೆಯನ್ನು, ಅವಳ ಗಂಡ ಅಥವಾ ಅವಳ ಗಂಡನ ಅಂಥ ಸಂಬಂಧಿಯು ದುಷ್ಪ್ರೇರಿಸಿದ್ದನೆಂದು ಪೂರ್ವಭಾವನೆ ಮಾಡಬಹುದು.

*ವಿವರಣೆ.-* ಈ ಪ್ರಕರಣದ ಉದ್ದೇಶಗಳಿಗಾಗಿ ìಕ್ರೌರ್ಯî ಎಂಬುದು ಭಾರತೀಯ ನ್ಯಾಯ ಸಂಹಿತೆ, 2023ರ 86ನೇ ಪ್ರಕರಣದಲ್ಲಿರುವಂಥ ಅರ್ಥವನ್ನೇ ಹೊಂದಿರತಕ್ಕದ್ದು.

**118. ವಧು-ವರದಕ್ಷಿಣೆ ಮರಣದ ಬಗ್ಗೆ ಪೂರ್ವಭಾವನೆ.-** ಒಬ್ಬ ವ್ಯಕ್ತಿಯು ಒಬ್ಬ ಮಹಿಳೆಯ ವಧು-ವರದಕ್ಷಿಣೆಗೆ ಸಂಬಂಧಿಸಿ ಮರಣವನ್ನು ಉಂಟುಮಾಡಿದ್ದಾನೋ ಹೇಗೆ ಎಂಬ ಪ್ರಶ್ನೆ ಉದ್ಭವಿಸಿದಾಗ ಮತ್ತು ಅವಳ ಮರಣಕ್ಕೆ ಮುಂಚೆ, ಅಂಥ ಮಹಿಳೆಯು ವಧು-ವರದಕ್ಷಿಣೆಗಾಗಿ ಯಾವುದೇ ತಗಾದೆಗಾಗಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಅಂಥ ವ್ಯಕ್ತಿಯಿಂದ ಕ್ರೌರ್ಯ ಅಥವಾ ಕಿರುಕುಳಕ್ಕೆ ಒಳಪಟ್ಟಿದ್ದಳು ಎಂದು ತೋರಿಸಿರುವಾಗ, ನ್ಯಾಯಾಲಯವು, ಆ ವಧು-ವರದಕ್ಷಿಣೆ ಬಗ್ಗೆ ಮರಣವನ್ನು ಅಂಥ ವ್ಯಕ್ತಿಯು ಉಂಟುಮಾಡಿದ್ದನೆಂದು ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ.-* ಈ ಪ್ರಕರಣದ ಉದ್ದೇಶಕ್ಕಾಗಿ ìವಧು-ವರದಕ್ಷಿಣೆ ಮರಣî ಎಂಬುದು ಭಾರತೀಯ ನ್ಯಾಯ ಸಂಹಿತೆ, 2023ರ 80ನೇ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕದ್ದು.

**119. ನ್ಯಾಯಾಲಯವು ಕೆಲವು ಸಂಗತಿಗಳ ಅಸ್ತಿತ್ವದ ಬಗ್ಗೆ ಪೂರ್ವಭಾವನೆ ಮಾಡಬಹುದು.-** (1) ನಿರ್ದಿಷ್ಟ ಪ್ರಕರಣಗಳ ಸಂಗತಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ನಡೆಯಬಹುದಾದ ಸ್ವಾಭಾವಿಕ ಘಟನೆಗಳನ್ನು, ಮಾನವನ ನಡತೆಯನ್ನು ಮತ್ತು ಸಾರ್ವಜನಿಕ ಹಾಗೂ ಖಾಸಗಿ ವ್ಯವಹಾರಗಳನ್ನು ನ್ಯಾಯಾಲಯವು ಗಮನಿಸಿ, ಪ್ರಕರಣವು ನಡೆದಿರುವುದು ಸಂಭವನೀಯವೆಂದು ತಾನು ಭಾವಿಸುವ ಯಾವುದೇ ಸಂಗತಿಯ ಅಸ್ತಿತ್ವದ ಬಗ್ಗೆ ಪೂರ್ವಭಾವನೆ ಮಾಡಬಹುದು.

*ದೃಷ್ಟಾಂತಗಳು*

ನ್ಯಾಯಾಲಯವು,-

(ಎ) ಕಳವಾದ ಕೂಡಲೇ ಕಳವು ಮಾಲುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಒಬ್ಬ ವ್ಯಕ್ತಿಯು, ಅವನು ಸ್ವಾಧೀನದಲ್ಲಿಟ್ಟುಕೊಂಡಿರುವ ಬಗ್ಗೆ ವಿವರಣೆ ಕೊಟ್ಟ ಹೊರತು ಕಳ್ಳನಾಗಿದ್ದಾನೆ ಎಂದು ಅಥವಾ ಅವು ಕಳವು ಮಾಲುಗಳೆಂದು ತಿಳಿದೂ ಅವುಗಳನ್ನು ಸ್ವೀಕರಿಸಿದ್ದಾನೆ ಎಂದು;

(ಬಿ) ಒಬ್ಬ ಸಹಾಪರಾಧಿಯು ಮುಖ್ಯ ವಿವರಗಳ ಬಗ್ಗೆ ಪುಷ್ಟೀಕರಿಸದ ಹೊರತು ಆತನು ವಿಶ್ವಾಸಾರ್ಹನಲ್ಲವೆಂದು;

(ಸಿ) ಅಂಗೀಕೃತವಾದ ಅಥವಾ ಹಿಂಬರಹ ಮಾಡಲಾದ ಒಂದು ವಿನಿಮಯ ಪತ್ರವು ಯೋಗ್ಯ ಪ್ರತಿಫಲಕ್ಕಾಗಿ ಅಂಗೀಕೃತವಾಯಿತು ಅಥವಾ ಹಿಂಬರಹ ಮಾಡಲ್ಪಟ್ಟಿತು ಎಂದು;

(ಡಿ) ಯಾವ ಅವಧಿಯೊಳಗಾಗಿ ಒಂದು ವಸ್ತು ಅಥವಾ ವಸ್ತುಗಳ ಸ್ಥಿತಿ ಸಾಮಾನ್ಯವಾಗಿ ಅಸ್ತಿತ್ವದಲ್ಲಿರುವುದು ನಿಂತುಹೋಗುವುದೋ ಆ ಅವಧಿಗೆ ಮುಂಚೆ ಅಸ್ತಿತ್ವದಲ್ಲಿದೆಯೆಂದು ತೋರಿಸಲಾಗಿರುವ ವಸ್ತು ಅಥವಾ ವಸ್ತುಗಳ ಸ್ಥಿತಿಯು ಇನ್ನೂ ಅಸ್ತಿತ್ವದಲ್ಲಿದೆ ಎಂದು;

(ಇ) ನ್ಯಾಯಿಕ ಮತ್ತು ಸರ್ಕಾರಿ ಅಧಿಕಾರಿಗಳ ಕಾರ್ಯಗಳನ್ನು ನಿಯತವಾಗಿ ನೆರವೇರಿಸಲಾಗಿದೆ ಎಂದು;

(ಎಫ್) ನಿರ್ದಿಷ್ಟ ಪ್ರಕರಣಗಳಲ್ಲಿ ವ್ಯವಹಾರದ ಸಾಮಾನ್ಯ ಕ್ರಮವನ್ನು ಅನುಸರಿಸಲಾಗಿದೆ ಎಂದು;

(ಜಿ) ಹಾಜರುಪಡಿಸಬಹುದಾಗಿದ್ದ ಆದರೆ ಹಾಜರುಪಡಿಸಿರದ ಸಾಕ್ಷ್ಯವನ್ನು ಹಾಜರುಪಡಿಸಿದಾಗ, ಅದನ್ನು ತಡೆಹಿಡಿದಿರುವ ವ್ಯಕ್ತಿಗೆ ಅದು ಪ್ರತಿಕೂಲವಾಗುವುದು ಎಂದು;

(ಹೆಚ್) ಉತ್ತರಿಸಲು ಕಾನೂನು ಒತ್ತಾಯಿಸದ ಪ್ರಶ್ನೆಗೆ ಉತ್ತರಿಸಲು ಒಬ್ಬ ವ್ಯಕ್ತಿಯು ನಿರಾಕರಿಸಿದರೆ, ಅವನು ಉತ್ತರಿಸಿದರೆ ಅದು ಅವನಿಗೆ ಪ್ರತಿಕೂಲವಾಗುವುದು ಎಂದು;

(ಐ) ಬಾಧ್ಯತೆಯನ್ನು ಸೃಷ್ಟಿಸುವ ಒಂದು ದಸ್ತಾವೇಜು ಅದಕ್ಕೆ ಬದ್ಧನಾದವನ ವಶದಲ್ಲಿದ್ದಾಗ, ಆ ಬಾಧ್ಯತೆಯನ್ನು ತೀರಿಸಲಾಗಿದೆ ಎಂದು

- ಪೂರ್ವಭಾವನೆ ಮಾಡಬಹುದು.

(2) ನ್ಯಾಯಾಲಯವು ತನ್ನ ಮುಂದಿರುವ ನಿರ್ದಿಷ್ಟ ಮೊಕದ್ದಮೆಗೆ ಅಂಥ ಸೂತ್ರಗಳು ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸುವಾಗ, ಈ ಕೆಳಕಂಡಂತ ಸಂಗತಿಗಳನ್ನೂ ಗಮನಿಸತಕ್ಕದ್ದು,-

(i) ದೃಷ್ಟಾಂತ (ಎ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಒಂದು ಗುರುತು ಹಾಕಿದ ರೂಪಾಯಿಯನ್ನು ಅದು ಕಳವಾದ ಕೂಡಲೇ ಒಬ್ಬ ಅಂಗಡಿ ಪಾಲಕನು ತನ್ನ ಗಲ್ಲಾ ಪೆಟ್ಟಿಗೆಯಲ್ಲಿ ಇಟ್ಟುಕೊಂಡಿದ್ದಾನೆ ಮತ್ತು ಅದು ತನ್ನ ಸ್ವಾಧೀನದಲ್ಲಿರುವ ಬಗ್ಗೆ ನಿರ್ದಿಷ್ಟವಾಗಿ ವಿವರಣೆಯನ್ನು ಕೊಡಲಾರದವನಾಗಿದ್ದಾನೆ. ಆದರೆ, ಅವನ ವ್ಯವಹಾರ ಕ್ರಮದಲ್ಲಿ ರೂಪಾಯಿಗಳನ್ನು ನಿರಂತರವಾಗಿ ಸ್ವೀಕರಿಸುತ್ತಿದ್ದಾನೆ;

(ii) ದೃಷ್ಟಾಂತ (ಬಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಅತ್ಯುತ್ತಮ ಚಾರಿತ್ರ್ಯವುಳ್ಳ ‘ಎ’ ಎಂಬ ವ್ಯಕ್ತಿಯನ್ನು ಒಂದು ಯಂತ್ರೋಪಕರಣವನ್ನು ಜೋಡಿಸುವುದರಲ್ಲಿನ ನಿರ್ಲಕ್ಷತೆಯ ಕೃತ್ಯದಿಂದ ಒಬ್ಬ ಮನುಷ್ಯನ ಮರಣವುಂಟು ಮಾಡಿದ ಬಗ್ಗೆ ಅಧಿವಿಚಾರಣೆಗೆ ಗುರಿಪಡಿಸಲಾಗಿದೆ. ಅಷ್ಟೇ ಒಳ್ಳೆಯ ಚಾರಿತ್ರ್ಯವುಳ್ಳ ಮತ್ತು ಆ ಜೋಡಣೆಯಲ್ಲಿ ಪಾಲುಗೊಂಡಿದ್ದ ‘ಬಿ’ ಎಂಬ

ವ್ಯಕ್ತಿಯು, ಏನು ಮಾಡಲಾಯಿತೆಂಬುದನ್ನು ಖಚಿತವಾಗಿ ವಿವರಿಸುತ್ತಾನೆ ಮತ್ತು ‘ಎ’ನ ಮತ್ತು ತನ್ನಿಂದಾದ ಸಾಮಾನ್ಯ ಬೇಜವಾಬ್ದಾರಿಯನ್ನು ಒಪ್ಪಿಕೊಳ್ಳುತ್ತಾನೆ ಮತ್ತು ವಿವರಿಸುತ್ತಾನೆ;

(iii) ದೃಷ್ಟಾಂತ (ಬಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಹಲವಾರು ವ್ಯಕ್ತಿಗಳಿಂದ ಒಂದು ಅಪರಾಧವು ಮಾಡಲ್ಪಟ್ಟಿದೆ. ಅಪರಾಧಿಗಳಲ್ಲಿ ‘ಎ’, ‘ಬಿ’ ಮತ್ತು ‘ಸಿ’ ಎಂಬ ಮೂವರನ್ನೂ ಆ ಸ್ಥಳದಲ್ಲಿಯೇ ಹಿಡಿಯಲಾಗಿದೆ ಮತ್ತು ಅವರನ್ನು ಬೇರೆ ಬೇರೆಯಾಗಿ ಇಡಲಾಗಿದೆ. ‘ಡಿ’ಯು ಅಪರಾಧ ಮಾಡಿದನೆಂದು ಅವರಲ್ಲಿ ಪ್ರತಿಯೊಬ್ಬನೂ ಹೇಳುತ್ತಾನೆ ಮತ್ತು ಅವರೆಲ್ಲರೂ ಮುಂಚೆಯೇ ಒಟ್ಟಾಗಿ ಯೋಚಿಸಿರುವುದು ತೀರಾ ಅಸಂಭವನೀಯವಾಗಿಸುವ ರೀತಿಯಲ್ಲಿ ಇರುವಾಗ ಅವರ ವಿವರಣೆಗಳು ಪರಸ್ಪರ ಪುಷ್ಟೀಕರಿಸುತ್ತವೆ;

(iv) ದೃಷ್ಟಾಂತ (ಸಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ವಿನಿಮಯ ಪತ್ರವನ್ನು ಬರೆದುಕೊಟ್ಟ ‘ಎ’ಯು, ಒಬ್ಬ ವ್ಯಾಪಾರಸ್ಥ, ಅದನ್ನು ಒಪ್ಪಿದವನಾದ ‘ಬಿ’ಯು, ಒಬ್ಬ ತರುಣ ಮತ್ತು ತಿಳುವಳಿಕೆಯಿಲ್ಲದ ವ್ಯಕ್ತಿ, ಅವನು ಸಂಪೂರ್ಣವಾಗಿ ‘ಎ’ಯ ಪ್ರಭಾವಕ್ಕೊಳಗಾಗಿದ್ದನು;

(v) ದೃಷ್ಟಾಂತ (ಡಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ- 5 ವರ್ಷಗಳ ಹಿಂದೆ ಒಂದು ನದಿಯು ನಿರ್ದಿಷ್ಟ ಪಾತ್ರದಲ್ಲಿ ಹರಿಯುತ್ತಿತ್ತು ಎಂಬುದನ್ನು ರುಜುವಾತುಪಡಿಸಲಾಗಿದೆ. ಆದರೆ, ಅದರ ಹರಿಯುವ ಪಾತ್ರವನ್ನು ಬದಲಾಯಿಸಿರಬಹುದಾದ ನೆರೆಹಾವಳಿಗಳು ಆ ಕಾಲದಿಂದಲೂ ಸಂಭವಿಸುತ್ತಿದ್ದುವೆಂದು ತಿಳಿದು ಬಂದಿದೆ;

(vi) ದೃಷ್ಟಾಂತ (ಇ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಒಂದು ನ್ಯಾಯಿಕ ಕಾರ್ಯದ ಕ್ರಮಬದ್ಧತೆ ಪ್ರಶ್ನಿತವಾದಾಗ, ಅದನ್ನು ಅಸಾಧಾರಣ ಸನ್ನಿವೇಶಗಳಲ್ಲಿ ಮಾಡಲಾಗಿದೆ;

(vii) ದೃಷ್ಟಾಂತ (ಎಫ್)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಒಂದು ಪತ್ರವು ತಲುಪಿದೆಯೋ ಇಲ್ಲವೋ ಎಂಬುದು ಪ್ರಶ್ನೆ. ಅದನ್ನು ಅಂಚೆಗೆ ಹಾಕಿದೆಯೆಂಬುದನ್ನು ತೋರಿಸಲಾಗಿದೆ. ಆದರೆ, ಗಲಭೆಯಿಂದಾಗಿ ಅಂಚೆಯ ಮಾಮೂಲು ಕ್ರಮಕ್ಕೆ ಅಡ್ಡಿಯುಂಟಾಗಿದೆ;

(viii) ದೃಷ್ಟಾಂತ (ಜಿ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಯಾವುದಕ್ಕಾಗಿ ಆತನ ಮೇಲೆ ದಾವೆ ಹೂಡಲಾಗಿದೆಯೋ ಅಷ್ಟು ಮುಖ್ಯವಲ್ಲದ ಆ ಕರಾರಿಗೆ ಸಂಬಂಧಿಸಿದ ದಸ್ತಾವೇಜನ್ನು, ಅದು ಆತನ ಕುಟುಂಬದ ಭಾವನೆಗಳಿಗೆ ಮತ್ತು ಗೌರವಕ್ಕೆ ಹಾನಿಯುಂಟು ಮಾಡಬಹುದೆಂಬ ಕಾರಣದಿಂದ, ಅದನ್ನು ಹಾಜರುಪಡಿಸಲು ಆ ವ್ಯಕ್ತಿಯು ನಿರಾಕರಿಸುತ್ತಾನೆ;

(ix) ದೃಷ್ಟಾಂತ (ಹೆಚ್)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಉತ್ತರಿಸಲು ಕಾನೂನು ಒತ್ತಾಯಿಸದಿರುವ ಪ್ರಶ್ನೆಯನ್ನು, ಅದಕ್ಕೆ ಕೊಡುವ ಉತ್ತರವು ಅದನ್ನು ಕೇಳಲಾದ ವಿಷಯಕ್ಕೆ ಸಂಬಂಧಪಡದ ವಿಷಯಗಳಲ್ಲಿ ತನಗೆ ನಷ್ಟವನ್ನುಂಟು ಮಾಡಬಹುದೆಂಬ ಕಾರಣದಿಂದ ಉತ್ತರಿಸಲು ಒಬ್ಬ ವ್ಯಕ್ತಿಯು ನಿರಾಕರಿಸುತ್ತಾನೆ;

(x) ದೃಷ್ಟಾಂತ (ಐ)ಗೆ ಸಂಬಂಧಿಸಿದಂತೆ ಹೇಳುವುದಾದರೆ- ಒಂದು ಬಾಂಡ್ ಬಾಧ್ಯಸ್ಥನ ಸ್ವಾಧೀನದಲ್ಲಿದೆ. ಆದರೆ, ಆ ಪ್ರಕರಣದ ಸನ್ನಿವೇಶಗಳು ಅವನು ಅದನ್ನು ಕಳವು ಮಾಡಿರಬಹುದೆಂಬಂತೆ ಇವೆ.

**120. ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಕೆಲವು ಪ್ರಾಸಿಕ್ಯೂಷನ್‌ಗಳಲ್ಲಿ ಸಮ್ಮತಿ ಇಲ್ಲದಿರುವ ಬಗ್ಗೆ ಪೂರ್ವಭಾವನೆ.-** ಭಾರತೀಯ ನ್ಯಾಯ ಸಂಹಿತೆ, 2023ರ 64ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅತ್ಯಾಚಾರಕ್ಕೆ ಸಂಬಂಧಿಸಿದ ಪ್ರಾಸಿಕ್ಯೂಷನ್‌ನಲ್ಲಿ, ಆಪಾದಿತನಿಂದ ಲೈಂಗಿಕ ಸಂಭೋಗವು ನಡೆದಿರುವುದು ರುಜುವಾತಾಗಿರುವಲ್ಲಿ ಮತ್ತು ಅತ್ಯಾಚಾರಕ್ಕೆ ಒಳಗಾಗಿದ್ದಾಳೆಂದು ಹೇಳಲಾದ ಮಹಿಳೆಯ ಸಮ್ಮತಿಯಿಲ್ಲದೆಯೇ ಅದು ನಡೆಯಿತೋ ಹೇಗೆ ಎಂಬ ಪ್ರಶ್ನೆ ಉದ್ಭವಿಸಿದಾಗ ಮತ್ತು ಅವಳು ಸಮ್ಮತಿಸಿರಲಿಲ್ಲವೆಂದು

ನ್ಯಾಯಾಲಯದ ಮುಂದೆ ತನ್ನ ಸಾಕ್ಷ್ಯದಲ್ಲಿ ಹೇಳಿದರೆ, ನ್ಯಾಯಾಲಯವು, ಅವಳು ಸಮ್ಮತಿಸಿರಲಿಲ್ಲವೆಂಬುದಾಗಿ ಪೂರ್ವಭಾವನೆ ಮಾಡತಕ್ಕದ್ದು.

*ವಿವರಣೆ.–* ಈ ಪ್ರಕರಣದಲ್ಲಿ ìಲೈಂಗಿಕ ಸಂಭೋಗî ಎಂದರೆ, ಭಾರತೀಯ ನ್ಯಾಯ ಸಂಹಿತೆ, 2023ರ 63ನೇ ಪ್ರಕರಣದಲ್ಲಿ ನಮೂದಿಸಲಾದ ಯಾವುವೇ ಕೃತ್ಯಗಳು.

## ಅಧ್ಯಾಯ VIII

## ವಿಬಂಧ

**121. ವಿಬಂಧ.-** ಒಬ್ಬ ವ್ಯಕ್ತಿಯು, ತನ್ನ ಘೋಷಣೆ, ಕೃತ್ಯ ಅಥವಾ ಲೋಪದ ಮೂಲಕ ಒಂದು ವಿಷಯವನ್ನು ಮತ್ತೊಬ್ಬ ವ್ಯಕ್ತಿಯು ನಿಜವೆಂಬುದಾಗಿ ನಂಬುವಂತೆ ಮತ್ತು ಆ ನಂಬಿಕೆಯ ಮೇಲೆ ಆತನು ವರ್ತಿಸುವಂತೆ ಉದ್ದೇಶಪೂರ್ವಕವಾಗಿ ಮಾಡಿದರೆ ಅಥವಾ ಅದಕ್ಕೆ ಅನುಮತಿಸಿದರೆ, ತನ್ನ ಮತ್ತು ಅಂಥ ವ್ಯಕ್ತಿಯ ಅಥವಾ ಆತನ ಪ್ರತಿನಿಧಿಯ ನಡುವಣ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಆತನಾಗಲಿ, ಆತನ ಪ್ರತಿನಿಧಿಯಾಗಲಿ ಆ ವಿಷಯದ ಸತ್ಯತೆಯನ್ನು ನಿರಾಕರಿಸಲು ಅನುಮತಿಸತಕ್ಕದ್ದಲ್ಲ.

*ದೃಷ್ಟಾಂತ*

ìಎîಯು ಉದ್ದೇಶಪೂರ್ವಕವಾಗಿ ಮತ್ತು ಸುಳ್ಳು ಹೇಳಿ ಒಂದು ನಿರ್ದಿಷ್ಟ ಭೂಮಿಯು ತನಗೆ ಸೇರಿದ್ದೆಂದು ìಬಿîಯು ನಂಬುವಂತೆ ಮಾಡುತ್ತಾನೆ ಮತ್ತು ಆ ಮೂಲಕ ಅದನ್ನು ಕೊಳ್ಳಲು ಮತ್ತು ಹಣ ಸಂದಾಯ ಮಾಡಲು ìಬಿîಯನ್ನು ಪ್ರೇರೇಪಿಸುತ್ತಾನೆ. ಆ ಭೂಮಿಯು ನಂತರ ìಎîಯ ಸ್ವತ್ತಾಗುತ್ತದೆ ಮತ್ತು ಮಾರಾಟದ ಸಮಯದಲ್ಲಿ ತನಗೆ ಹಕ್ಕಿರಲಿಲ್ಲವೆಂಬ ಕಾರಣದ ಮೇಲೆ ಆ ಮಾರಾಟವನ್ನು ರದ್ದುಗೊಳಿಸಲು ìಎîಯು ಕೋರುತ್ತಾನೆ. ಅವನಿಗೆ ಹಕ್ಕಿರಲಿಲ್ಲವೆಂಬುದನ್ನು ರುಜುವಾತು ಮಾಡಲು ಅವನಿಗೆ ಅವಕಾಶ ಕೊಡತಕ್ಕದ್ದಲ್ಲ.

**122. ಗೇಣಿದಾರರ ಮತ್ತು ಸ್ವಾಧೀನ ಹೊಂದಿರುವ ವ್ಯಕ್ತಿಯ ಲೈಸೆನ್ಸುದಾರನ ವಿಬಂಧ.-** ಗೇಣಿಯು ಮುಂದುವರಿಯುತ್ತಿರುವಾಗ, ಸ್ಥಿರಸ್ವತ್ತಿನ ಯಾರೇ ಗೇಣಿದಾರನಿಗೂ ಅಥವಾ ಅಂಥ ಗೇಣಿದಾರನ ಮೂಲಕ ಕ್ಲೇಮು ಮಾಡುವ ಯಾರೇ ವ್ಯಕ್ತಿಗೂ ಆ ಗೇಣಿಯ ಆರಂಭದಲ್ಲಿ ಅಂಥ ಸ್ಥಿರಸ್ವತ್ತಿನ ಬಗ್ಗೆ ಭೂಮಾಲೀಕನಿಗೆ ಹಕ್ಕಿದ್ದಿತೆಂಬುದನ್ನು ನಿರಾಕರಿಸಲು ಅನುಮತಿ ನೀಡತಕ್ಕದ್ದಲ್ಲ; ಮತ್ತು ಯಾವುದೇ ಅಂಥ ಸ್ಥಿರಸ್ವತ್ತಿನ ಸ್ವಾಧೀನ ಹೊಂದಿರುವ ವ್ಯಕ್ತಿಯ ಲೈಸೆನ್ಸಿನಿಂದ ಆ ಸ್ಥಿರಸ್ವತ್ತನ್ನು ಪಡೆದ ಯಾರೇ ವ್ಯಕ್ತಿಗೂ ಅಂಥ ಲೈಸೆನ್ಸನ್ನು ಕೊಟ್ಟ ಕಾಲದಲ್ಲಿ ಅಂಥ ವ್ಯಕ್ತಿಯು ಅಂಥ ಸ್ವತ್ತಿನ ಸ್ವಾಧೀನಕ್ಕೆ ಹಕ್ಕನ್ನು ಹೊಂದಿದ್ದನೆಂಬುದನ್ನು ನಿರಾಕರಿಸಲು ಅನುಮತಿ ನೀಡತಕ್ಕದ್ದಲ್ಲ.

**123. ವಿನಿಮಯ ಪತ್ರದ ಒಪ್ಪಿಗೆದಾರ, ಸರಕು ರಕ್ಷಕ ಅಥವಾ ಲೈಸೆನ್ಸುದಾರನ ವಿಬಂಧ.-** ವಿನಿಮಯ ಪತ್ರದ ಯಾರೇ ಒಪ್ಪಿಗೆದಾರನಿಗೂ, ಧನಾದೇಶಕಾರನಿಗೆ ಅಂಥ ವಿನಿಮಯ ಪತ್ರವನ್ನು ಬರೆದುಕೊಡಲು ಅಥವಾ ಅದಕ್ಕೆ ಹಿಂಬರಹ ಮಾಡಲು ಅಧಿಕಾರವಿದೆಯೆಂಬುದನ್ನು ನಿರಾಕರಿಸಲು ಅನುಮತಿಸತಕ್ಕದ್ದಲ್ಲ; ಯಾರೇ ಸರಕು ರಕ್ಷಕನಿಗಾಗಲೀ ಅಥವಾ ಲೈಸೆನ್ಸುದಾರನಿಗಾಗಲೀ, ಅವನ ಸರಕೊಪ್ಪಿಸುವವನು ಅಥವಾ ಅವನಿಗೆ ಲೈಸೆನ್ಸು ನೀಡುವವನು ಸರಕೊಪ್ಪಿಸುವಿಕೆಯು ಅಥವಾ ಲೈಸೆನ್ಸು ಆರಂಭವಾದ ಕಾಲದಲ್ಲಿ ಹಾಗೆ ಸರಕೊಪ್ಪಿಸಲು ಅಥವಾ ಅಂಥ ಲೈಸೆನ್ಸನ್ನು ನೀಡಲು ಅಧಿಕಾರ ಹೊಂದಿದ್ದನೆಂಬುದನ್ನು ನಿರಾಕರಿಸಲು ಅನುಮತಿಸತಕ್ಕದ್ದಲ್ಲ.

*ವಿವರಣೆ 1.-* ಯಾರು ವಿನಿಮಯ ಪತ್ರವನ್ನು ಬರೆದುಕೊಟ್ಟಿದ್ದಾರೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯು ಅದನ್ನು ನಿಜವಾಗಿಯೂ ಬರೆದುಕೊಟ್ಟಿದ್ದಾನೆಂಬುದನ್ನು ವಿನಿಮಯ ಪತ್ರವನ್ನು ಸ್ವೀಕರಿಸಿದವನು ನಿರಾಕರಿಸಬಹುದು.

*ವಿವರಣೆ 2.-* ಒಬ್ಬ ಸರಕು ರಕ್ಷಕನು ರಕ್ಷಣೆಗಾಗಿ ಸರಕು ಇಡುವವನಲ್ಲದ ವ್ಯಕ್ತಿಗೆ ಸರಕುಗಳನ್ನು ಕೊಟ್ಟರೆ, ಅವನು ಆ ಸರಕು ಇಡುವವನ ವಿರುದ್ಧವಾಗಿ ಆ ವ್ಯಕ್ತಿಗೆ ಅವುಗಳ ಮೇಲೆ ಹಕ್ಕು ಇತ್ತೆಂಬುದನ್ನು ರುಜುವಾತುಪಡಿಸಬಹುದು.

## ಅಧ್ಯಾಯ IX

## ಸಾಕ್ಷಿದಾರರು

**124. ಯಾರು ಪರಿಸಾಕ್ಷ್ಯವನ್ನು ಕೊಡಬಹುದು.-** ಚಿಕ್ಕ ವಯಸ್ಸಿನಿಂದ, ಅತಿ ವೃದ್ಧಾಪ್ಯದಿಂದ, ದೈಹಿಕ ಅಥವಾ ಮಾನಸಿಕ ಕಾಯಿಲೆಗಳಿಂದ ಅಥವಾ ಅದೇ ತರಹದ ಇತರ ಯಾವುದೇ ಕಾರಣದಿಂದ, ತಮಗೆ ಹಾಕಿದ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳಲು ಅಥವಾ ಆ ಪ್ರಶ್ನೆಗಳಿಗೆ ವಿವೇಚನಾಯುಕ್ತವಾದ ಉತ್ತರಗಳನ್ನು ಕೊಡಲು ಅಸಮರ್ಥರಾಗಿದ್ದಾರೆಂದು ನ್ಯಾಯಾಲಯವು ಪರಿಗಣಿಸಿದ ಹೊರತು, ಎಲ್ಲಾ ವ್ಯಕ್ತಿಗಳು ಪರಿಸಾಕ್ಷ್ಯ ಕೊಡಲು ಸಕ್ಷಮರಾಗಿರತಕ್ಕದ್ದು.

*ವಿವರಣೆ.-* ಒಬ್ಬ ಅಸ್ವಸ್ಥಚಿತ್ತದ ವ್ಯಕ್ತಿಯು ತನಗೆ ಹಾಕಿದ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳಿಗೆ ವಿವೇಚನಾಯುಕ್ತವಾದ ಉತ್ತರಗಳನ್ನು ಕೊಡಲು ತನ್ನ ಅಸ್ವಸ್ಥಚಿತ್ತತೆಯಿಂದಾಗಿ ತಡೆಯುಂಟಾಗಿದ್ದ ಹೊರತು, ಅವನು ಪರಿಸಾಕ್ಷ್ಯವನ್ನು ಕೊಡಲು ಸಕ್ಷಮನಾಗಿರುತ್ತಾನೆ.

**125. ಮೌಖಿಕವಾಗಿ ತಿಳಿಸಲು ಅಸಮರ್ಥನಾದ ಸಾಕ್ಷಿ.-** ಮಾತನಾಡಲು ಶಕ್ತನಲ್ಲದ ಒಬ್ಬ ಸಾಕ್ಷಿದಾರನು ತನ್ನ ಸಾಕ್ಷ್ಯವನ್ನು ಯಾವ ರೀತಿಯಲ್ಲಿ ಬರಹದ ಮೂಲಕ ಅಥವಾ ಸಂಜ್ಞೆಗಳ ಮೂಲಕ ಅರ್ಥವಾಗುವಂಥ ರೀತಿಯಲ್ಲಿ ಕೊಡಬಹುದೋ ಆ ಯಾವುದೇ ರೀತಿಯಲ್ಲಿ ಕೊಡಬಹುದು; ಆದರೆ ಅಂಥ ಬರವಣಿಗೆಯನ್ನು ಮತ್ತು ಸಂಜ್ಞೆಗಳನ್ನು ಬಹಿರಂಗ ನ್ಯಾಯಾಲಯದಲ್ಲಿ ಬರೆಯಬೇಕು ಮತ್ತು ಮಾಡಬೇಕು, ಹಾಗೆ ಕೊಟ್ಟ ಸಾಕ್ಷ್ಯವನ್ನು ಮೌಖಿಕ ಸಾಕ್ಷ್ಯವೆಂದು ಭಾವಿಸತಕ್ಕದ್ದು:

ಪರಂತು, ಸಾಕ್ಷಿದಾರನು ಮಾತುಗಳಲ್ಲಿ ಹೇಳಲು ಸಾಧ್ಯವಾಗದಿದ್ದರೆ ನ್ಯಾಯಾಲಯವು ಹೇಳಿಕೆಯನ್ನು ದಾಖಲಿಸಲು ದುಭಾಷಿಯ ಅಥವಾ ವಿಶೇಷ ತಜ್ಞನ ನೆರವನ್ನು ಪಡೆಯತಕ್ಕದ್ದು ಮತ್ತು ಅಂಥ ಹೇಳಿಕೆಯು ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು.

**126. ನಿರ್ದಿಷ್ಟ ಮೊಕದ್ದಮೆಗಳಲ್ಲಿ ಸಾಕ್ಷಿದಾರರಾಗಿ ಪತಿ ಅಥವಾ ಪತ್ನಿಯ ಸಕ್ಷಮತೆ.-** (1) ಎಲ್ಲಾ ಸಿವಿಲ್ ವ್ಯವಹರಣೆಗಳಲ್ಲಿ, ದಾವೆಯ ಪಕ್ಷಕಾರರು ಮತ್ತು ದಾವೆಯ ಯಾವುದೇ ಪಕ್ಷಕಾರಳ/ನ ಗಂಡ ಅಥವಾ ಹೆಂಡತಿಯು ಸಕ್ಷಮ ಸಾಕ್ಷಿದಾರರಾಗಿರತಕ್ಕದ್ದು.

(2) ಯಾರೇ ವ್ಯಕ್ತಿಯ ವಿರುದ್ಧವಾದ ಆಪರಾಧಿಕ ವ್ಯವಹರಣೆಗಳಲ್ಲಿ ಅಂಥ ವ್ಯಕ್ತಿಯ ಗಂಡ ಅಥವಾ ಹೆಂಡತಿಯು ಅನುಕ್ರಮವಾಗಿ ಸಕ್ಷಮ ಸಾಕ್ಷಿದಾರರಾಗಿರತಕ್ಕದ್ದು.

**127. ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು.-** ಯಾರೇ ನ್ಯಾಯಾಧೀಶನನ್ನು ಅಥವಾ ಮ್ಯಾಜಿಸ್ಟ್ರೇಟನನ್ನು ಯಾವ ನ್ಯಾಯಾಲಯಕ್ಕೆ ಆತನು ಅಧೀನನಾಗಿರುವನೋ ಆ ನ್ಯಾಯಾಲಯದ ವಿಶೇಷ ಆದೇಶದ ಮೇಲೆ ಹೊರತು, ಅಂಥ ನ್ಯಾಯಾಧೀಶನಾಗಿ ಅಥವಾ ಮ್ಯಾಜಿಸ್ಟ್ರೇಟನಾಗಿ ನ್ಯಾಯಾಲಯದಲ್ಲಿ ತನ್ನ ಸ್ವಂತ ನಡತೆಯ ಬಗ್ಗೆ ಅಥವಾ ಅಂಥ ನ್ಯಾಯಾಧೀಶನಾಗಿ ಅಥವಾ ಮ್ಯಾಜಿಸ್ಟ್ರೇಟನಾಗಿ ನ್ಯಾಯಾಲಯದಲ್ಲಿ ತನ್ನ ತಿಳುವಳಿಕೆಗೆ ಬಂದಂಥ ಯಾವುದೇ ವಿಷಯದ ಬಗ್ಗೆ ಯಾವುವೇ ಪ್ರಶ್ನೆಗಳಿಗೆ ಉತ್ತರಿಸಲು ಒತ್ತಾಯ ಮಾಡತಕ್ಕದ್ದಲ್ಲ; ಆದರೆ, ಆತನು ಹಾಗೆ ಕಾರ್ಯನಿರ್ವಹಿಸುತ್ತಿರುವಾಗ ಆತನ ಸಮಕ್ಷಮದಲ್ಲಿ ನಡೆದ ಇತರ ವಿಷಯಗಳ ಬಗ್ಗೆ ಆತನನ್ನು ವಿಚಾರಣೆ ಮಾಡಬಹುದು.

*ದೃಷ್ಟಾಂತಗಳು*

(ಎ) ಸೆಷನ್ಸ್ ನ್ಯಾಯಾಲಯದ ಮುಂದೆ ತನ್ನ ಅಧಿವಿಚಾರಣೆ ನಡೆದಾಗ ಮ್ಯಾಜಿಸ್ಟ್ರೇಟನಾದ ʼಬಿʼಯು ಅನುಚಿತವಾಗಿ ತನ್ನ ಸಾಕ್ಷ್ಯವನ್ನು ತೆಗೆದುಕೊಂಡನೆಂದು ʼಎʼಯು ಹೇಳುತ್ತಾನೆ. ಮೇಲಿನ ನ್ಯಾಯಾಲಯದ ವಿಶೇಷ ಆದೇಶದ ಮೇಲೆ ಹೊರತು ʼಬಿʼಯನ್ನು ಇದಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ಒತ್ತಾಯ ಮಾಡಲಾಗುವುದಿಲ್ಲ.

(ಬಿ) ʼಬಿʼ ಎಂಬ ಮ್ಯಾಜಿಸ್ಟ್ರೇಟ್‌ನ ಮುಂದೆ ʼಎʼಯು ಸುಳ್ಳು ಸಾಕ್ಷ್ಯವನ್ನು ಕೊಟ್ಟನೆಂದು ಸೆಷನ್ಸ್ ನ್ಯಾಯಾಲಯದ ಮುಂದೆ ಆಪಾದಿತನಾಗಿದ್ದಾನೆ. ಮೇಲಿನ ನ್ಯಾಯಾಲಯದ ವಿಶೇಷ ಆದೇಶದ ಮೇಲೆ ಹೊರತು ʼಎʼಯು ಏನು ಹೇಳಿದನೆಂದು ʼಬಿʼಯನ್ನು ಕೇಳಲಾಗುವುದಿಲ್ಲ.

(ಸಿ) ಸೆಷನ್ಸ್ ನ್ಯಾಯಾಧೀಶನಾದ ಟಿಬಿ/ಯ ಮುಂದೆ ತನ್ನ ಅಧಿವಿಚಾರಣೆಯಾಗುತ್ತಿದ್ದಾಗ ಒಬ್ಬ ಪೊಲೀಸು ಅಧಿಕಾರಿಯನ್ನು ಕೊಲೆ ಮಾಡಲು ಯತ್ನಿಸಿದನೆಂದು ಟಿಎ/ಯು ಸೆಷನ್ಸ್ ನ್ಯಾಯಾಲಯದ ಮುಂದೆ ಆಪಾದಿತನಾಗಿದ್ದಾನೆ. ಏನು ನಡೆಯಿತೆಂಬುದರ ಬಗ್ಗೆ ಟಿಬಿ/ಯನ್ನು ವಿಚಾರಣೆ ಮಾಡಬಹುದು.

**128. ವಿವಾಹದ ಸಮಯದಲ್ಲಿ ತಿಳಿಸಿದ ವಿಷಯಗಳು.-** ವಿವಾಹವಾಗಿರುವ ಅಥವಾ ವಿವಾಹವಾಗಿದ್ದ ಯಾವ ವ್ಯಕ್ತಿಯನ್ನೂ, ಆ ವ್ಯಕ್ತಿಯು ಯಾರನ್ನು ವಿವಾಹವಾಗಿರುವನೋ ಅಥವಾ ವಿವಾಹವಾಗಿದ್ದನೋ ಆ ಯಾರೇ ವ್ಯಕ್ತಿಯು, ಆ ವಿವಾಹದ ಸಮಯದಲ್ಲಿ ತನಗೆ ತಿಳಿಸಿದ ಯಾವುದೇ ವಿಷಯವನ್ನು ಬಹಿರಂಗಪಡಿಸಲು ಒತ್ತಾಯಪಡಿಸತಕ್ಕದ್ದಲ್ಲ. ವಿವಾಹಿತ ವ್ಯಕ್ತಿಗಳ ನಡುವಣ ದಾವೆಗಳನ್ನು ಅಥವಾ ವಿವಾಹಿತರಲ್ಲಿ ಒಬ್ಬರು ಮತ್ತೊಬ್ಬರ ಬಗ್ಗೆ ಯಾವುದೇ ಅಪರಾಧ ಮಾಡಿದ್ದಕ್ಕಾಗಿ ಪ್ರಾಸಿಕ್ಯೂಷನ್ ಹೂಡಿದ ವ್ಯವಹರಣೆಗಳನ್ನು ಹೊರತುಪಡಿಸಿ, ವಿಷಯವನ್ನು ತಿಳಿಸಿದ ವ್ಯಕ್ತಿಯು ಅಥವಾ ಆ ವ್ಯಕ್ತಿಯ ಹಿತಾಸಕ್ತಿಯ ಪ್ರತಿನಿಧಿಯು ಸಮ್ಮತಿಸಿದ ಹೊರತು, ಅಂಥ ಯಾವುದೇ ವಿಷಯವನ್ನು ಬಹಿರಂಗಪಡಿಸಲು ಆ ವ್ಯಕ್ತಿಗೆ ಅನುಮತಿ ಕೊಡತಕ್ಕದ್ದಲ್ಲ.

**129. ರಾಜ್ಯದ ವ್ಯವಹಾರಗಳ ಬಗ್ಗೆ ಸಾಕ್ಷ್ಯ.-** ತಾನು ಯೋಗ್ಯವೆಂದು ಭಾವಿಸುವಂತೆ ಅನುಮತಿ ಕೊಡುವ ಅಥವಾ ಕೊಡದಿರುವ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥನಾದ ಅಧಿಕಾರಿಯ ಸಮ್ಮತಿ ಪಡೆದ ಹೊರತು, ರಾಜ್ಯದ ಯಾವುವೇ ವ್ಯವಹಾರಗಳಿಗೆ ಸಂಬಂಧಿಸಿದ ಅಪ್ರಕಟಿತ ಸರ್ಕಾರಿ ದಾಖಲೆಗಳಿಂದ ಪಡೆದುಕೊಂಡ ಯಾವುದೇ ಸಾಕ್ಷ್ಯವನ್ನು ಕೊಡಲು ಯಾರಿಗೂ ಅನುಮತಿ ಕೊಡತಕ್ಕದ್ದಲ್ಲ.

**130. ಪದೀಯ ತಿಳಿವಳಿಕೆಗಳು.-** ಯಾರೇ ಸಾರ್ವಜನಿಕ ಅಧಿಕಾರಿಯು, ಪದನಿಮಿತ್ತವಾಗಿ ರಹಸ್ಯವಾಗಿ ಅವನಿಗೆ ತಿಳಿಸಿದ ವಿಷಯಗಳನ್ನು ಬಹಿರಂಗಪಡಿಸುವುದರಿಂದ ಸಾರ್ವಜನಿಕ ಹಿತಕ್ಕೆ ಬಾಧೆಯುಂಟಾಗುತ್ತದೆಯೆಂದು ಅವನು ಪರಿಗಣಿಸಿದರೆ, ಆ ವಿಷಯಗಳನ್ನು ಬಹಿರಂಗಪಡಿಸಲು ಅವನನ್ನು ಒತ್ತಾಯಪಡಿಸತಕ್ಕದ್ದಲ್ಲ.

**131. ಅಪರಾಧಗಳು ನಡೆದ ಬಗ್ಗೆ ಮಾಹಿತಿ.-** ಯಾವುದೇ ಅಪರಾಧ ನಡೆದ ಬಗ್ಗೆ ಯಾವುದೇ ಮಾಹಿತಿಯನ್ನು ಎಲ್ಲಿಂದ ಪಡೆದನೆಂದು ಹೇಳಲು ಯಾವ ಮ್ಯಾಜಿಸ್ಟ್ರೇಟ್‌ನನ್ನಾಗಲಿ, ಪೊಲೀಸು ಅಧಿಕಾರಿಯನ್ನಾಗಲಿ ಒತ್ತಾಯ ಮಾಡತಕ್ಕದ್ದಲ್ಲ ಮತ್ತು ರಾಜ್ಯಾದಾಯದ ವಿರುದ್ಧ ನಡೆದ ಯಾವುದೇ ಅಪರಾಧದ ಬಗ್ಗೆ ಯಾವುದೇ ಮಾಹಿತಿಯನ್ನು ಎಲ್ಲಿಂದ ಪಡೆದನೆಂದು ಹೇಳಲು ಯಾವ ಕಂದಾಯ ಅಧಿಕಾರಿಯನ್ನೂ ಒತ್ತಾಯ ಮಾಡತಕ್ಕದ್ದಲ್ಲ.

*ವಿವರಣೆ.-* ಈ ಪ್ರಕರಣದಲ್ಲಿ ಟಿಕಂದಾಯ ಅಧಿಕಾರಿ/ ಎಂದರೆ, ರಾಜ್ಯಾದಾಯದ ಯಾವುದೇ ಶಾಖೆಯಲ್ಲಿ ಅಥವಾ ಅದರ ಯಾವುದೇ ವ್ಯವಹಾರದ ಸಂಬಂಧದಲ್ಲಿ ನಿಯೋಜಿತನಾದ ಯಾರೇ ಅಧಿಕಾರಿ.

**132. ವೃತ್ತಿ ಸಂಬಂಧದಲ್ಲಿ ತಿಳಿಸಿದ ವಿಷಯಗಳು.-** (1) ಯಾರೇ ನ್ಯಾಯವಾದಿಗೆ ತನ್ನ ಕಕ್ಷಿದಾರನು ಅಥವಾ ಆ ಕಕ್ಷಿದಾರನ ಪರವಾಗಿ ಅಂಥ ನ್ಯಾಯವಾದಿಯಾಗಿ ನೇಮಿಸಿಕೊಳ್ಳುವ ಕ್ರಮದಲ್ಲಿ ಮತ್ತು ಆ ಉದ್ದೇಶಕ್ಕಾಗಿ ಆತನಿಗೆ ತಿಳಿಸಿದ ಯಾವುದೇ ವಿಷಯವನ್ನು ಅಥವಾ ತನ್ನ ವೃತ್ತಿ ಸೇವೆಯ ಕ್ರಮದಲ್ಲಿ ಮತ್ತು ಉದ್ದೇಶಕ್ಕಾಗಿ ಆತನಿಗೆ ತಿಳಿದುಬಂದ ಯಾವುದೇ ದಸ್ತಾವೇಜಿನ ಒಳಾಂಶಗಳನ್ನು ಅಥವಾ ಸ್ಥಿತಿಗತಿಯನ್ನು ಹೇಳಲು ಅಥವಾ ಅಂಥ ಸೇವೆಯ ಕ್ರಮದಲ್ಲಿ ಮತ್ತು ಉದ್ದೇಶಕ್ಕಾಗಿ ತಾನು ತನ್ನ ಕಕ್ಷಿದಾರನಿಗೆ ನೀಡಿದ ಯಾವುದೇ ಸಲಹೆಯನ್ನು, ತನ್ನ ಕಕ್ಷಿದಾರನ ಸ್ಪಷ್ಟ ಸಮ್ಮತಿಯಿಲ್ಲದೆಯೇ ತಿಳಿಯಪಡಿಸಲು ಯಾವ ಕಾಲದಲ್ಲಿಯೂ ಅವನಿಗೆ ಅನುಮತಿ ಕೊಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ,-

(ಎ) ಯಾವುದೇ ಕಾನೂನುಬಾಹಿರ ಉದ್ದೇಶದ ಮುಂದುವರಿಕೆಯಲ್ಲಿ ತಿಳಿಸಿದಂಥ ಯಾವುದೇ ವಿಷಯವನ್ನು;

(ಬಿ) ಯಾರೇ ನ್ಯಾಯವಾದಿಯು ತನ್ನ ಸೇವೆಯ ಕ್ರಮದಲ್ಲಿ ಗಮನಿಸಿದ, ಆತನ ಸೇವೆಯು ಪ್ರಾರಂಭವಾದಂದಿನಿಂದ ಯಾವುದೇ ಅಪರಾಧ ಅಥವಾ ಮೋಸವನ್ನು ಮಾಡಲಾಗಿದೆಯೆಂದು ತೋರಿಸುವ ಯಾವುದೇ ಸಂಗತಿಯನ್ನು

- ಬಹಿರಂಗಪಡಿಸಲು ಯಾವುದೇ ರಕ್ಷಣೆಯನ್ನು ನೀಡತಕ್ಕದ್ದಲ್ಲ.

(2) ಅಂಥ ಸಂಗತಿಯ ಬಗ್ಗೆ ತನ್ನ ಕಕ್ಷಿದಾರನ ಮೂಲಕ ಅಥವಾ ಅವನ ಪರವಾಗಿ (1)ನೇ ಉಪಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಲಾದಂಥ ನ್ಯಾಯವಾದಿಯ ಗಮನ ಸೆಳೆಯಲಾಗಿತ್ತೇ ಅಥವಾ ಇಲ್ಲವೇ ಎಂಬುದು ಮುಖ್ಯವಲ್ಲ.

*ವಿವರಣೆ.-* ಈ ಪ್ರಕರಣದಲ್ಲಿ ಹೇಳಲಾದ ಬಾಧ್ಯತೆಯು, ವೃತ್ತಿ ಸೇವೆಯು ನಿಂತುಹೋದ ನಂತರವೂ ಮುಂದುವರಿಯುತ್ತದೆ.

*ದೃಷ್ಟಾಂತಗಳು*

(ಎ) “ಎ” ಎಂಬ ನ್ಯಾಯವಾದಿಯು “ಬಿ” ಎಂಬ ನ್ಯಾಯವಾದಿಗೆ “ನಾನು ಸುಳ್ಳು ಸೃಷ್ಟನೆ ಮಾಡಿದ್ದೇನೆ ಮತ್ತು ನೀವು ನನ್ನನ್ನು ರಕ್ಷಿಸಬೇಕೆಂದು ಬಯಸುತ್ತೇನೆ” ಎಂದು ಹೇಳುತ್ತಾನೆ. ಅಪರಾಧಿಯೆಂದು ತಿಳಿದ ಮನುಷ್ಯನ ರಕ್ಷಣೆಯು ಆಪರಾಧಿಕ ಉದ್ದೇಶವಾಗದಿರುವುದರಿಂದ ಹಾಗೆ ತಿಳಿಸಿದ್ದನ್ನು ಬಹಿರಂಗಪಡಿಸುವುದರಿಂದ ರಕ್ಷಣೆ ಇದೆ.

(ಬಿ) ಕಕ್ಷಿದಾರನಾದ “ಎ”ಯು “ಬಿ” ಎಂಬ ನ್ಯಾಯವಾದಿಗೆ “ಸುಳ್ಳು ಸೃಷ್ಟನೆಯ ಲಿಖಿತವನ್ನು ಉಪಯೋಗಿಸಿ ಸ್ವತ್ತಿನ ಸ್ವಾಧೀನವನ್ನು ಪಡೆಯಬಯಸುತ್ತೇನೆ, ಆ ಆಧಾರದ ಮೇಲೆ ದಾವೆ ಹೂಡಬೇಕೆಂದು ಕೋರುತ್ತೇನೆ” ಎಂದು ಹೇಳುತ್ತಾನೆ. ಹಾಗೆ ತಿಳಿಸಿರುವುದು ಆಪರಾಧಿಕ ಉದ್ದೇಶದ ಮುಂದುವರಿಕೆಯಲ್ಲಿ ಮಾಡಲಾಗಿರುವುದರಿಂದ ಇದನ್ನು ಬಹಿರಂಗಪಡಿಸುವುದರಿಂದ ರಕ್ಷಣೆ ಇಲ್ಲ.

(ಸಿ) “ಎ”ಯು ಹಣ ದುರುಪಯೋಗ ಮಾಡಿದ್ದಕ್ಕಾಗಿ ಆರೋಪಕ್ಕೊಳಗಾಗಿದ್ದು “ಬಿ” ಎಂಬ ನ್ಯಾಯವಾದಿಯನ್ನು ತನ್ನ ರಕ್ಷಣೆಗಾಗಿ ನೇಮಿಸಿಕೊಳ್ಳುತ್ತಾನೆ. “ಎ”ಯು ದುರುಪಯೋಗ ಮಾಡಿದ್ದಾನೆಂದು ಹೇಳಿದ ಮೊತ್ತವನ್ನು “ಎ”ನ ಲೆಕ್ಕ ಪುಸ್ತಕದಲ್ಲಿ ಖರ್ಚು ಹಾಕುವ ನಮೂದನೆಯು ಆತನ ವೃತ್ತಿ ಸೇವೆಯ ಪ್ರಾರಂಭದಲ್ಲಿ ಇರಲಿಲ್ಲ. ವ್ಯವಹಾರಣೆಯ ಕಾಲದಲ್ಲಿ ಆ ಪುಸ್ತಕದಲ್ಲಿ ಆ ನಮೂದನ್ನು ಮಾಡಲಾಗಿದೆಯೆಂಬುದನ್ನು “ಬಿ”ಯು ಗಮನಿಸುತ್ತಾನೆ. “ಬಿ”ಯ ಸೇವೆಯ ಕ್ರಮದಲ್ಲಿ, ವ್ಯವಹರಣೆಯ ಪ್ರಾರಂಭದಿಂದ ಈಚೆಗೆ ಮೋಸ ಮಾಡಲಾಗಿದೆಯೆಂದು ತೋರಿಸುವ ಈ ಸಂಗತಿಯನ್ನು “ಬಿ”ಯು ಗಮನಿಸಿರುವುದರಿಂದ ಅದನ್ನು ಬಹಿರಂಗಪಡಿಸುವುದರಿಂದ ರಕ್ಷಣೆ ಇರುವುದಿಲ್ಲ.

(3) ಈ ಪ್ರಕರಣದ ಉಪಬಂಧಗಳು ನ್ಯಾಯವಾದಿಗಳ ದುಭಾಷಿಗಳಿಗೆ ಮತ್ತು ನ್ಯಾಯವಾದಿಗಳ ಗುಮಾಸ್ತರಿಗೆ ಅಥವಾ ಉದ್ಯೋಗಿಗಳಿಗೆ ಅನ್ವಯವಾಗತಕ್ಕದ್ದು.

**133. ಸ್ವಇಚ್ಛೆಯಿಂದ ಸಾಕ್ಷ್ಯ ಕೊಡಲು ಬಂದರೆ ವಿಶೇಷಾಧಿಕಾರವನ್ನು ಮನ್ನಾ ಮಾಡುವಂತಿಲ್ಲ.-** ಯಾವುದೇ ದಾವೆಯ ಪಕ್ಷಕಾರನು ತಾನಾಗಿಯೇ ಅಥವಾ ಅನ್ಯಥಾ ಸಾಕ್ಷ್ಯವನ್ನು ಕೊಟ್ಟರೆ, ಅದನ್ನು 132ನೇ ಪ್ರಕರಣದಲ್ಲಿ ಹೇಳಿದಂತೆ ಬಹಿರಂಗಪಡಿಸುವುದಕ್ಕೆ ಆ ಮೂಲಕ ಸಮ್ಮತಿಸಿರುವುದಾಗಿ ಭಾವಿಸತಕ್ಕದ್ದಲ್ಲ; ಮತ್ತು ದಾವೆಯ ಅಥವಾ ವ್ಯವಹರಣೆಯ ಯಾರೇ ಪಕ್ಷಕಾರನು ಅಂಥ ನ್ಯಾಯವಾದಿಯನ್ನು ಸಾಕ್ಷಿದಾರನನ್ನಾಗಿ ಕರೆದರೆ, ಅಂಥ ಪ್ರಶ್ನೆ ಇರದಿದ್ದರೆ ಯಾವ ವಿಷಯಗಳ ಬಗ್ಗೆ ತಾನು ಬಹಿರಂಗಪಡಿಸಲು ಸ್ವತಂತ್ರನಾಗುವುದಿಲ್ಲವೋ ಆ ವಿಷಯಗಳ ಬಗ್ಗೆ ಅಂಥ ನ್ಯಾಯವಾದಿಗೆ ಅವನು ಪ್ರಶ್ನಿಸಿದ್ದರೆ ಮಾತ್ರ ಅಂಥ ಬಹಿರಂಗಪಡಿಸುವಿಕೆಗೆ ಸಮ್ಮತಿಸಿದ್ದಾನೆಂದು ಭಾವಿಸತಕ್ಕದ್ದು.

**134. ಕಾನೂನು ಸಲಹೆಗಾರರಿಗೆ ರಹಸ್ಯವಾಗಿ ತಿಳಿಸಿದವುಗಳು.-** ಯಾರೇ ವ್ಯಕ್ತಿಯನ್ನು ಅವನು ಸಾಕ್ಷಿದಾರನಾಗಿ ಸಾಕ್ಷ್ಯ ನೀಡಲು ಬಂದಿದ್ದ ಹೊರತು, ಅವನ ಮತ್ತು ಅವನ ಕಾನೂನು ಸಲಹೆಗಾರನ ನಡುವೆ ನಡೆದಂಥ ಯಾವುವೇ ರಹಸ್ಯವಾಗಿ ತಿಳಿಸಿದವುಗಳನ್ನು ನ್ಯಾಯಾಲಯಕ್ಕೆ ಬಹಿರಂಗಪಡಿಸಲು ಒತ್ತಾಯ ಮಾಡತಕ್ಕದ್ದಲ್ಲ; ಹಾಗೆ ತಾನೇ ಸಾಕ್ಷಿ ಕೊಡಲು ಬಂದಿದ್ದಾಗ ಆತನು ಕೊಟ್ಟ ಯಾವುದೇ

ಸಾಕ್ಷ್ಯವನ್ನು ವಿವರಿಸುವ ಸಲುವಾಗಿ ನ್ಯಾಯಾಲಯಕ್ಕೆ ಅವಶ್ಯಕವೆಂದು ಕಂಡುಬರಬಹುದಾದಂಥ ಯಾವುದೇ ವಿಷಯವನ್ನು ಬಹಿರಂಗಪಡಿಸಲು ಆತನನ್ನು ಒತ್ತಾಯ ಮಾಡಬಹುದು, ಬೇರಾವುದರ ಬಗ್ಗೆ ಅಲ್ಲ.

**135. ಪಕ್ಷಕಾರನಲ್ಲದ ಸಾಕ್ಷಿಯ ಹಕ್ಕುಪತ್ರಗಳನ್ನು ಹಾಜರುಪಡಿಸುವುದು.-** ದಾವೆಯ ಪಕ್ಷಕಾರನಲ್ಲದ ಯಾರೇ ಸಾಕ್ಷಿದಾರನನ್ನು, ಯಾವುದೇ ಸ್ವತ್ತಿನ ಸಂಬಂಧದ ತನ್ನ ಹಕ್ಕುಪತ್ರಗಳನ್ನು ಅಥವಾ ಗಿರವಿ ಇಟ್ಟುಕೊಂಡವನಾಗಿ ಅಥವಾ ಅಡಮಾನ ಪಡೆದವನಾಗಿ ತಾನು ಸ್ವತ್ತನ್ನು ಹೊಂದಿರುವ ಸಂಬಂಧದ ಯಾವುದೇ ದಸ್ತಾವೇಜನ್ನು ಅಥವಾ ಆ ಸ್ವತ್ತಿನ ಬಗೆಗಿನ ದಸ್ತಾವೇಜನ್ನು ಹಾಜರುಪಡಿಸುವುದರಿಂದ ಅವನು ಆಪಾದಿತನಾಗಬಹುದಾದಂಥ ಯಾವುದೇ ದಸ್ತಾವೇಜನ್ನು ಯಾವ ವ್ಯಕ್ತಿಯು ಅಂಥ ಹಕ್ಕುಪತ್ರಗಳ ಹಾಜರುಪಡಿಸುವಿಕೆಯನ್ನು ಕೋರುತ್ತಾನೋ ಅಥವಾ ಯಾವ ವ್ಯಕ್ತಿಯ ಮೂಲಕ ಅವನು ಕ್ಲೇಮು ಮಾಡುವನೋ ಅವನೊಂದಿಗೆ ಅವುಗಳನ್ನು ಹಾಜರುಪಡಿಸಲು ಲಿಖಿತದ ಮೂಲಕ ಒಪ್ಪಿಗೆಯನ್ನು ಕೊಟ್ಟಿದ್ದ ಹೊರತು, ಅವುಗಳನ್ನು ಹಾಜರುಪಡಿಸಲು ಒತ್ತಾಯಪಡಿಸತಕ್ಕದ್ದಲ್ಲ.

**136. ಇನ್ನೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿದ್ದು ಅವನು ಹಾಜರುಪಡಿಸಲು ನಿರಾಕರಿಸಬಹುದಾದ ದಸ್ತಾವೇಜುಗಳನ್ನು ಅಥವಾ ವಿದ್ಯುನ್ಮಾನ ದಾಖಲೆಗಳನ್ನು ಹಾಜರುಪಡಿಸುವುದು.-** ಆತನ ಸ್ವಾಧೀನದಲ್ಲಿದ್ದ ದಸ್ತಾವೇಜುಗಳನ್ನು ಅಥವಾ ನಿಯಂತ್ರಣದಲ್ಲಿರುವ ವಿದ್ಯುನ್ಮಾನ ದಾಖಲೆಗಳನ್ನು ಹಾಜರುಪಡಿಸುವಂತೆ ಯಾರೇ ವ್ಯಕ್ತಿಯನ್ನು, ಅವುಗಳು ಇನ್ನೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇದ್ದರೆ ಅವುಗಳನ್ನು ಹಾಜರುಪಡಿಸಲು ನಿರಾಕರಿಸುವ ಹಕ್ಕುಳ್ಳವನಾಗಿರುವಾಗ ಹಿಂದೆ ಹೇಳಿದ ಆ ಇನ್ನೊಬ್ಬ ವ್ಯಕ್ತಿಯು ಅವುಗಳನ್ನು ಹಾಜರುಪಡಿಸಲು ಸಮ್ಮತಿಸಿದ ಹೊರತು, ಅವುಗಳನ್ನು ಹಾಜರುಪಡಿಸುವಂತೆ ಒತ್ತಾಯಪಡಿಸತಕ್ಕದ್ದಲ್ಲ.

**137. ಉತ್ತರಿಸಿದರೆ ತನ್ನನ್ನು ಅಪರಾಧಕ್ಕೆ ಗುರಿ ಮಾಡುತ್ತದೆ ಎಂಬ ಕಾರಣದ ಮೇಲೆ ಉತ್ತರ ಕೊಡುವುದರಿಂದ ಸಾಕ್ಷಿದಾರನಿಗೆ ವಿನಾಯಿತಿ ಇಲ್ಲ.-** ಯಾವುದೇ ದಾವೆಯ ಅಥವಾ ಯಾವುದೇ ಸಿವಿಲ್ ಅಥವಾ ಆಪರಾಧಿಕ ವ್ಯವಹರಣೆಯಲ್ಲಿ ವಿವಾದಿತ ವಿಷಯಕ್ಕೆ ಸುಸಂಬಂಧವಾಗುವ ಯಾವುದೇ ವಿಷಯದ ಬಗೆಗಿನ ಯಾವುದೇ ಪ್ರಶ್ನೆಗೆ ಕೊಡುವ ಉತ್ತರವು ಅಂಥ ಸಾಕ್ಷಿದಾರನನ್ನು ಅಪರಾಧಕ್ಕೆ ಗುರಿಪಡಿಸುತ್ತದೆ ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಪರಾಧಕ್ಕೆ ಗುರಿಪಡಿಸಬಹುದೆಂಬ ಕಾರಣದ ಮೇಲೆ ಅಥವಾ ಅಂಥ ಸಾಕ್ಷಿದಾರನನ್ನು ದಂಡನೆಗೆ ಅಥವಾ ಯಾವುದೇ ವಿಧವಾದ ಮುಟ್ಟುಗೋಲಿಗೆ ಗುರಿಪಡಿಸುತ್ತದೆಂಬ ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಗುರಿಪಡಿಸಬಹುದೆಂಬ ಕಾರಣದ ಮೇಲೆ ಆ ಸಾಕ್ಷಿದಾರನಿಗೆ ಆ ಉತ್ತರ ಕೊಡುವುದರಿಂದ ವಿನಾಯಿತಿ ಇರತಕ್ಕದ್ದಲ್ಲ:

ಪರಂತು, ಸಾಕ್ಷಿದಾರನು ಕೊಡಬೇಕೆಂದು ಒತ್ತಾಯಪಡಿಸತಕ್ಕ ಯಾವುದೇ ಉತ್ತರವು, ಆತನನ್ನು ಯಾವುದೇ ದಸ್ತಗಿರಿಗೆ ಅಥವಾ ಪ್ರಾಸಿಕ್ಯೂಷನ್‌ಗೆ ಗುರಿಪಡಿಸತಕ್ಕದ್ದಲ್ಲ ಅಥವಾ ಯಾವುದೇ ಆಪರಾಧಿಕ ವ್ಯವಹರಣೆಯಲ್ಲಿ ಅಂಥ ಉತ್ತರದ ಮೂಲಕ ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ಪ್ರಾಸಿಕ್ಯೂಷನನ್ನು ಒದಗಿಸುವ ಹೊರತು, ಅದನ್ನು ಅವನ ವಿರುದ್ಧ ರುಜುವಾತುಪಡಿಸತಕ್ಕದ್ದಲ್ಲ.

**138. ಸಹಾಪರಾಧಿ.-** ಒಬ್ಬ ಆಪಾದಿತ ವ್ಯಕ್ತಿಯ ವಿರುದ್ಧ ಸಹಾಪರಾಧಿಯು ಸಕ್ಷಮ ಸಾಕ್ಷಿದಾರನಾಗಿರತಕ್ಕದ್ದು; ಮತ್ತು ಒಂದು ಅಪರಾಧ ನಿರ್ಣಯವು ಸಹಾಪರಾಧಿಯು ಪುಷ್ಟೀಕರಿಸಿದ ಪರಿಸಾಕ್ಷ್ಯವನ್ನು ಆಧರಿಸಿದ್ದರೆ ಕಾನೂನುಬಾಹಿರವಾಗಿರುವುದಿಲ್ಲ.

**139. ಸಾಕ್ಷಿದಾರರ ಸಂಖ್ಯೆ.-** ಯಾವುದೇ ಸಂಗತಿಯ ರುಜುವಾತಿಗಾಗಿ ಯಾವುದೇ ಮೊಕದ್ದಮೆಯಲ್ಲಿ ನಿರ್ದಿಷ್ಟ ಸಂಖ್ಯೆಯ ಸಾಕ್ಷಿದಾರರ ಅಗತ್ಯತೆ ಇರತಕ್ಕದ್ದಲ್ಲ.

## ಅಧ್ಯಾಯ X

## ಸಾಕ್ಷಿದಾರರ ವಿಚಾರಣೆ

**140. ಸಾಕ್ಷಿದಾರರನ್ನು ಹಾಜರುಪಡಿಸುವ ಮತ್ತು ವಿಚಾರಣೆ ಮಾಡುವ ಕ್ರಮ.-** ಸಾಕ್ಷಿದಾರರನ್ನು ಹಾಜರುಪಡಿಸುವ ಮತ್ತು ವಿಚಾರಣೆ ಮಾಡುವ ಕ್ರಮವು ಸಿವಿಲ್ ಮತ್ತು ಆಪರಾಧಿಕ ಪ್ರಕ್ರಿಯೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು ಮತ್ತು ಪದ್ಧತಿಗನುಸಾರವಾಗಿ ಮತ್ತು ಅಂಥ ಯಾವುದೇ ಕಾನೂನು ಇಲ್ಲದಿರುವಾಗ, ನ್ಯಾಯಾಲಯದ ವಿವೇಚನಾನುಸಾರ ವಿನಿಯಮಿತವಾಗತಕ್ಕದ್ದು.

**141. ಸಾಕ್ಷ್ಯದ ಅಂಗೀಕಾರಾರ್ಹತೆಯನ್ನು ನ್ಯಾಯಾಧೀಶನು ತೀರ್ಮಾನಿಸುವುದು.-** (1) ಎರಡೂ ಪಕ್ಷಗಳಲ್ಲಿ ಯಾವುದೇ ಪಕ್ಷವು ಯಾವುದೇ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡಲು ಬಯಸಿದಾಗ, ಸಾಕ್ಷ್ಯವನ್ನು ಕೊಡಬಯಸಿದ ಆ ಪಕ್ಷಕಾರನಿಗೆ, ಆರೋಪಿತ ಸಂಗತಿಯು, ಅದು ರುಜುವಾತಾದರೆ, ಯಾವ ರೀತಿಯಲ್ಲಿ ಸುಸಂಬದ್ಧವಾಗುವುದೆಂದು ನ್ಯಾಯಾಧೀಶನು ಕೇಳಬಹುದು; ಮತ್ತು ಆ ಸಂಗತಿಯು ರುಜುವಾತಾದರೆ, ಸುಸಂಬದ್ಧವಾಗಬಹುದೆಂದು ಭಾವಿಸಿದರೆ ಆ ನ್ಯಾಯಾಧೀಶನು ಸಾಕ್ಷ್ಯವನ್ನು ಅಂಗೀಕರಿಸತಕ್ಕದ್ದು, ಅನ್ಯಥಾ ಅಲ್ಲ.

(2) ರುಜುವಾತು ಮಾಡಬಯಸುವ ಸಂಗತಿಯು, ಬೇರೊಂದು ಸಂಗತಿಯು ರುಜುವಾತಾದ ಬಳಿಕವೇ ಅಂಗೀಕರಿಸಬಹುದಾಗಿದ್ದಂಥ ಸ್ವರೂಪದ್ದಾಗಿದ್ದರೆ, ಮೊದಲು ಹೇಳಿದ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡುವುದಕ್ಕೆ ಮುಂಚೆ, ಅಂಥ ಪಕ್ಷಕಾರನು ಆ ಸಾಕ್ಷ್ಯವನ್ನು ಕೊಡಲು ಭರವಸೆ ಕೊಟ್ಟ ಹೊರತು ಮತ್ತು ಅಂಥ ಭರವಸೆಯಿಂದ ನ್ಯಾಯಾಲಯಕ್ಕೆ ತೃಪ್ತಿಯಾದ ಹೊರತು, ಕೊನೆಗೆ ಹೇಳಿರುವ ಸಂಗತಿಯನ್ನು ರುಜುವಾತು ಮಾಡಲೇಬೇಕು.

(3) ಹೇಳಿದ ಒಂದು ಸಂಗತಿಯ ಸುಸಂಬದ್ಧತೆಯು, ಹೇಳಲಾದ ಮತ್ತೊಂದು ಸಂಗತಿಯು ಮೊದಲು ರುಜುವಾತು ಆಗುವುದನ್ನು ಅವಲಂಬಿಸಿದ್ದರೆ, ನ್ಯಾಯಾಧೀಶನು, ತನ್ನ ವಿವೇಚನಾನುಸಾರ, ಎರಡನೇ ಸಂಗತಿಯು ರುಜುವಾತಾಗುವ ಮೊದಲೇ ಮೊದಲನೆಯ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡಲು ಅವಕಾಶ ಕೊಡಬಹುದು ಅಥವಾ ಮೊದಲನೆಯ ಸಂಗತಿಯ ಬಗ್ಗೆ ಸಾಕ್ಷ್ಯವನ್ನು ಕೊಡುವುದಕ್ಕಿಂತ ಮೊದಲು ಎರಡನೆಯ ಸಂಗತಿಯ ಸಾಕ್ಷ್ಯವನ್ನು ಕೊಡುವಂತೆ ಅಗತ್ಯಪಡಿಸಬಹುದು.

*ದೃಷ್ಟಾಂತಗಳು*

(ಎ) ಮೃತನಾಗಿದ್ದಾನೆಂದು ಹೇಳಲಾಗಿರುವ ವ್ಯಕ್ತಿಯ ಹೇಳಿಕೆಯನ್ನು ಒಂದು ಸುಸಂಬದ್ಧ ಸಂಗತಿಗೆ ಸಂಬಂಧಿಸಿದಂತೆ ರುಜುವಾತು ಮಾಡಲು ಉದ್ದೇಶಿಸಲಾಗಿದೆ; ಅಂಥ ಹೇಳಿಕೆಯು 26ನೇ ಪ್ರಕರಣದ ಮೇರೆಗೆ ಸುಸಂಬದ್ಧವಾಗಿದೆ. ಅಂಥ ಹೇಳಿಕೆಯ ಬಗ್ಗೆ ಸಾಕ್ಷ್ಯವನ್ನು ಕೊಡುವುದಕ್ಕೆ ಮುಂಚೆ ಹೇಳಿಕೆಯನ್ನು ರುಜುವಾತು ಮಾಡಬಯಸುವ ವ್ಯಕ್ತಿಯು, ಆ ವ್ಯಕ್ತಿ ಸತ್ತಿದ್ದಾನೆಂಬ ಸಂಗತಿಯನ್ನು ರುಜುವಾತು ಮಾಡತಕ್ಕದ್ದು.

(ಬಿ) ಕಳೆದುಹೋಗಿದೆಯೆಂದು ಹೇಳಲಾದ ಒಂದು ದಸ್ತಾವೇಜಿನ ಒಳಾಂಶಗಳನ್ನು ಅದರ ಪ್ರತಿಯಿಂದ ರುಜುವಾತು ಮಾಡಲು ಉದ್ದೇಶಿಸಲಾಗಿದೆ. ಪ್ರತಿಯನ್ನು ಹಾಜರುಪಡಿಸಲು ಉದ್ದೇಶಿಸುವ ವ್ಯಕ್ತಿಯು ಮೂಲ ಪ್ರತಿಯು ಕಳೆದುಹೋಗಿದೆ ಎಂಬ ಸಂಗತಿಯನ್ನು ಆ ಪ್ರತಿಯನ್ನು ಹಾಜರುಪಡಿಸುವ ಮುಂಚೆಯೇ ರುಜುವಾತು ಮಾಡಬೇಕು.

(ಸಿ) ಕಳವಾದದ್ದೆಂದು ತಿಳಿದೂ ಕಳವು ಮಾಲನ್ನು ಪಡೆದಿದ್ದಾನೆಂದು ಓ(ಯು ಆಪಾದಿತನಾಗಿದ್ದಾನೆ. ಆತನು ಮಾಲು ತನ್ನ ಸ್ವಾಧೀನದಲ್ಲಿ ಇರುವುದನ್ನು ನಿರಾಕರಿಸುತ್ತಾನೆಂಬುದನ್ನು ರುಜುವಾತು ಮಾಡಲು ಉದ್ದೇಶಿಸಲಾಗಿದೆ. ನಿರಾಕರಣೆಯ ಸುಸಂಬದ್ಧತೆಯು ಆ ಮಾಲನ್ನು ಗುರುತಿಸುವುದರ ಮೇಲೆ ಅವಲಂಬಿತವಾಗಿದೆ, ನ್ಯಾಯಾಲಯವು, ತನ್ನ ವಿವೇಚನಾನುಸಾರ, ಮಾಲಿನ ಸ್ವಾಧೀನತೆಯ ನಿರಾಕರಣೆಯನ್ನು ರುಜುವಾತು ಮಾಡುವ ಮೊದಲೇ ಮಾಲನ್ನು ಗುರುತಿಸಬೇಕೆಂದು ಅಗತ್ಯಪಡಿಸಬಹುದು ಅಥವಾ ಮಾಲನ್ನು ಗುರುತಿಸುವ ಮೊದಲೇ ಮಾಲಿನ ಸ್ವಾಧೀನತೆಯ ನಿರಾಕರಣೆಯ ಬಗ್ಗೆ ರುಜುವಾತು ಮಾಡಲು ಅವಕಾಶ ಕೊಡಬಹುದು.

(ಡಿ) ಒಂದು ವಿವಾದಿತ ಸಂಗತಿಯ ಕಾರಣವೆಂದು ಅಥವಾ ಅದರ ಪರಿಣಾಮವೆಂದು ಹೇಳಲಾದ ‘ಎ’ ಎಂಬ ಸಂಗತಿಯನ್ನು ರುಜುವಾತು ಮಾಡಲು ಉದ್ದೇಶಿಸಲಾಗಿದೆ. ವಿವಾದಿತ ಸಂಗತಿಗೆ ಕಾರಣವೆಂದು ಅಥವಾ ಅದರ ಪರಿಣಾಮವೆಂದು ‘ಎ’ ಎಂಬ ಸಂಗತಿಯನ್ನು ಪರಿಗಣಿಸುವ ಮೊದಲು ಮಧ್ಯದಲ್ಲಿ ಬರುವ ಅನೇಕ ‘ಬಿ’, ‘ಸಿ’ ಮತ್ತು ‘ಡಿ’ ಸಂಗತಿಗಳು ಅಸ್ತಿತ್ವದಲ್ಲಿವೆಯೆಂದು ತೋರಿಸಿಕೊಡಬೇಕು. ‘ಬಿ’, ‘ಸಿ’ ಅಥವಾ ‘ಡಿ’ಗಳು ರುಜುವಾತಾಗುವ ಮೊದಲೇ ಅವುಗಳನ್ನು ರುಜುವಾತು ಮಾಡಲು ನ್ಯಾಯಾಲಯವು ಅವಕಾಶ ಕೊಡಬಹುದು ಅಥವಾ ಅವನ್ನು ‘ಎ’ನ ರುಜುವಾತಿಗೆ ಅವಕಾಶ ಕೊಡುವ ಮುಂಚೆ ‘ಬಿ’, ‘ಸಿ’ ಮತ್ತು ‘ಡಿ’ಯ ರುಜುವಾತನ್ನು ಅಗತ್ಯಪಡಿಸಬಹುದು.

**142. ಸಾಕ್ಷಿದಾರರ ವಿಚಾರಣೆ.-** (1) ಯಾವ ಪಕ್ಷಕಾರನು ಒಬ್ಬ ಸಾಕ್ಷಿದಾರನನ್ನು ಕರೆಸುತ್ತಾನೋ ಆ ಪಕ್ಷಕಾರನು ಮಾಡಿದ ಸಾಕ್ಷಿಯ ವಿಚಾರಣೆಯನ್ನು ಆ ಸಾಕ್ಷಿದಾರನ ಮುಖ್ಯ ವಿಚಾರಣೆಯೆಂದು ಕರೆಯತಕ್ಕದ್ದು.

(2) ಎದುರು ಪಕ್ಷಕಾರನು ಮಾಡಿದ ಒಬ್ಬ ಸಾಕ್ಷಿದಾರನ ವಿಚಾರಣೆಯನ್ನು ಆ ಸಾಕ್ಷಿದಾರನ ಪಾಟೀ-ಸವಾಲು ಎಂದು ಕರೆಯತಕ್ಕದ್ದು.

(3) ಪಾಟೀ-ಸವಾಲು ಆದ ತರುವಾಯ, ಯಾವ ಪಕ್ಷಕಾರನು ಸಾಕ್ಷಿದಾರನನ್ನು ಕರೆಸಿದನೋ ಆ ಪಕ್ಷಕಾರನು ಮಾಡಿದ ವಿಚಾರಣೆಯನ್ನು ಆ ಸಾಕ್ಷಿದಾರನ ಮರುವಿಚಾರಣೆ ಎಂದು ಕರೆಯತಕ್ಕದ್ದು.

**143. ವಿಚಾರಣೆಗಳ ಕ್ರಮ.-** (1) ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಮೊದಲು ಮಾಡತಕ್ಕದ್ದು, ನಂತರ (ಎದುರು ಪಕ್ಷವು ಹಾಗೆ ಅಪೇಕ್ಷಿಸಿದರೆ) ಪಾಟೀ-ಸವಾಲು ಮಾಡತಕ್ಕದ್ದು; ಅನಂತರ (ಅವನನ್ನು ಕರೆಸಿದ ಪಕ್ಷಕಾರನು ಹಾಗೆ ಅಪೇಕ್ಷಿಸಿದರೆ) ಮರುವಿಚಾರಣೆ ಮಾಡತಕ್ಕದ್ದು.

(2) ವಿಚಾರಣೆ ಮತ್ತು ಪಾಟೀ-ಸವಾಲು ಸುಸಂಬದ್ಧ ಸಂಗತಿಗಳಿಗೆ ಸಂಬಂಧಪಟ್ಟಿರತಕ್ಕದ್ದು. ಆದರೆ, ಸಾಕ್ಷಿದಾರನು ತನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಸಂಗತಿಗಳ ಬಗ್ಗೆ ಅವನು ಪರಿಸಾಕ್ಷ್ಯವನ್ನು ಕೊಟ್ಟಿದ್ದಾನೋ ಆ ಸಂಗತಿಗಳಿಗೆ ಪಾಟೀ-ಸವಾಲು ಸೀಮಿತವಾಗಿರಬೇಕಾಗಿಲ್ಲ.

(3) ಮರುವಿಚಾರಣೆಯ ಗುರಿಯು, ಪಾಟೀ-ಸವಾಲಿನಲ್ಲಿ ಹೇಳಲಾದ ವಿಷಯಗಳ ವಿವರಣೆಯನ್ನು ಕುರಿತಾಗಿರತಕ್ಕದ್ದು; ಮತ್ತು ನ್ಯಾಯಾಲಯದ ಅನುಮತಿಯ ಮೇರೆಗೆ ಮರುವಿಚಾರಣೆಯಲ್ಲಿ ಒಂದು ಹೊಸ ವಿಷಯವನ್ನು ಪ್ರಸ್ತಾಪಿಸಿದರೆ, ಎದುರು ಪಕ್ಷಕಾರನು ಆ ವಿಷಯದ ಬಗ್ಗೆ ಮತ್ತಷ್ಟು ಪಾಟೀ-ಸವಾಲು ಮಾಡಬಹುದು.

**144. ಒಂದು ದಸ್ತಾವೇಜನ್ನು ಹಾಜರುಪಡಿಸಲು ಕರೆಸಿದ ವ್ಯಕ್ತಿಯ ಪಾಟೀ-ಸವಾಲು.-** ಒಂದು ದಸ್ತಾವೇಜನ್ನು ಹಾಜರುಪಡಿಸಲು ಕರೆಸಿದ ವ್ಯಕ್ತಿಯು, ಅದನ್ನು ಅವನು ಹಾಜರುಪಡಿಸುವ ಕಾರಣ ಮಾತ್ರದಿಂದ ಸಾಕ್ಷಿದಾರನಾಗುವುದಿಲ್ಲ ಮತ್ತು ಅವನನ್ನು ಒಬ್ಬ ಸಾಕ್ಷಿದಾರನನ್ನಾಗಿ ಕರೆಸಿದ ಹೊರತು ಅಥವಾ ಕರೆಸುವವರೆಗೆ ಅವನನ್ನು ಪಾಟೀ-ಸವಾಲು ಮಾಡಲಾಗುವುದಿಲ್ಲ.

**145. ಚಾರಿತ್ರ್ಯದ ಬಗ್ಗೆ ಸಾಕ್ಷ್ಯ ಕೊಡುವ ಸಾಕ್ಷಿದಾರರು.-** ಚಾರಿತ್ರ್ಯದ ಬಗ್ಗೆ ಸಾಕ್ಷ್ಯ ಕೊಡುವ ಸಾಕ್ಷಿದಾರರನ್ನು ಪಾಟೀ-ಸವಾಲು ಮತ್ತು ಮರುವಿಚಾರಣೆ ಮಾಡಬಹುದು.

**146. ಉತ್ತರ ಹೊರಗೆಡಹುವ ಪ್ರಶ್ನೆಗಳು.-** (1) ಪ್ರಶ್ನೆಯನ್ನು ಹಾಕುವ ವ್ಯಕ್ತಿಯು ತಾನು ಪಡೆಯಲು ಬಯಸುವ ಅಥವಾ ನಿರೀಕ್ಷಿಸುವ ಉತ್ತರವನ್ನು ಸೂಚಿಸುವ ಯಾವುದೇ ಪ್ರಶ್ನೆಯನ್ನು ಉತ್ತರ ಹೊರಗೆಡಹುವ ಪ್ರಶ್ನೆಯೆಂದು ಕರೆಯಲಾಗುತ್ತದೆ.

(2) ಎದುರು ಪಕ್ಷಕಾರನು ಆಕ್ಷೇಪಿಸಿದರೆ ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ಮರುವಿಚಾರಣೆಯಲ್ಲಾಗಲೀ, ನ್ಯಾಯಾಲಯವು ಅನುಮತಿ ಕೊಟ್ಟ ಹೊರತು, ಉತ್ತರ ಹೊರಗೆಡಹುವ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ.

(3) ಪೀಠಿಕಾರೂಪದ ಅಥವಾ ನಿರ್ವಿವಾದಿತವಾದ ಅಥವಾ ನ್ಯಾಯಾಲಯವು ಈಗಾಗಲೇ ಸಾಕಷ್ಟು ರುಜುವಾತಾಗಿದೆಯೆಂದು ಅಭಿಪ್ರಾಯಪಡುವ ವಿಷಯಗಳ ಬಗ್ಗೆ ಉತ್ತರ ಹೊರಗೆಡಹುವ ಪ್ರಶ್ನೆಗಳಿಗೆ ಅನುಮತಿಸತಕ್ಕದ್ದು.

(4) ಪಾಟೀ-ಸವಾಲಿನಲ್ಲಿ ಉತ್ತರ ಹೊರಗೆಡಹುವ ಪ್ರಶ್ನೆಗಳನ್ನು ಕೇಳಬಹುದು.

**147. ಲಿಖಿತದಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯ.-** ಯಾರೇ ಸಾಕ್ಷಿದಾರನನ್ನು, ವಿಚಾರಣೆಯು ನಡೆಯುತ್ತಿರುವಾಗ, ಆತನು ಯಾವುದರ ಬಗ್ಗೆ ಸಾಕ್ಷ್ಯವನ್ನು ಕೊಡುತ್ತಿದ್ದಾನೋ ಆ ಯಾವುದೇ ಕರಾರು, ಅನುದಾನ ಅಥವಾ ಸ್ವತ್ತಿನ ಇತರ ರೀತಿಯ ವಿಲೇವಾರಿಯು ದಸ್ತಾವೇಜಿನಲ್ಲಿ ಒಳಗೊಂಡಿರಲಿಲ್ಲವೇ ಎಂಬುದಾಗಿ ಕೇಳಬಹುದು ಮತ್ತು ಆತನು ಅದು ಇತ್ತೆಂದು ಹೇಳಿದರೆ ಅಥವಾ ಹಾಜರುಪಡಿಸಬೇಕೆಂದು ನ್ಯಾಯಾಲಯವು ಅಭಿಪ್ರಾಯಪಡುವ ಯಾವುವೇ ದಸ್ತಾವೇಜಿನ ಒಳಾಂಶಗಳ ಬಗ್ಗೆ ಆತನು ಯಾವುದೇ ಹೇಳಿಕೆಯನ್ನು ಮಾಡುವವನಾಗಿದ್ದರೆ, ಅಂಥ ದಸ್ತಾವೇಜನ್ನು ಹಾಜರುಪಡಿಸಿದ ಹೊರತು ಅಥವಾ ಅದರ ಬಗ್ಗೆ ಎರಡನೆಯ ಸಾಕ್ಷ್ಯವನ್ನು ಕೊಡಲು ಸಾಕ್ಷಿದಾರರನ್ನು ಕರೆಸಿದ ಪಕ್ಷಕಾರನನ್ನೂ ಹಕ್ಕುಳ್ಳವನನ್ನಾಗಿಸುವ ಸಂಗತಿಗಳನ್ನು ರುಜುವಾತು ಮಾಡುವವರೆಗೆ, ಅಂಥ ಸಾಕ್ಷ್ಯ ಕೊಡುವುದನ್ನು ಎದುರು ಪಕ್ಷಕಾರನು ಆಕ್ಷೇಪಿಸಬಹುದು.

*ವಿವರಣೆ.-* ದಸ್ತಾವೇಜುಗಳ ಒಳಾಂಶಗಳ ಬಗ್ಗೆ ಇತರ ವ್ಯಕ್ತಿಗಳು ಮಾಡಿದ ಹೇಳಿಕೆಗಳ ಕುರಿತು ಅಂಥ ಹೇಳಿಕೆಗಳೇ ಸ್ವಯಂ ಸುಸಂಬದ್ಧ ಸಂಗತಿಗಳಾಗಿದ್ದರೆ ಒಬ್ಬ ಸಾಕ್ಷಿದಾರನು ಮೌಖಿಕ ಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

"ಎ"ಯು "ಬಿ"ಯ ಮೇಲೆ ಹಲ್ಲೆ ಮಾಡಿದನೇ ಎಂಬುದು ಪ್ರಶ್ನೆ. "ನನ್ನ ಮೇಲೆ ಕಳ್ಳತನದ ಆಪಾದನೆ ಮಾಡಿ "ಬಿ"ಯು ಒಂದು ಪತ್ರ ಬರೆದಿದ್ದಾನೆ ಮತ್ತು ನಾನು ಅವನ ಮೇಲೆ ಸೇಡು ತೀರಿಸಿಕೊಳ್ಳುತ್ತೇನೆ" ಎಂದು "ಎ"ಯು "ಡಿ"ಗೆ ಹೇಳಿದ್ದನ್ನು ಕೇಳಿದ್ದೇನೆಂದು "ಸಿ"ಯು ಸಾಕ್ಷ್ಯ ಕೊಡುತ್ತಾನೆ. ಈ ಹೇಳಿಕೆಯು "ಎ"ಯ ಹಲ್ಲೆಯ ಉದ್ದೇಶವನ್ನು ತೋರಿಸುವುದರಿಂದಾಗಿ ಸುಸಂಬದ್ಧವಾಗಿದೆ ಮತ್ತು ಆ ಪತ್ರದ ಬಗ್ಗೆ ಬೇರೆ ಯಾವ ಸಾಕ್ಷ್ಯವನ್ನು ಕೊಡದಿದ್ದರೂ, ಇದರ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

**148. ಲಿಖಿತದಲ್ಲಿರುವ ಹಿಂದಿನ ಹೇಳಿಕೆಗಳ ಬಗ್ಗೆ ಪಾಟೀ-ಸವಾಲು.-** ಒಬ್ಬ ಸಾಕ್ಷಿದಾರನನ್ನು, ಲಿಖಿತದಲ್ಲಿರುವ ಅಥವಾ ಲಿಖಿತ ರೂಪಕ್ಕೆ ತಂದ ಮತ್ತು ಪ್ರಶ್ನಿತ ವಿಷಯಗಳಿಗೆ ಸುಸಂಬದ್ಧವಾದ ಹಿಂದಿನ ಹೇಳಿಕೆಗಳ ಬಗ್ಗೆ, ಅಂಥ ಲಿಖಿತವನ್ನು ಅವನಿಗೆ ತೋರಿಸದೆಯೇ ಅಥವಾ ರುಜುವಾತುಪಡಿಸಲ್ಪಡದೆಯೇ ಪಾಟೀ-ಸವಾಲು ಮಾಡಬಹುದು; ಆದರೆ ಆ ಲಿಖಿತದಿಂದ ಆತನ ಹೇಳಿಕೆಯನ್ನು ವಿರೋಧಿಸುವುದು ಅದರ ಉದ್ದೇಶವಾಗಿದ್ದರೆ, ಆ ಲಿಖಿತವನ್ನು ರುಜುವಾತುಪಡಿಸುವ ಮೊದಲು ಅವನನ್ನು ವಿರೋಧಿಸುವ ಉದ್ದೇಶಕ್ಕಾಗಿ ಬಳಸಲಾದ ಅದರ ಭಾಗಗಳ ಬಗ್ಗೆ ಅವನ ಗಮನ ಸೆಳೆಯತಕ್ಕದ್ದು.

**149. ಪಾಟೀ-ಸವಾಲಿನಲ್ಲಿ ಕಾನೂನುಬದ್ಧವಾದ ಪ್ರಶ್ನೆಗಳು.-** ಸಾಕ್ಷಿದಾರರನ್ನು ಪಾಟೀ-ಸವಾಲು ಮಾಡಿದಾಗ, ಈ ಹಿಂದೆ ಉಲ್ಲೇಖಿಸಿರುವ ಪ್ರಶ್ನೆಗಳ ಜೊತೆಗೆ,-

(ಎ) ಆತನ ಸತ್ಯಸಂಧತೆಯನ್ನು ಪರೀಕ್ಷಿಸುವ; ಅಥವಾ

(ಬಿ) ಆತನು ಯಾರು ಮತ್ತು ಜೀವನದಲ್ಲಿ ಆತನ ಸ್ಥಾನವೇನು ಎಂಬುದನ್ನು ಕಂಡುಹಿಡಿಯುವ; ಅಥವಾ

(ಸಿ) ಅವನ ಚಾರಿತ್ರ್ಯಕ್ಕೆ ಹಾನಿ ಉಂಟುಮಾಡುವ ಮೂಲಕ ಅವನ ವಿಶ್ವಾಸಾರ್ಹತೆಗೆ ಧಕ್ಕೆಯುಂಟು ಮಾಡುವ ಪ್ರಶ್ನೆಗಳಿಗೆ ಆತನು ಕೊಡುವ ಉತ್ತರವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವನನ್ನು ಅಪರಾಧಕ್ಕೆ ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವನನ್ನು ದಂಡನೆಗೆ ಅಥವಾ ಮುಟ್ಟುಗೋಲಿಗೆ ಗುರಿ ಮಾಡುವಂಥವುಗಳಾಗಿದ್ದರೂ

- ಅಂಥ ಯಾವುದೇ ಪ್ರಶ್ನೆಗಳನ್ನು ಅವನಿಗೆ ಕೇಳಬಹುದು:

ಪರಂತು, ಭಾರತೀಯ ನ್ಯಾಯ ಸಂಹಿತೆ, 2023ರ 64ನೇ ಪ್ರಕರಣ, 65ನೇ ಪ್ರಕರಣ, 66ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣ, 69ನೇ ಪ್ರಕರಣ, 70ನೇ ಪ್ರಕರಣ ಅಥವಾ 71ನೇ ಪ್ರಕರಣದ ಮೇರೆಗೆ ಅಪರಾಧಕ್ಕಾಗಿ ಅಥವಾ ಯಾವುದೇ ಅಪರಾಧ ಮಾಡಲು ಪ್ರಯತ್ನಿಸಿದುದಕ್ಕಾಗಿ ಪ್ರಾಸಿಕ್ಯೂಷನ್ ನಡೆಸುವಾಗ ಸಮ್ಮತಿಯ ಪ್ರಶ್ನೆ ಬಗ್ಗೆ ವಾದ ವಿಷಯವಿದ್ದಾಗ, ಸಾಕ್ಷ್ಯವನ್ನು ಒದಗಿಸಲು ಅಥವಾ ಸಂತ್ರಸ್ತ ವ್ಯಕ್ತಿಯ ಪಾಟೀ-ಸವಾಲಿನಲ್ಲಿ ಅವರ ಸಾಮಾನ್ಯ ಅನೈತಿಕ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಅಥವಾ ಮುಂಚಿನ ಅಂಥ ಯಾರೇ ವ್ಯಕ್ತಿಯೊಂದಿಗೆ ಅಂಥ ಸಂತ್ರಸ್ತ ವ್ಯಕ್ತಿಯ ಲೈಂಗಿಕ ಅನುಭವದ ಬಗ್ಗೆ ಅಂಥ ಸಮ್ಮತಿಯ ಅಥವಾ ಸಮ್ಮತಿಯ ಸ್ವರೂಪವನ್ನು ರುಜುವಾತು ಮಾಡಲು ಪ್ರಶ್ನೆಗಳನ್ನು ಕೇಳಲು ಅನುಮತಿಸತಕ್ಕದ್ದಲ್ಲ.

**150. ಉತ್ತರ ಕೊಡಲು ಯಾವಾಗ ಸಾಕ್ಷಿದಾರರನ್ನು ಒತ್ತಾಯ ಮಾಡಬಹುದು.-** ದಾವೆಗೆ ಅಥವಾ ವ್ಯವಹರಣೆಗೆ ಸುಸಂಬದ್ಧವಾದ ವಿಷಯಕ್ಕೆ ಅಂಥ ಯಾವುದೇ ಪ್ರಶ್ನೆಯು ಸಂಬಂಧಿಸಿರುವಾಗ, 137ನೇ ಪ್ರಕರಣದ ಉಪಬಂಧಗಳು ಅದಕ್ಕೆ ಅನ್ವಯವಾಗತಕ್ಕದ್ದು.

**151. ಪ್ರಶ್ನೆಗಳನ್ನು ಯಾವಾಗ ಕೇಳತಕ್ಕದ್ದು ಮತ್ತು ಉತ್ತರಿಸಲು ಸಾಕ್ಷಿದಾರನನ್ನು ಯಾವಾಗ ಒತ್ತಾಯಿಸಬೇಕೆಂಬುದನ್ನು ನ್ಯಾಯಾಲಯವು ತೀರ್ಮಾನ ಮಾಡುವುದು.-** (1) ಸಾಕ್ಷಿದಾರನ ಚಾರಿತ್ರ್ಯಕ್ಕೆ ಹಾನಿ ಉಂಟುಮಾಡುವ ಮೂಲಕ ಅವನ ವಿಶ್ವಾಸಾರ್ಹತೆಗೆ ಧಕ್ಕೆಯುಂಟುಮಾಡುವಷ್ಟರ ಮಟ್ಟಿಗೆ ಹೊರತು, ದಾವೆಗೆ ಅಥವಾ ವ್ಯವಹರಣೆಗೆ ಸುಸಂಬದ್ಧವಲ್ಲದ ವಿಷಯಕ್ಕೆ ಯಾವುದೇ ಅಂಥ ಪ್ರಶ್ನೆಯು ಸಂಬಂಧಿಸಿರುವಾಗ, ಅದಕ್ಕೆ ಉತ್ತರಿಸಲು ಸಾಕ್ಷಿದಾರನನ್ನು ಒತ್ತಾಯಿಸತಕ್ಕದ್ದೇ ಅಥವಾ ಅಲ್ಲವೇ ಎಂಬುದನ್ನು ನ್ಯಾಯಾಲಯವು ತೀರ್ಮಾನಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸಿದರೆ ಅದಕ್ಕೆ ಉತ್ತರಿಸಲು ಬದ್ಧನಲ್ಲವೆಂದು ಸಾಕ್ಷಿದಾರನಿಗೆ ಎಚ್ಚರಿಕೆ ನೀಡಬಹುದು.

(2) ನ್ಯಾಯಾಲಯವು ತನ್ನ ವಿವೇಚನೆಯನ್ನು ಉಪಯೋಗಿಸುವಾಗ ಈ ಕೆಳಕಂಡ ವಿಚಾರಗಳನ್ನು ಗಮನಿಸತಕ್ಕದ್ದು, ಎಂದರೆ:-

(ಎ) ಯಾವ ಸ್ವರೂಪದ ಪ್ರಶ್ನೆಗಳು ಅವು ತಿಳಿಯಪಡಿಸಿದ ಆರೋಪದ ಸತ್ಯತೆಯನ್ನು, ಯಾವ ವಿಷಯಕ್ಕೆ ಸಂಬಂಧಿಸಿದಂತೆ ಅವನು ಪರಿಸಾಕ್ಷ್ಯವನ್ನು ನೀಡುತ್ತಾನೋ ಆ ವಿಷಯದ ಬಗ್ಗೆ ಸಾಕ್ಷಿದಾರನ ವಿಶ್ವಾಸಾರ್ಹತೆಯ ಬಗ್ಗೆ ನ್ಯಾಯಾಲಯದ ಅಭಿಪ್ರಾಯಕ್ಕೆ ಗಂಭೀರವಾಗಿ ಬಾಧಕವನ್ನುಂಟು ಮಾಡುತ್ತವೆಯೋ ಆ ಸ್ವರೂಪದ ಪ್ರಶ್ನೆಗಳು ಅವು ಆಗಿದ್ದರೆ, ಅಂಥ ಪ್ರಶ್ನೆಗಳು ಯುಕ್ತವಾಗಿರುತ್ತವೆ;

(ಬಿ) ಯಾವ ಪ್ರಶ್ನೆಗಳು, ಅವು ತಿಳಿಯಪಡಿಸಿದ ಆರೋಪಣೆಯ ಸತ್ಯತೆಯು, ಸಾಕ್ಷಿದಾರನು ಪರಿಸಾಕ್ಷ್ಯವನ್ನು ಕೊಡುವ ವಿಷಯದಲ್ಲಿ ಅವನ ವಿಶ್ವಾಸಾರ್ಹತೆಯ ಬಗ್ಗೆ ನ್ಯಾಯಾಲಯದ ಅಭಿಪ್ರಾಯದ ಮೇಲೆ ಬಾಧಕವುಂಟು ಮಾಡದ ಅಥವಾ ಅಲ್ಪ ಪ್ರಮಾಣದಲ್ಲಿ ಬಾಧಕವುಂಟು ಮಾಡುವ, ಬಹಳ ಹಿಂದಿನ ಕಾಲದ ವಿಷಯಗಳಿಗೆ ಸಂಬಂಧಿಸಿರುತ್ತದೆಯೋ ಅಥವಾ ಅಂಥ ಸ್ವರೂಪದ್ದಾಗಿರುತ್ತದೆಯೋ ಅಂಥ ಪ್ರಶ್ನೆಗಳು ಯುಕ್ತ ಪ್ರಶ್ನೆಗಳಾಗಿರುವುದಿಲ್ಲ;

(ಸಿ) ಸಾಕ್ಷಿದಾರನ ಚಾರಿತ್ರ್ಯದ ವಿರುದ್ಧ ಮಾಡಿದ ಆರೋಪಣೆಯ ಮಹತ್ವ ಮತ್ತು ಅವನ ಸಾಕ್ಷ್ಯದ ಮಹತ್ವದ ನಡುವೆ ಬಹಳ ಅಂತರವಿದ್ದರೆ ಅಂಥ ಪ್ರಶ್ನೆಗಳು ಯುಕ್ತ ಪ್ರಶ್ನೆಗಳಾಗಿರುವುದಿಲ್ಲ;

(ಡಿ) ಸಾಕ್ಷಿದಾರನು ಉತ್ತರಿಸಲು ನಿರಾಕರಿಸಿದಾಗ, ನ್ಯಾಯಾಲಯಕ್ಕೆ ಸೂಕ್ತವೆಂದು ಕಂಡುಬಂದರೆ, ಅವನು ಉತ್ತರವನ್ನು ಕೊಟ್ಟಿದ್ದರೆ, ಅದು ಅನಾನುಕೂಲವಾಗುವುದೆಂದು ನ್ಯಾಯಾಲಯವು ಊಹಿಸಬಹುದು.

**152. ಯುಕ್ತವಾದ ಆಧಾರಗಳಿಲ್ಲದೇ ಪ್ರಶ್ನೆಯನ್ನು ಕೇಳಬಾರದು.-** ಪ್ರಶ್ನೆಯನ್ನು ಕೇಳುವ ವ್ಯಕ್ತಿಯು ಅದು ಯಾವ ಆರೋಪಣೆಯನ್ನು ತಿಳಿಯಪಡಿಸಿದೆಯೋ ಅದು ಸಾಧಾರವಾಗಿದೆಯೆಂದು ಭಾವಿಸಲು ಯುಕ್ತವಾದ ಆಧಾರಗಳನ್ನು ಹೊಂದಿದ್ದ ಹೊರತು, 151ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಕೇಳಬೇಕಾದ ಯಾವುದೇ ಅಂಥ ಪ್ರಶ್ನೆಯನ್ನು ಕೇಳಬಾರದು.

*ದೃಷ್ಟಾಂತಗಳು*

(ಎ) ಒಬ್ಬ ಮುಖ್ಯ ಸಾಕ್ಷಿದಾರನು ಡಕಾಯಿತನೆಂಬುದನ್ನು, ಒಬ್ಬ ನ್ಯಾಯವಾದಿಯು ಮತ್ತೊಬ್ಬ ನ್ಯಾಯವಾದಿಗೆ ತಿಳಿಸುತ್ತಾನೆ. ಆ ಸಾಕ್ಷಿದಾರನು ಡಕಾಯಿತನೇ ಹೌದೋ ಅಲ್ಲವೋ ಎಂದು ಕೇಳುವುದಕ್ಕೆ ಇದು ಒಂದು ಯುಕ್ತವಾದ ಆಧಾರವಾಗಿದೆ.

(ಬಿ) ಒಬ್ಬ ಮುಖ್ಯ ಸಾಕ್ಷಿದಾರನು ಡಕಾಯಿತನೆಂದು ಒಬ್ಬ ವ್ಯಕ್ತಿಯು ನ್ಯಾಯಾಲಯದಲ್ಲಿ ನ್ಯಾಯವಾದಿಗೆ ತಿಳಿಸುತ್ತಾನೆ. ನ್ಯಾಯವಾದಿಯು ಮಾಹಿತಿದಾರನನ್ನು ಪ್ರಶ್ನಿಸಿದಾಗ ಅವನು ಹೇಳಿಕೆಗೆ ತೃಪ್ತಿಕರವಾದ ಕಾರಣಗಳನ್ನು ಕೊಡುತ್ತಾನೆ. ಆ ಸಾಕ್ಷಿದಾರನು ಡಕಾಯಿತನೇ ಹೌದೋ ಅಲ್ಲವೋ ಎಂದು ಕೇಳುವುದಕ್ಕೆ ಇದು ಯುಕ್ತವಾದ ಆಧಾರವಾಗುತ್ತದೆ.

(ಸಿ) ಯಾರ ಬಗ್ಗೆ ಏನೂ ಗೊತ್ತಿಲ್ಲವೋ ಆ ಸಾಕ್ಷಿದಾರನನ್ನು, ಆತನು ಒಬ್ಬ ಡಕಾಯಿತನೇ ಹೌದೋ ಅಲ್ಲವೋ ಎಂಬ ಬಗ್ಗೆ ಗೊತ್ತು ಗುರಿಯಿಲ್ಲದೆ ಕೇಳಲಾಗುತ್ತದೆ. ಇಲ್ಲಿ ಆ ಪ್ರಶ್ನೆಗೆ ಯಾವ ಯುಕ್ತ ಆಧಾರಗಳೂ ಇಲ್ಲ.

(ಡಿ) ಯಾರ ಬಗ್ಗೆ ಏನೂ ಗೊತ್ತಿಲ್ಲವೋ ಆ ಸಾಕ್ಷಿದಾರನನ್ನು, ಅವನು ಬದುಕುವ ರೀತಿ ಮತ್ತು ಅವನ ಜೀವನೋಪಾಯದ ಬಗ್ಗೆ ಪ್ರಶ್ನಿಸಿದಾಗ, ತೃಪ್ತಿಕರವಲ್ಲದ ಉತ್ತರಗಳನ್ನು ಕೊಡುತ್ತಾನೆ. ಅವನು ಡಕಾಯಿತನೇ ಎಂದು ಕೇಳುವುದಕ್ಕೆ ಇದು ಒಂದು ಯುಕ್ತವಾದ ಆಧಾರವಾಗಬಹುದು.

**153. ಯುಕ್ತ ಆಧಾರಗಳಿಲ್ಲದೆ ಪ್ರಶ್ನೆ ಕೇಳಿದ ಸಂದರ್ಭದಲ್ಲಿ ನ್ಯಾಯಾಲಯದ ಪ್ರಕ್ರಿಯೆ.-** ಅಂಥ ಯಾವುದೇ ಪ್ರಶ್ನೆಯನ್ನು ಯುಕ್ತ ಆಧಾರಗಳಿಲ್ಲದೇ ಕೇಳಲಾಗಿದೆಯೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದನ್ನು ಯಾರೇ ನ್ಯಾಯವಾದಿಯು ಕೇಳಿದ್ದರೆ, ಆ ಮೊಕದ್ದಮೆಯ ಸಂದರ್ಭಗಳನ್ನು ಅಂಥ ನ್ಯಾಯವಾದಿಯು ತನ್ನ ವೃತ್ತಿಯ ನಿರ್ವಹಣೆಯಲ್ಲಿ ಯಾವ ಉಚ್ಚ ನ್ಯಾಯಾಲಯಕ್ಕೆ ಅಥವಾ ಪ್ರಾಧಿಕಾರಕ್ಕೆ ಒಳಪಟ್ಟಿರುವನೋ ಆ ನ್ಯಾಯಾಲಯಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ವರದಿ ಮಾಡಬಹುದು.

**154. ಅಸಭ್ಯ ಮತ್ತು ನಿಂದಾತ್ಮಕ ಪ್ರಶ್ನೆಗಳು.-** ಅಸಭ್ಯ ಅಥವಾ ನಿಂದಾತ್ಮಕವೆಂದು ನ್ಯಾಯಾಲಯವು ಪರಿಗಣಿಸುವ ಯಾವುವೇ ಪ್ರಶ್ನೆಗಳನ್ನು ಅಥವಾ ವಿಚಾರಣೆಗಳನ್ನು, ಅಂಥ ಪ್ರಶ್ನೆಗಳು ಅಥವಾ ವಿಚಾರಣೆಗಳು ನ್ಯಾಯಾಲಯದ ಮುಂದಿರುವ ಪ್ರಶ್ನೆಗಳಿಗೆ ಕೆಲಮಟ್ಟಿಗೆ ಸಂಬಂಧಪಟ್ಟಿದ್ದರೂ, ಅವು ವಿವಾದಿತ ಸಂಗತಿಗಳಿಗೆ ಅಥವಾ ವಿವಾದಿತ ಸಂಗತಿಗಳು ಅಸ್ತಿತ್ವದಲ್ಲಿವೆಯೋ ಇಲ್ಲವೋ ಎಂದು ನಿರ್ಧರಿಸುವುದಕ್ಕಾಗಿ ತಿಳಿದುಕೊಳ್ಳುವುದು ಅವಶ್ಯಕವಾಗಿರುವ ವಿಷಯಗಳಿಗೆ ಸಂಬಂಧಪಟ್ಟಿದ್ದ ಹೊರತು ನಿಷೇಧಿಸಬಹುದು.

**155. ಅವಮಾನಿಸಲು ಅಥವಾ ಪೀಡಿಸಲು ಉದ್ದೇಶಿತವಾದ ಪ್ರಶ್ನೆಗಳು.-** ಅವಮಾನಿಸುವ ಅಥವಾ ಪೀಡಿಸುವ ಉದ್ದೇಶದ ಯಾವುದೇ ಪ್ರಶ್ನೆಯನ್ನು ಅದು ಯುಕ್ತವಾಗಿದ್ದರೂ ಅನಾವಶ್ಯಕವಾಗಿ ಮನನೋಯಿಸುವ ಸ್ವರೂಪದ್ದೆಂದು ನ್ಯಾಯಾಲಯಕ್ಕೆ ಕಂಡುಬಂದರೆ ಅದನ್ನು ನಿಷೇಧಿಸತಕ್ಕದ್ದು.

**156. ಸತ್ಯಸಂಧತೆಯನ್ನು ಪರೀಕ್ಷಿಸುವ ಪ್ರಶ್ನೆಗಳಿಗೆ ಬಂದ ಉತ್ತರವನ್ನು ವಿರೋಧಿಸುವುದಕ್ಕಾಗಿ ಸಾಕ್ಷ್ಯವನ್ನು ಹೊರತುಪಡಿಸುವುದು.-** ಅವನ ಚಾರಿತ್ರ್ಯಕ್ಕೆ ಹಾನಿಯುಂಟುಮಾಡುವ ಮೂಲಕ ತನ್ನ ವಿಶ್ವಾಸಾರ್ಹತೆಗೆ ಧಕ್ಕೆಯುಂಟುಮಾಡುವಷ್ಟರಮಟ್ಟಿಗೆ ಮಾತ್ರವೇ ವಿಚಾರಣೆಗೆ ಸುಸಂಬದ್ಧವಾದ ಯಾವುದೇ ಪ್ರಶ್ನೆಯನ್ನು ಒಬ್ಬ ಸಾಕ್ಷಿದಾರನಿಗೆ ಕೇಳಿದಾಗ ಮತ್ತು ಆತನು ಉತ್ತರ ಕೊಟ್ಟಾಗ ಆತನನ್ನು ವಿರೋಧಿಸಲು ಯಾವುದೇ ಸಾಕ್ಷ್ಯವನ್ನು ಕೊಡತಕ್ಕದ್ದಲ್ಲ; ಆದರೆ, ಆತನು ಸುಳ್ಳು ಉತ್ತರ ಕೊಟ್ಟರೆ, ಆತನು ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ಆತನ ಮೇಲೆ ನಂತರ ಆರೋಪ ಹೊರಿಸಬಹುದು.

*ಅಪವಾದ 1.-* ಒಬ್ಬ ಸಾಕ್ಷಿದಾರನನ್ನು ಅವನು ಈ ಮೊದಲು ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದನೇ ಎಂದು ಕೇಳಿದಾಗ ಮತ್ತು ಅದನ್ನು ಆತನು ನಿರಾಕರಿಸಿದಾಗ, ಅವನು ಈ ಮೊದಲು ಅಪರಾಧಿಯೆಂದು ನಿರ್ಣೀತನಾಗಿದ್ದ ಬಗ್ಗೆ ಸಾಕ್ಷ್ಯವನ್ನು ಕೊಡಬಹುದು.

*ಅಪವಾದ 2.*- ಒಬ್ಬ ಸಾಕ್ಷಿದಾರನನ್ನು ಆತನ ನಿಷ್ಪಕ್ಷಪಾತತೆಯ ಬಗ್ಗೆ ಸಂದೇಹಕ್ಕೆಡೆಗೊಡುವ ಯಾವುದೇ ಪ್ರಶ್ನೆಯನ್ನು ಕೇಳಿದಾಗ ಮತ್ತು ಆ ಬಗ್ಗೆ ಸೂಚಿಸಿದ ಸಂಗತಿಗಳನ್ನು ನಿರಾಕರಿಸಿ ಆತನು ಉತ್ತರ ಕೊಟ್ಟಾಗ ಆತನನ್ನು ಖಂಡಿಸಬಹುದು.

*ದೃಷ್ಟಾಂತಗಳು*

(ಎ) ಮೋಸದ ಕಾರಣದ ಮೇಲೆ ವಿಮಾಪತ್ರಕಾರನ ವಿರುದ್ಧ ಮಾಡಿದ ಕ್ಲೇಮನ್ನು ವಿರೋಧಿಸಲಾಗಿದೆ. ಹಿಂದಿನ ವ್ಯವಹಾರದಲ್ಲಿ, ಮೋಸದ ಕ್ಲೇಮನ್ನು ಮಾಡಿರಲಿಲ್ಲವೇ ಎಂದು ಕ್ಲೇಮದಾರನನ್ನು ಕೇಳಿದಾಗ ಅವನು ಅದನ್ನು ನಿರಾಕರಿಸುತ್ತಾನೆ. ಆತನು ಅಂಥ ಕ್ಲೇಮನ್ನು ಮಾಡಿದ್ದನೆಂದು ತೋರಿಸಲು ಸಾಕ್ಷ್ಯ ಕೊಡುವುದಾಗಿ ಹೇಳಲಾಗುತ್ತದೆ. ಆ ಸಾಕ್ಷ್ಯವು ಅಂಗೀಕಾರಾರ್ಹವಲ್ಲ.

(ಬಿ) ಒಬ್ಬ ಸಾಕ್ಷಿದಾರನನ್ನು ಆತನ ಅಪ್ರಾಮಾಣಿಕತೆಯ ಕಾರಣದಿಂದಾಗಿ ನೌಕರಿಯಿಂದ ವಜಾ ಮಾಡಿರಲಿಲ್ಲವೇ ಎಂದು ಕೇಳಲಾಗಿದೆ. ಅವನು ಅದನ್ನು ನಿರಾಕರಿಸುತ್ತಾನೆ. ಆತನ ಅಪ್ರಾಮಾಣಿಕತೆಗಾಗಿ ಆತನನ್ನು ವಜಾ ಮಾಡಲಾಯಿತೆಂಬುದಕ್ಕೆ ಸಾಕ್ಷ್ಯ ಕೊಡುವುದಾಗಿ ಹೇಳಲಾಗುತ್ತದೆ. ಆ ಸಾಕ್ಷ್ಯವು ಅಂಗೀಕಾರಾರ್ಹವಲ್ಲ.

(ಸಿ) ಒಂದು ನಿರ್ದಿಷ್ಟ ದಿವಸ 'ಬಿ'ಯನ್ನು ಗೋವಾದಲ್ಲಿ ನೋಡಿದ್ದೇನೆಂದು 'ಎ'ಯು ದೃಢವಾಗಿ ಹೇಳುತ್ತಾನೆ. ಆ ದಿನ ವಾರಾಣಸಿಯಲ್ಲಿ ನೀನೇ ಇರಲಿಲ್ಲವೇ ಎಂದು 'ಎ'ನನ್ನು ಕೇಳಲಾಗುತ್ತದೆ. ಅವನು ಅದನ್ನು ನಿರಾಕರಿಸುತ್ತಾನೆ. ಆ ದಿನ ವಾರಾಣಸಿಯಲ್ಲಿ 'ಎ'ಯು ಇದ್ದನೆಂಬುದನ್ನು ತೋರಿಸಲು ಸಾಕ್ಷ್ಯ ಕೊಡುವುದಾಗಿ ಹೇಳಲಾಗುತ್ತದೆ. ಪ್ರಶ್ನಿತ ದಿನದಂದು ಗೋವಾದಲ್ಲಿ 'ಬಿ'ಯನ್ನು ನೋಡಲಾಗಿದೆಯೆಂದು ಹೇಳಲಾದ ಸಂಗತಿಯನ್ನು ವಿರೋಧಿಸುವುದರಿಂದ ಆ ಸಾಕ್ಷ್ಯವು ಅಂಗೀಕಾರಾರ್ಹವಾಗಿದೆ; ಆದರೆ 'ಎ'ಯ ವಿಶ್ವಾಸಾರ್ಹತೆಗೆ ಧಕ್ಕೆ ತರುವ ಸಂಗತಿಯ ಬಗ್ಗೆ ಅವನನ್ನು ವಿರೋಧಿಸುವುದರಿಂದಾಗಿ ಅಲ್ಲ. ಈ ಪ್ರತಿಯೊಂದು ಸಂದರ್ಭದಲ್ಲೂ ಸಾಕ್ಷಿದಾರನ ನಿರಾಕರಣೆಯು ಸುಳ್ಳಾಗಿದ್ದಲ್ಲಿ, ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ಆತನ ಮೇಲೆ ಆರೋಪ ಹೊರಿಸಬಹುದು.

(ಡಿ) 'ಬಿ'ಯ ವಿರುದ್ಧ 'ಎ'ಯು ಸಾಕ್ಷ್ಯ ಕೊಡುತ್ತಾನೆ, ಆ 'ಬಿ'ಯ ಕುಟುಂಬಕ್ಕೂ ಮತ್ತು 'ಎ'ನ ಕುಟುಂಬಕ್ಕೂ ಕುಲವೈರವಿತ್ತೇ ಎಂದು ಕೇಳಲಾಗುತ್ತದೆ. ಅವನು ಅದನ್ನು ನಿರಾಕರಿಸುತ್ತಾನೆ. ಅದು ಆತನ ನಿಷ್ಪಕ್ಷಪಾತತೆಯ ಬಗ್ಗೆ ಸಂದೇಹಕ್ಕೆಡೆಗೊಡುವಂಥ ಪ್ರಶ್ನೆ ಎಂಬ ಕಾರಣದಿಂದ ಆತನನ್ನು ವಿರೋಧಿಸಬಹುದು.

**157. ಪಕ್ಷಕಾರನು ತನ್ನ ಸಾಕ್ಷಿದಾರನನ್ನೇ ಪ್ರಶ್ನಿಸುವುದು.-** (1) ಸಾಕ್ಷಿದಾರನನ್ನು ಕರೆಸುವ ಯಾರೇ ವ್ಯಕ್ತಿಗೆ, ಎದುರು ಪಕ್ಷಕಾರನು ಪಾಟೀ-ಸವಾಲಿನಲ್ಲಿ ಅವನಿಗೆ ಕೇಳಬಹುದಾದ ಯಾವುವೇ ಪ್ರಶ್ನೆಗಳನ್ನು ಆ ಸಾಕ್ಷಿದಾರನಿಗೆ ಕೇಳಲು ನ್ಯಾಯಾಲಯವು ತನ್ನ ವಿವೇಚನಾನುಸಾರ ಅವಕಾಶ ಕೊಡಬಹುದು.

(2) ಈ ಪ್ರಕರಣದಲ್ಲಿರುವುದು ಯಾವುದೂ, ಅಂಥ ಸಾಕ್ಷಿಯ ಸಾಕ್ಷ್ಯದ ಯಾವುದೇ ಭಾಗವನ್ನು ಅವಲಂಬಿಸುವುದಕ್ಕೆ, (1)ನೇ ಉಪಪ್ರಕರಣದ ಮೇರೆಗೆ ಅನುಮತಿಸಲಾದ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದಲ್ಲ.

**158. ಸಾಕ್ಷಿದಾರನ ವಿಶ್ವಾಸಾರ್ಹತೆಯನ್ನು ಖಂಡಿಸುವುದು.-** ಎದುರು ಪಕ್ಷಕಾರನು ಅಥವಾ ಆತನನ್ನು ಸಾಕ್ಷಿದಾರನನ್ನಾಗಿ ಕರೆಯುವ ಪಕ್ಷಕಾರನು ನ್ಯಾಯಾಲಯದ ಸಮ್ಮತಿ ಪಡೆದು, ಒಬ್ಬ ಸಾಕ್ಷಿದಾರನ ವಿಶ್ವಾಸಾರ್ಹತೆಯನ್ನು ಈ ಕೆಳಕಂಡ ರೀತಿಯಲ್ಲಿ ಖಂಡಿಸಬಹುದು,-

(ಎ) ಸಾಕ್ಷಿದಾರನ ಬಗ್ಗೆ ತಮಗೆ ಗೊತ್ತಿರುವುದರಿಂದ ಅವನು ವಿಶ್ವಾಸಾರ್ಹನಲ್ಲವೆಂದು ತಾವು ನಂಬುವುದಾಗಿ ಸಾಕ್ಷ್ಯ ಕೊಡುವ ವ್ಯಕ್ತಿಗಳ ಪರಿಸಾಕ್ಷ್ಯದ ಮೂಲಕ;

(ಬಿ) ಸಾಕ್ಷಿದಾರನಿಗೆ ಆತನ ಸಾಕ್ಷ್ಯವನ್ನು ಕೊಡಲು ಲಂಚ ಕೊಡಲಾಗಿದೆಯೆಂದು ಅಥವಾ ಲಂಚದ ಪ್ರಸ್ತಾಪ ಒಪ್ಪಿಕೊಂಡಿದ್ದಾನೆಂಬುದನ್ನು ಅಥವಾ ಬೇರಾವುದೋ ಭ್ರಷ್ಟ ಪ್ರೇರಣೆಗೆ ಒಳಗಾಗಿದ್ದಾನೆಂಬುದನ್ನು ರುಜುವಾತುಪಡಿಸುವ ಮೂಲಕ;

(ಸಿ) ವಿರೋಧಿಸಬಹುದಾದ ಆತನ ಸಾಕ್ಷ್ಯದ ಯಾವುದೇ ಭಾಗಕ್ಕೆ ಅಸಂಗತವಾಗಿರುವ ಹಿಂದಿನ ಹೇಳಿಕೆಗಳನ್ನು ರುಜುವಾತುಪಡಿಸುವ ಮೂಲಕ.

*ವಿವರಣೆ.-* ಒಬ್ಬ ಸಾಕ್ಷಿದಾರನ ಮುಖ್ಯ ವಿಚಾರಣೆಯಲ್ಲಿ ಇನ್ನೊಬ್ಬ ಸಾಕ್ಷಿದಾರನು ವಿಶ್ವಾಸಾರ್ಹನಲ್ಲವೆಂದು ಘೋಷಿಸಿದರೆ ಆತನು ತನ್ನ ನಂಬಿಕೆಗೆ ಕಾರಣಗಳನ್ನು ಕೊಡದಿರಬಹುದು; ಆದರೆ, ಆತನಿಗಿರುವ ಕಾರಣಗಳನ್ನು ಕುರಿತು ಪಾಟೀ-ಸವಾಲಿನಲ್ಲಿ ಕೇಳಬಹುದು; ಮತ್ತು ಆತನು ಕೊಟ್ಟ ಉತ್ತರಗಳನ್ನು ವಿರೋಧಿಸಲಾಗುವುದಿಲ್ಲ; ಆದರೆ ಅವು ಸುಳ್ಳಾಗಿದ್ದರೆ, ಸುಳ್ಳು ಸಾಕ್ಷ್ಯ ಕೊಟ್ಟಿದ್ದಕ್ಕಾಗಿ ಆತನ ಮೇಲೆ ಅನಂತರ ಆರೋಪ ಹೊರಿಸಬಹುದು.

*ದೃಷ್ಟಾಂತಗಳು*

(ಎ) 'ಬಿ'ಗೆ ಸರಕುಗಳನ್ನು ಮಾರಿ ಅವುಗಳನ್ನು ಅವನ ವಶಕ್ಕೆ ಕೊಟ್ಟ ಸರಕುಗಳ ಬೆಲೆಗಾಗಿ 'ಎ'ಯು 'ಬಿ'ಯ ಮೇಲೆ ದಾವೆ ಹೂಡುತ್ತಾನೆ. 'ಸಿ'ಯು ತಾನು ಸರಕುಗಳನ್ನು 'ಬಿ'ಯ ವಶಕ್ಕೆ ಕೊಟ್ಟೆನೆಂದು ಹೇಳುತ್ತಾನೆ. ಹಿಂದಿನ ಒಂದು ಸಂದರ್ಭದಲ್ಲಿ, ಅವನು 'ಬಿ'ಯ ವಶಕ್ಕೆ ತಾನು ಸರಕುಗಳನ್ನು ಕೊಟ್ಟಿರಲಿಲ್ಲವೆಂದು ಹೇಳಿದ್ದುದನ್ನು ತೋರಿಸಿಕೊಡಲು ಸಾಕ್ಷ್ಯವನ್ನು ಕೊಡುವುದಾಗಿ ಹೇಳಲಾಗಿದೆ. ಈ ಸಾಕ್ಷ್ಯವು ಅಂಗೀಕಾರಾರ್ಹವಾಗಿದೆ.

(ಬಿ) 'ಬಿ'ಯನ್ನು ಕೊಲೆ ಮಾಡಿದ್ದಕ್ಕಾಗಿ 'ಎ'ಯು ಆಪಾದಿತನಾಗಿದ್ದಾನೆ. ತನಗೆ ಸಾಯುವ ಹಾಗೆ 'ಎ'ಯು ಗಾಯ ಮಾಡಿದನು ಎಂದು 'ಬಿ'ಯು ಸಾಯುವಾಗ ಹೇಳಿದನೆಂದು 'ಸಿ'ಯು ಹೇಳುತ್ತಾನೆ. ಹಿಂದಿನ ಒಂದು ಸಂದರ್ಭದಲ್ಲಿ 'ಎ'ನಿಂದ ಅಥವಾ ಅವನ ಸಮಕ್ಷಮದಲ್ಲಿ ಗಾಯವಾಗಲಿಲ್ಲವೆಂದು 'ಸಿ'ಯು ಹೇಳಿದ್ದನ್ನು ತೋರಿಸಿಕೊಡಲು ಸಾಕ್ಷ್ಯ ಕೊಡುವುದಾಗಿ ಹೇಳಲಾಗಿದೆ. ಈ ಸಾಕ್ಷ್ಯವು ಅಂಗೀಕಾರಾರ್ಹವಾಗಿದೆ.

**159. ಸುಸಂಬದ್ಧ ಸಂಗತಿಯ ಸಾಕ್ಷ್ಯವನ್ನು ಪುಷ್ಟೀಕರಿಸುವಂಥ ಪ್ರಶ್ನೆಗಳು ಅಂಗೀಕಾರಾರ್ಹವಾಗಿರುತ್ತವೆ.-** ಯಾವ ಸಾಕ್ಷಿದಾರನನ್ನು ಪುಷ್ಟೀಕರಿಸಲು ಉದ್ದೇಶಿಸಲಾಗಿದೆಯೋ ಆ ಸಾಕ್ಷಿದಾರನು ಯಾವುದೇ ಸುಸಂಬದ್ಧ ಸಂಗತಿಯ ಬಗ್ಗೆ ಸಾಕ್ಷ್ಯ ಕೊಟ್ಟರೆ, ಅಂಥ ಸುಸಂಬದ್ಧ ಸಂಗತಿಯು ನಡೆದ ಕಾಲದಲ್ಲಿ ಅಥವಾ ಅದರ ಹತ್ತಿರದ ಕಾಲದಲ್ಲಿ ಅಥವಾ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ತಾನು ಗಮನಿಸಿದ ಬೇರಾವುದೇ ಸನ್ನಿವೇಶಗಳ ಬಗ್ಗೆ, ಅವು ರುಜುವಾತಾದರೆ, ಸಾಕ್ಷಿದಾರನು ತನ್ನ ಪರಿಸಾಕ್ಷ್ಯದಲ್ಲಿ ಹೇಳುವ ಸುಸಂಬದ್ಧ ಸಂಗತಿಯ ಬಗೆಗಿನ ಪರಿಸಾಕ್ಷ್ಯವನ್ನು ಪುಷ್ಟೀಕರಿಸುವುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಆತನನ್ನು ಪ್ರಶ್ನಿಸಬಹುದು.

*ದೃಷ್ಟಾಂತ*

ಸಹಾಪರಾಧಿಯಾದ 'ಎ'ಯು ತಾನು ಭಾಗವಹಿಸಿದ ಒಂದು ಸುಲಿಗೆಯ ಬಗ್ಗೆ ವಿವರಣೆ ಕೊಡುತ್ತಾನೆ. ಸುಲಿಗೆಯು ನಡೆದ ಸ್ಥಳಕ್ಕೆ ಹೋಗುವಾಗ ಮತ್ತು ಅಲ್ಲಿಂದ ಬರುವಾಗ ಸಂಭವಿಸಿದ ಆ ಸುಲಿಗೆಗೆ ಸಂಬಂಧವಿಲ್ಲದ ಅನೇಕ ಪ್ರಸಂಗಗಳನ್ನು ವಿವರಿಸುತ್ತಾನೆ. ಸುಲಿಗೆ ಬಗೆಗಿನ ಅವನ ಸಾಕ್ಷ್ಯವನ್ನು ಪುಷ್ಟೀಕರಿಸುವ ಸಲುವಾಗಿ ಈ ಸಂಗತಿಗಳ ಬಗ್ಗೆ ಪ್ರತ್ಯೇಕವಾದ ಸಾಕ್ಷ್ಯವನ್ನೂ ಕೊಡಬಹುದು.

**160. ಅದೇ ಸಂಗತಿಯ ಬಗೆಗಿನ ಇತ್ತೀಚಿನ ಪರಿಸಾಕ್ಷ್ಯವನ್ನು ಪುಷ್ಟೀಕರಿಸಲು ಸಾಕ್ಷಿದಾರನ ಮೊದಲಿನ ಹೇಳಿಕೆಗಳನ್ನು ರುಜುವಾತುಪಡಿಸಬಹುದು.-** ಸಾಕ್ಷಿದಾರನ ಪರಿಸಾಕ್ಷ್ಯವನ್ನು ಪುಷ್ಟೀಕರಿಸುವ ಸಲುವಾಗಿ ಅದೇ ಸಂಗತಿಗೆ ಸಂಬಂಧಿಸಿದಂತೆ, ಆ ಸಂಗತಿಯು ನಡೆದ ಕಾಲದಲ್ಲಿ ಅಥವಾ ಆ ಸುಮಾರಿನಲ್ಲಿ ಅಂಥ ಸಾಕ್ಷಿದಾರನು ಕೊಟ್ಟ ಅಥವಾ ಆ ಸಂಗತಿಯನ್ನು ತನಿಖೆ ಮಾಡಲು ಕಾನೂನುಸಮ್ಮತವಾಗಿ ಸಕ್ಷಮನಾದ ಯಾರೇ ಪ್ರಾಧಿಕಾರಿಯ ಮುಂದೆ ಕೊಟ್ಟ ಯಾವುದೇ ಮೊದಲಿನ ಹೇಳಿಕೆಯನ್ನು ರುಜುವಾತುಪಡಿಸಬಹುದು.

**161. 26ನೇ ಅಥವಾ 27ನೇ ಪ್ರಕರಣದ ಮೇರೆಗೆ ಸುಸಂಬದ್ಧವಾದ ರುಜುವಾತಾದ ಹೇಳಿಕೆಗಳ ಸಂಬಂಧದಲ್ಲಿ ಯಾವ ವಿಷಯಗಳನ್ನು ರುಜುವಾತುಪಡಿಸಬಹುದು.-** 26ನೇ ಅಥವಾ 27ನೇ ಪ್ರಕರಣದ ಮೇರೆಗೆ ಸುಸಂಬದ್ಧವಾದ ಯಾವುದೇ ಹೇಳಿಕೆಯನ್ನು

ರುಜುವಾತುಪಡಿಸಿದಾಗ, ಅದನ್ನು ವಿರೋಧಿಸಲು ಅಥವಾ ಪುಷ್ಟೀಕರಿಸಲು ಅಥವಾ ಅದನ್ನು ಕೊಟ್ಟ ವ್ಯಕ್ತಿಯ ವಿಶ್ವಾಸಾರ್ಹತೆಯನ್ನು ಖಂಡಿಸಲು ಅಥವಾ ಅದನ್ನು ದೃಢೀಕರಿಸಲು, ಆ ವ್ಯಕ್ತಿಯನ್ನು ಒಬ್ಬ ಸಾಕ್ಷಿದಾರನನ್ನಾಗಿ ಕರೆದಿದ್ದರೆ ಮತ್ತು ಸೂಚಿತವಾದ ವಿಷಯದ ಸತ್ಯತೆಯನ್ನು ಪಾಟೀ-ಸವಾಲಿನಲ್ಲಿ ನಿರಾಕರಿಸಿದ್ದರೆ, ರುಜುವಾತುಪಡಿಸಬಹುದಾಗಿದ್ದ ಎಲ್ಲ ವಿಷಯಗಳನ್ನು ರುಜುವಾತುಪಡಿಸಬಹುದು.

**162. ಪುನಃ ನೆನಪು ಮಾಡಿಕೊಳ್ಳುವುದು.-** (1) ಒಬ್ಬ ಸಾಕ್ಷಿದಾರನು ವಿಚಾರಣೆಯ ಕಾಲದಲ್ಲಿ ತನ್ನನ್ನು ಪ್ರಶ್ನಿಸಲಾದ ವ್ಯವಹಾರಕ್ಕೆ ಸಂಬಂಧಪಟ್ಟ ಹಾಗೆ ಆ ವ್ಯವಹಾರದ ಕಾಲದಲ್ಲಿ ಅಥವಾ ಅದಾದ ನಂತರದ ಯಾವ ಕಾಲದಲ್ಲಿ ಆ ವ್ಯವಹಾರವು ಅವನ ನೆನಪಿನಲ್ಲಿ ಉಳಿದಿರುವ ಸಂಭವವಿದೆಯೆಂದು ನ್ಯಾಯಾಲಯವು ಪರಿಗಣಿಸುತ್ತದೆಯೋ ಆ ಕಾಲದಲ್ಲಿ ಮಾಡಿದ ಯಾವುದೇ ಬರಹವನ್ನು ಪರಿಶೀಲಿಸುವ ಮೂಲಕ ಪುನಃ ನೆನಪು ಮಾಡಿಕೊಳ್ಳಬಹುದು:

ಪರಂತು, ಯಾರೇ ಇತರ ವ್ಯಕ್ತಿಯು ಬರೆದ ಮತ್ತು ಯಾವುದೇ ಇತರ ಮೇಲ್ಕಂಡ ಸಮಯದಲ್ಲಿ ತಾನು ಓದಿದ ಮತ್ತು ತಾನು ಓದಿದಾಗ ಅದು ಸರಿಯಾಗಿದೆ ಎಂದು ತಾನು ತಿಳಿದಿದ್ದರೆ ಅಂಥ ಯಾವುದೇ ಬರಹವನ್ನು ಸಾಕ್ಷಿದಾರನು ಪರಿಶೀಲಿಸಬಹುದು.

(2) ಯಾವುದೇ ದಸ್ತಾವೇಜನ್ನು ಪರಿಶೀಲಿಸುವ ಮೂಲಕ ಸಾಕ್ಷಿದಾರನು ಪುನಃ ನೆನಪು ಮಾಡಿಕೊಳ್ಳಬಹುದಾದಾಗ, ನ್ಯಾಯಾಲಯದ ಅನುಮತಿ ಪಡೆದುಕೊಂಡು ಆತನು ಅಂಥ ದಸ್ತಾವೇಜಿನ ಪ್ರತಿಯನ್ನು ಪರಿಶೀಲಿಸಬಹುದು:

ಪರಂತು, ಮೂಲ ಪ್ರತಿಯನ್ನು ಹಾಜರುಪಡಿಸದಿರಲು ಸಾಕಷ್ಟು ಕಾರಣವಿದೆಯೆಂದು ನ್ಯಾಯಾಲಯಕ್ಕೆ ಮನದಟ್ಟಾಗಬೇಕು:

ಮತ್ತು ಪರಂತು, ಒಬ್ಬ ತಜ್ಞನು ವೃತ್ತಿಯ ಗ್ರಂಥಗಳನ್ನು ಪರಿಶೀಲಿಸುವ ಮೂಲಕ ತಾನು ಪುನಃ ನೆನಪು ಮಾಡಿಕೊಳ್ಳಬಹುದು.

**163. ಪ್ರಕರಣ 162ರಲ್ಲಿ ನಮೂದಿಸಲಾದ ದಸ್ತಾವೇಜಿನಲ್ಲಿ ವಿವರಿಸಿದ ಸಂಗತಿಗಳಿಗೆ ಸಂಬಂಧಿಸಿದಂತೆ ಪರಿಸಾಕ್ಷ್ಯ.-** ಒಬ್ಬ ಸಾಕ್ಷಿದಾರನಿಗೆ, 162ನೇ ಪ್ರಕರಣದಲ್ಲಿ ನಮೂದಿಸಲಾದ ದಸ್ತಾವೇಜಿನಲ್ಲಿರುವ ಸಂಗತಿಗಳ ಬಗ್ಗೆ ನಿರ್ದಿಷ್ಟ ನೆನಪು ಇಲ್ಲದಿದ್ದರೂ, ಆ ಸಂಗತಿಗಳನ್ನು ದಸ್ತಾವೇಜಿನಲ್ಲಿ ಸರಿಯಾಗಿ ದಾಖಲಿಸಲಾಗಿದೆಯೆಂದು ಆತನಿಗೆ ಖಚಿತವಾಗಿರುವಲ್ಲಿ ಯಾವುದೇ ಅಂಥ ದಸ್ತಾವೇಜಿನಲ್ಲಿ ನಮೂದಿಸಲಾದ ಸಂಗತಿಗಳ ಬಗ್ಗೆಯೂ ಆತನು ಪರಿಸಾಕ್ಷ್ಯವನ್ನು ಕೊಡಬಹುದು.

*ದೃಷ್ಟಾಂತ*

ಲೆಕ್ಕ ಬರೆಯುವವನು ವ್ಯವಹಾರ ಕ್ರಮದಲ್ಲಿ ಕ್ರಮಬದ್ಧವಾಗಿ ಇಡಲಾದ ಪುಸ್ತಕಗಳಲ್ಲಿ ತಾನು ದಾಖಲಿಸಿದ ಸಂಗತಿಗಳ ಬಗ್ಗೆ ತಾನು ನಮೂದಿಸಿದ ನಿರ್ದಿಷ್ಟ ವ್ಯವಹಾರಗಳನ್ನು ಮರೆತಿದ್ದರೂ, ಆ ಪುಸ್ತಕಗಳನ್ನು ಸರಿಯಾದ ರೀತಿಯಲ್ಲಿ ಇಟ್ಟಿದೆಯೆಂದು ಅವನಿಗೆ ತಿಳಿದಿದ್ದರೆ, ಆತ ಆ ಬಗ್ಗೆ ಪರಿಸಾಕ್ಷ್ಯವನ್ನು ಕೊಡಬಹುದು.

**164. ನೆನಪು ಮಾಡಿಕೊಳ್ಳಲು ಬಳಸಿದ ಬರವಣಿಗೆಗೆ ಸಂಬಂಧಿಸಿದಂತೆ ಎದುರು ಪಕ್ಷಕಾರನ ಹಕ್ಕು.-** ಈ ಹಿಂದಿನ ಕೊನೆಯ ಎರಡು ಪ್ರಕರಣಗಳ ಉಪಬಂಧಗಳ ಮೇರೆಗೆ ಪರಿಶೀಲನೆಗೆ ತೆಗೆದುಕೊಂಡ ಯಾವುದೇ ಬರಹವನ್ನು, ಎದುರು ಪಕ್ಷಕಾರನು ಅಪೇಕ್ಷಿಸಿದರೆ ಹಾಜರುಪಡಿಸಬೇಕು ಮತ್ತು ಆತನಿಗೆ ತೋರಿಸಬೇಕು, ಅಂಥ ಪಕ್ಷಕಾರನು ಇಷ್ಟಪಟ್ಟರೆ ಆತನು ಅದಕ್ಕೆ ಸಂಬಂಧಿಸಿ ಸಾಕ್ಷಿದಾರನಿಗೆ ಪಾಟೀ-ಸವಾಲು ಮಾಡಬಹುದು.

**165. ದಸ್ತಾವೇಜುಗಳನ್ನು ಹಾಜರುಪಡಿಸುವುದು.-** (1) ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಕರೆಸಲಾದ ಸಾಕ್ಷಿದಾರನು, ಅದು ಅವನ ಸ್ವಾಧೀನದಲ್ಲಿದ್ದರೆ ಅಥವಾ ಅಧಿಕಾರಕ್ಕೊಳಪಟ್ಟಿದ್ದರೆ, ಅದರ ಹಾಜರುಪಡಿಸುವಿಕೆಗೆ ಅಥವಾ ಅದರ ಅಂಗೀಕಾರಾರ್ಹತೆಗೆ ಯಾವುದೇ ಆಕ್ಷೇಪಣೆಯಿರಬಹುದಾದರೂ, ಅದನ್ನು ನ್ಯಾಯಾಲಯಕ್ಕೆ ತರತಕ್ಕದ್ದು:

ಪರಂತು, ಯಾವುದೇ ಅಂಥ ಆಕ್ಷೇಪಣೆಯ ಸಿಂಧುತ್ವವನ್ನು ನ್ಯಾಯಾಲಯವು ನಿರ್ಣಯಿಸತಕ್ಕದ್ದು.

(2) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ಅದು ರಾಜ್ಯದ ವಿಷಯಗಳಿಗೆ ಸಂಬಂಧಿಸಿದ ಹೊರತು, ನ್ಯಾಯಾಲಯವು ದಸ್ತಾವೇಜನ್ನು ಪರಿಶೀಲಿಸಬಹುದು ಅಥವಾ ಅದರ ಅಂಗೀಕಾರಾರ್ಹತೆಯನ್ನು ನಿರ್ಧರಿಸಲು ಅನುಕೂಲವಾಗುವ ಇತರ ಸಾಕ್ಷ್ಯವನ್ನು ತೆಗೆದುಕೊಳ್ಳಬಹುದು.

(3) ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಕೊಡಬೇಕಾಗಿದ್ದ ಹೊರತು, ಅಂಥ ಉದ್ದೇಶಕ್ಕಾಗಿ ಯಾವುದೇ ದಸ್ತಾವೇಜನ್ನು ಭಾಷಾಂತರ ಮಾಡಿಸುವುದು ಅವಶ್ಯಕವಾದರೆ ನ್ಯಾಯಾಲಯವು ಸೂಕ್ತವೆಂದು ತಾನು ಭಾವಿಸಿದರೆ, ಅದರ ಒಳಾಂಶಗಳನ್ನು ಗೋಪ್ಯವಾಗಿಡಬೇಕೆಂದು ಭಾಷಾಂತರಕಾರನಿಗೆ ನಿರ್ದೇಶಿಸಬಹುದು ಮತ್ತು ಭಾಷಾಂತರಕಾರನು ಅಂಥ ನಿರ್ದೇಶನವನ್ನು ಉಲ್ಲಂಘಿಸಿದರೆ, ಭಾರತೀಯ ನ್ಯಾಯ ಸಂಹಿತೆ, 2023ರ 198ನೇ ಪ್ರಕರಣದ ಮೇರೆಗೆ ಆತನು ಅಪರಾಧ ಮಾಡಿರುವನೆಂದು ಪರಿಗಣಿಸತಕ್ಕದ್ದು.

ಪರಂತು, ಯಾವುದೇ ನ್ಯಾಯಾಲಯವು ಭಾರತದ ರಾಷ್ಟ್ರಪತಿಯವರ ಮತ್ತು ಸಚಿವರ ನಡುವಿನ ಯಾವುದೇ ಪತ್ರವ್ಯವಹಾರವನ್ನು ತನ್ನ ಮುಂದೆ ಹಾಜರುಪಡಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ.

**166. ನೋಟೀಸು ಮೂಲಕ ಕೋರಲಾದ ಮತ್ತು ಹಾಜರುಪಡಿಸಲಾದ ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಕೊಡುವುದು.-** ಯಾವ ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಕೋರಿ ಇನ್ನೊಬ್ಬ ಪಕ್ಷಕಾರನಿಗೆ ಒಬ್ಬ ಪಕ್ಷಕಾರನು ನೋಟೀಸು ಕೊಟ್ಟಿದ್ದಾನೆಯೋ ಆ ದಸ್ತಾವೇಜನ್ನು ಹಾಜರುಪಡಿಸಿದಾಗ ಮತ್ತು ಅದನ್ನು ಹಾಜರುಪಡಿಸಬೇಕೆಂದು ಕೋರಿದ ಪಕ್ಷಕಾರನು ಅಂಥ ದಸ್ತಾವೇಜನ್ನು ಪರಿಶೀಲಿಸಿದ ಮೇಲೆ, ಅದನ್ನು ಹಾಜರು ಮಾಡುವ ಪಕ್ಷಕಾರನು ಅದನ್ನು ಸಾಕ್ಷ್ಯವನ್ನಾಗಿ ಕೊಡಬೇಕೆಂದು ಅಪೇಕ್ಷಿಸಿದರೆ ಆತನು ಹಾಗೆ ಮಾಡಲು ಬದ್ಧನಾಗಿರುತ್ತಾನೆ.

**167. ನೋಟೀಸು ಕೊಟ್ಟರೂ ಹಾಜರುಪಡಿಸಲು ನಿರಾಕರಿಸಲಾದ ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಬಳಸುವುದು.-** ಯಾವ ದಸ್ತಾವೇಜನ್ನು ಹಾಜರುಪಡಿಸಲು ನೋಟೀಸು ಕೊಟ್ಟಿದ್ದರೂ, ಒಬ್ಬ ಪಕ್ಷಕಾರನು ನಿರಾಕರಿಸಿದಾಗ, ಇನ್ನೊಬ್ಬ ಪಕ್ಷಕಾರನ ಸಮ್ಮತಿಯಿಲ್ಲದೆ ಅಥವಾ ನ್ಯಾಯಾಲಯದ ಆದೇಶವಿಲ್ಲದೆ ಆ ದಸ್ತಾವೇಜನ್ನು ಅನಂತರ ಸಾಕ್ಷ್ಯವನ್ನಾಗಿ ಬಳಸುವಂತಿಲ್ಲ.

*ದೃಷ್ಟಾಂತ*

ಒಂದು ಒಪ್ಪಂದಕ್ಕೆ ಸಂಬಂಧಪಟ್ಟಂತೆ 'ಎ'ಯು 'ಬಿ'ಯ ಮೇಲೆ ದಾವೆ ಹೂಡುತ್ತಾನೆ ಮತ್ತು ಆ ಒಪ್ಪಂದವನ್ನು ಹಾಜರುಪಡಿಸಬೇಕೆಂದು 'ಬಿ'ಗೆ ನೋಟೀಸು ಕೊಡುತ್ತಾನೆ. ಅಧಿವಿಚಾರಣೆಯಲ್ಲಿ 'ಎ'ಯು ದಸ್ತಾವೇಜನ್ನು ಹಾಜರುಪಡಿಸುವಂತೆ ಕೋರುತ್ತಾನೆ ಮತ್ತು 'ಬಿ'ಯು ಅದನ್ನು ಹಾಜರುಪಡಿಸಲು ನಿರಾಕರಿಸುತ್ತಾನೆ, ಅದರ ಒಳಾಂಶಗಳ ಬಗ್ಗೆ 'ಎ'ಯ ಎರಡನೆಯ ಸಾಕ್ಷ್ಯವನ್ನು ವಿರೋಧಿಸಲು ಅಥವಾ ಒಪ್ಪಂದಕ್ಕೆ ಸ್ಟಾಂಪು ಹಾಕಿರಲಿಲ್ಲವೆಂದು ತೋರಿಸುವ ಸಲುವಾಗಿ 'ಬಿ'ಯು ಆ ದಸ್ತಾವೇಜನ್ನು ಹಾಜರುಪಡಿಸಲು ಬಯಸುತ್ತಾನೆ, ಆತನು ಹಾಗೆ ಮಾಡುವಂತಿಲ್ಲ.

**168. ಪ್ರಶ್ನಿಸಲು ಅಥವಾ ಹಾಜರುಪಡಿಸಬೇಕೆಂದು ಆದೇಶಿಸಲು ನ್ಯಾಯಾಧೀಶನ ಅಧಿಕಾರ.-** ನ್ಯಾಯಾಧೀಶನು, ಸುಸಂಬದ್ಧ ಸಂಗತಿಗಳ ಬಗೆಗಿನ ಯುಕ್ತ ರುಜುವಾತನ್ನು ಕಂಡುಹಿಡಿಯಲು ಅಥವಾ ಪಡೆಯಲು, ಯಾರೇ ಸಾಕ್ಷಿದಾರನನ್ನು ಅಥವಾ ಪಕ್ಷಕಾರನನ್ನು ಯಾವುದೇ ಸುಸಂಬದ್ಧ ಅಥವಾ ಅಸಂಬದ್ಧ ಸಂಗತಿಯನ್ನು ಕುರಿತು ಯಾವುದೇ ರೂಪದಲ್ಲಿ, ಯಾವುದೇ ಕಾಲದಲ್ಲಿ ತಾನು ಇಷ್ಟಪಟ್ಟ ಯಾವುದೇ ಪ್ರಶ್ನೆಯನ್ನು ಕೇಳಬಹುದು; ಮತ್ತು ಯಾವುದೇ ದಸ್ತಾವೇಜನ್ನು ಅಥವಾ ವಸ್ತುವನ್ನು ಹಾಜರುಪಡಿಸಲು ಆದೇಶಿಸಬಹುದು; ಮತ್ತು ಯಾವುದೇ ಅಂಥ ಪ್ರಶ್ನೆಗೆ ಅಥವಾ ಆದೇಶಕ್ಕೆ ಯಾವುದೇ ಆಕ್ಷೇಪಣೆಯನ್ನು ಮಾಡಲು ಮತ್ತು ನ್ಯಾಯಾಲಯದ ಅನುಮತಿ ಇಲ್ಲದೆ ಯಾವುದೇ ಅಂಥ ಪ್ರಶ್ನೆಗೆ ಕೊಟ್ಟ ಉತ್ತರದ ಮೇಲೆ ಯಾರೇ ಸಾಕ್ಷಿದಾರನನ್ನು ಪಾಟೀ-ಸವಾಲು ಮಾಡಲು ಪಕ್ಷಕಾರರಿಗೆ ಅಥವಾ ಅವರ ಏಜೆಂಟರಿಗೆ ಹಕ್ಕಿರತಕ್ಕದ್ದಲ್ಲ:

ಪರಂತು, ತೀರ್ಪು ಈ ಅಧಿನಿಯಮದ ಮೂಲಕ ಸುಸಂಬದ್ಧವೆಂದು ಘೋಷಿಸಿದ ಮತ್ತು ಕ್ರಮಬದ್ಧವಾಗಿ ರುಜುವಾತಾದ ಸಂಗತಿಗಳ ಮೇಲೆ ಆಧಾರಿತವಾಗಿರತಕ್ಕದ್ದು:

ಮತ್ತೂ ಪರಂತು, ಎದುರು ಪಕ್ಷಕಾರನು ಪ್ರಶ್ನೆಗಳನ್ನು ಕೇಳಿದರೆ ಅಥವಾ ದಸ್ತಾವೇಜನ್ನು ಕೋರಿದರೆ, 127ರಿಂದ 136ರವರೆಗಿನ ಪ್ರಕರಣಗಳ ಮೇರೆಗೆ, ಎರಡನ್ನೂ ಒಳಗೊಂಡು, ಅಂಥ ಸಾಕ್ಷಿದಾರನು ಯಾವ ಪ್ರಶ್ನೆಗೆ ಉತ್ತರಿಸಲು ಮತ್ತು ಯಾವ ದಸ್ತಾವೇಜನ್ನು ಹಾಜರು ಮಾಡಲು ನಿರಾಕರಿಸುವುದಕ್ಕೆ ಹಕ್ಕುಳ್ಳವನಾಗಿರುತ್ತಾನೋ ಅಂಥ ಪ್ರಶ್ನೆಗೆ ಉತ್ತರಿಸಬೇಕೆಂದು ಅಥವಾ ಆ ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಒತ್ತಾಯ ಮಾಡಲು ಈ ಪ್ರಕರಣವು ಯಾರೇ ನ್ಯಾಯಾಧೀಶನನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ 151ನೇ ಅಥವಾ 152ನೇ ಪ್ರಕರಣದ ಮೇರೆಗೆ ಯಾರೇ ಇತರ ವ್ಯಕ್ತಿಯು ಕೇಳಲು ಯುಕ್ತವಲ್ಲದ ಯಾವುದೇ ಪ್ರಶ್ನೆಯನ್ನು ನ್ಯಾಯಾಧೀಶನು ಕೇಳತಕ್ಕದ್ದಲ್ಲ; ಅಥವಾ ಈ ಮೇಲೆ ಹೊರತುಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ದಸ್ತಾವೇಜಿನ ಬಗ್ಗೆ ಪ್ರಾಥಮಿಕ ಸಾಕ್ಷ್ಯವನ್ನು ಬಿಟ್ಟುಬಿಡತಕ್ಕದ್ದಲ್ಲ.

## ಅಧ್ಯಾಯ XI

## ಸಾಕ್ಷ್ಯದ ಅನುಚಿತ ಅಂಗೀಕಾರ ಮತ್ತು ತಿರಸ್ಕರಣೆ

**169. ಸಾಕ್ಷ್ಯದ ಅನುಚಿತ ಅಂಗೀಕಾರಕ್ಕಾಗಿ ಅಥವಾ ತಿರಸ್ಕಾರಕ್ಕಾಗಿ ಯಾವ ಹೊಸ ಅಧಿವಿಚಾರಣೆಯೂ ಇರಬಾರದು.-** ಆಕ್ಷೇಪಿಸಲ್ಪಟ್ಟ ಮತ್ತು ಅಂಗೀಕೃತವಾದ ಸಾಕ್ಷ್ಯವನ್ನು ಬಿಟ್ಟು ಆ ತೀರ್ಮಾನವನ್ನು ಸಮರ್ಥಿಸಲು ಸಾಕಷ್ಟು ಸಾಕ್ಷ್ಯವಿತ್ತೆಂದು ಅಥವಾ ತಿರಸ್ಕೃತವಾದ ಸಾಕ್ಷ್ಯವು ಸ್ವೀಕೃತವಾಗಿದ್ದಲ್ಲಿ ಅದು ಆ ತೀರ್ಮಾನವನ್ನು ಬದಲಾಯಿಸುತ್ತಿರಲಿಲ್ಲವೆಂದು, ಯಾವ ನ್ಯಾಯಾಲಯದ ಮುಂದೆ ಆಕ್ಷೇಪಣೆ ಎತ್ತಲಾಗಿದೆಯೋ, ಆ ನ್ಯಾಯಾಲಯಕ್ಕೆ ಕಂಡುಬಂದರೆ, ಆ ಸಾಕ್ಷ್ಯದ ಅನುಚಿತ ಅಂಗೀಕಾರ ಅಥವಾ ತಿರಸ್ಕರಣೆಯು ಮಾತ್ರವೇ ಒಂದು ಹೊಸ ಅಧಿವಿಚಾರಣೆಗೆ ಅಥವಾ ಯಾವುದೇ ಮೊಕದ್ದಮೆಯಲ್ಲಿನ ಯಾವುದೇ ತೀರ್ಮಾನವನ್ನು ವಿಪರ್ಯಯಗೊಳಿಸುವುದಕ್ಕೆ ಆಧಾರವಾಗತಕ್ಕದ್ದಲ್ಲ.

## ಅಧ್ಯಾಯ XII

## ನಿರಸನ ಮತ್ತು ಉಳಿಸುವಿಕೆಗಳು

**170. ನಿರಸನ ಮತ್ತು ಉಳಿಸುವಿಕೆ.-** (1) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ, ಈ ಅಧಿನಿಯಮ ಜಾರಿಗೆ ಬರುವ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ಅರ್ಜಿ, ಅಧಿವಿಚಾರಣೆ, ವಿಚಾರಣೆ, ತನಿಖೆ, ವ್ಯವಹರಣೆ ಅಥವಾ ಅಪೀಲು ಇತ್ಯರ್ಥದಲ್ಲಿದ್ದರೆ, ಆಗ, ಅಂಥ ಅರ್ಜಿ, ಅಧಿವಿಚಾರಣೆ, ವಿಚಾರಣೆ, ತನಿಖೆ, ವ್ಯವಹರಣೆ ಅಥವಾ ಅಪೀಲನ್ನು ಈ ಅಧಿನಿಯಮವು ಜಾರಿಗೆ ಬರದಿದ್ದರೆ ಹೇಗೋ ಹಾಗೆ ಎಂಬಂತೆ, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವಂತೆ, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಉಪಬಂಧಗಳ ಅಡಿಯಲ್ಲಿ ವ್ಯವಹರಿಸತಕ್ಕದ್ದು.

**ಅನುಸೂಚಿ**

[ಪ್ರಕರಣ 63 (4)(ಸಿ) ನ್ನು ನೋಡಿ]

**ಪ್ರಮಾಣಪತ್ರ**

**ಭಾಗ ಎ**

(ಪಕ್ಷಕಾರರು ಭರ್ತಿ ಮಾಡಬೇಕು)

……………….. ನಿವಾಸಿ/ಉದ್ಯೋಗಿಯಾದ …………… ಮಗ/ಮಗಳು/ಪತಿ/ಪತ್ನಿಯಾದ………….. (ಹೆಸರು) ಆದ ನಾನು ಈ ಕೆಳಗಿನಂತೆ ಶ್ರದ್ಧಾಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ಈ ಮೂಲಕ ದೃಢೀಕರಿಸುತ್ತಿದ್ದೇನೆ:-

ನಾನು, ಈ ಕೆಳಗಿನ ಸಾಧನ/ಡಿಜಿಟಲ್ ದಾಖಲೆ ಮೂಲದಿಂದ (ಗುರುತು ಮಾಡಿ) ತೆಗೆದುಕೊಂಡ ವಿದ್ಯುನ್ಮಾನ ದಾಖಲೆ/ ಡಿಜಿಟಲ್ ದಾಖಲೆಯ ಔಟ್‌ಪುಟ್‌ನ್ನು ಹಾಜರುಪಡಿಸುತ್ತಿದ್ದೇನೆ:-

ಕಂಪ್ಯೂಟರ್/ ಸಂಗ್ರಹಣಾ ಮಾಧ್ಯಮ ☐ ಡಿವಿಆರ್ ☐ ಮೊಬೈಲ್ ☐ ಫ್ಲ್ಯಾಶ್ ಡ್ರೈವ್ ☐

ಸಿಡಿ/ಡಿವಿಡಿ ☐ ಸರ್ವರ್ ☐ ಕ್ಲೌಡ್ ☐ ಇತರೆ ☐

ಇತರೆ:……………………………………………….

ತಯಾರಿಸಿದುದು/ಮಾದರಿ:……………………….. ಬಣ್ಣ:………………………….

ಕ್ರಮ ಸಂಖ್ಯೆ:……………..

ಐಎಮ್‌ಇಐ/ಯುಐಎನ್/ಯುಐಡಿ/ಎಮ್‌ಎಸಿ/ ಕ್ಲೌಡ್ ಐಡಿ……………… (ಅನ್ವಯವಾಗುವಂತೆ)

ಮತ್ತು ಯಾವುದೇ ಇತರೆ ಸಂಬಂಧಪಟ್ಟ ಮಾಹಿತಿ ಯಾವುದಾದರೂ ಇದ್ದರೆ, ಸಾಧನ/ಡಿಜಿಟಲ್ ದಾಖಲೆ ಬಗ್ಗೆ …………… (ನಿರ್ದಿಷ್ಟಪಡಿಸಿ)

ನಿಯಮಿತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ನಿಯಮಿತವಾಗಿ ಮಾಹಿತಿಯನ್ನು ಸೃಜಿಸುವ, ಸಂಗ್ರಹಿಸುವ ಅಥವಾ ಸಂಸ್ಕರಿಸುವುದಕ್ಕಾಗಿ ಡಿಜಿಟಲ್ ಸಾಧನ ಅಥವಾ ಡಿಜಿಟಲ್ ದಾಖಲೆ ಮೂಲಗಳು ಕಾನೂನುಸಮ್ಮತ ನಿಯಂತ್ರಣದ ಅಡಿಯಲ್ಲಿರುತ್ತವೆ ಮತ್ತು ಈ ಅವಧಿಯಲ್ಲಿ, ಗಣಕಯಂತ್ರ ಅಥವಾ ಸಂವಹನ ಸಾಧನಗಳು ಯುಕ್ತವಾಗಿ ಕಾರ್ಯನಿರ್ವಹಿಸುತ್ತಿದ್ದು, ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಸಂಬಂಧಪಟ್ಟ ಮಾಹಿತಿಯನ್ನು ನಿಯಮಿತವಾಗಿ ಗಣಕಯಂತ್ರಕ್ಕೆ ಅಳವಡಿಸಲಾಗಿತ್ತು. ಯಾವುದೇ ಸಮಯದಲ್ಲಿ ಗಣಕಯಂತ್ರ/ಡಿಜಿಟಲ್ ಸಾಧನಗಳು ಯುಕ್ತವಾಗಿ ಕಾರ್ಯನಿರ್ವಹಿಸದಿದ್ದರೆ ಅಥವಾ ಚಾಲನೆಯಲ್ಲಿಲ್ಲದ್ದಿದ್ದರೆ ಆಗ ಅದು ವಿದ್ಯುನ್ಮಾನ/ಡಿಜಿಟಲ್ ದಾಖಲೆ ಅಥವಾ ಅದರ ನಿಖರತೆ ಮೇಲೆ ಪರಿಣಾಮ ಉಂಟಾಗಿರುವುದಿಲ್ಲ. ಡಿಜಿಟಲ್ ಸಾಧನ ಅಥವಾ ಡಿಜಿಟಲ್ ದಾಖಲೆಯ ಮೂಲವನ್ನು,-

ನನ್ನ ಒಡೆತನದಾಗಿದೆ ☐ ನಿರ್ವಹಿಸಿರುತ್ತೇನೆ ☐ ವ್ಯವಸ್ಥೆ ಮಾಡಿರುತ್ತೇನೆ ☐ ಚಾಲನೆ ಮಾಡಿರುತ್ತೇನೆ ☐

(ಅನ್ವಯವಾಗುವುದನ್ನು ಆಯ್ಕೆ ಮಾಡಿ)

ನಾನು ವಿದ್ಯುನ್ಮಾನ/ಡಿಜಿಟಲ್ ದಾಖಲೆ/ಗಳ ಹ್ಯಾಸ್ ಮೌಲ್ಯ/ಗಳನ್ನು ಈ ಕೆಳಗಿನ ಕ್ರಮಾವಳಿ (algorithm) ಗಳ ಮುಖಾಂತರ ಪಡೆದಿರುತ್ತೇನೆ:-

☐ ಎಸ್‌ಎಚ್‌ಎ1:

☐ ಎಸ್‌ಎಚ್‌ಎ256:

☐ ಎಂಡಿ5:

☐ ಇತರೆ……………… (ಕಾನೂನಾತ್ಮಕವಾಗಿ ಅಂಗೀಕರಿಸಬಹುದಾದ ಮಾನದಂಡ)

(ಪ್ರಮಾಣಪತ್ರದೊಂದಿಗೆ ಹ್ಯಾಶ್ ವರದಿಯನ್ನು ಲಗತ್ತಿಸುವುದು)

(ಹೆಸರು ಮತ್ತು ಸಹಿ)

ದಿನಾಂಕ (DD/MM/YYYY):………….

ಸಮಯ (ಐಎಸ್‌ಟಿ)…………….. ಗಂಟೆಗಳು (24 ಗಂಟೆಗಳ ರೂಪದಲ್ಲಿ)

ಸ್ಥಳ: ………………….

**ಭಾಗ-ಬಿ**

(ತಜ್ಞರು ಭರ್ತಿ ಮಾಡಬೇಕು)

……………….. ನಿವಾಸಿ/ಉದ್ಯೋಗಿಯಾದ …………… ಮಗ/ಮಗಳು/ಪತಿ/ಪತ್ನಿಯಾದ………….. (ಹೆಸರು) ಆದ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ಹಾಗೂ ಪ್ರಾಮಾಣಿಕವಾಗಿ ದೃಢೀಕರಿಸಿ ಕೆಳಗಿನಂತೆ ಸಲ್ಲಿಸುತ್ತಿದ್ದೇನೆ:-

ಹಾಜರುಪಡಿಸಿದ ವಿದ್ಯುನ್ಮಾನ ದಾಖಲೆ/ ಡಿಜಿಟಲ್ ದಾಖಲೆಯ ಔಟ್‌ಪುಟ್‌ನ್ನು ಈ ಕೆಳಗಿನ ಸಾಧನ/ಡಿಜಿಟಲ್ ದಾಖಲೆ ಮೂಲದಿಂದ ಪಡೆದುಕೊಳ್ಳಲಾಗಿದೆ (ಗುರುತು ಮಾಡಿ):-

ಗಣಕಯಂತ್ರ/ ಸಂಗ್ರಹಣಾ ಮಾಧ್ಯಮ ☐ ಡಿವಿಆರ್ ☐ ಮೊಬೈಲ್ ☐ ಫ್ಲ್ಯಾಶ್ ಡ್ರೈವ್ ☐

ಸಿಡಿ/ಡಿವಿಡಿ ☐ ಸರ್ವರ್ ☐ ಕ್ಲೌಡ್ ☐ ಇತರೆ ☐

ಇತರೆ:……………………………………………..

ತಯಾರಿಸಿದುದು/ಮಾದರಿ:……………………….. ಬಣ್ಣ:………………………….

ಕ್ರಮ ಸಂಖ್ಯೆ:……………..

ಐಎಮ್‌ಇಐ/ಯುಐಎನ್/ಯುಐಡಿ/ಎಮ್‌ಎಸಿ/ ಕ್ಲೌಡ್ ಐಡಿ……………… (ಅನ್ವಯವಾಗಬಹುದಾದ)

ಮತ್ತು ಯಾವುದೇ ಇತರೆ ಸಂಬಂಧಪಟ್ಟ ಮಾಹಿತಿ, ಸಾಧನ/ಡಿಜಿಟಲ್ ದಾಖಲೆ ಬಗ್ಗೆ ……………(ನಿರ್ದಿಷ್ಟಪಡಿಸಿ)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ವಿದ್ಯುನ್ಮಾನ/ಡಿಜಿಟಲ್ ದಾಖಲೆ/ಗಳ ಹ್ಯಾಸ್ ಮೌಲ್ಯ/ಗಳನ್ನು ಈ ಕೆಳಗಿನ ಕ್ರಮಾವಳಿ (algorithm) ಗಳ ಮುಖಾಂತರ ಪಡೆದಿರುತ್ತೇನೆ:-

☐ ಎಸ್‌ಎಚ್‌ಎ1:

☐ ಎಸ್‌ಎಚ್‌ಎ256:

☐ ಎಂಡಿ5:

☐ ಇತರೆ……………… (ಕಾನೂನಾತ್ಮಕವಾಗಿ ಅಂಗೀಕರಿಸಬಹುದಾದ ಮಾನದಂಡ)

(ಪ್ರಮಾಣಪತ್ರದೊಂದಿಗೆ ಹ್ಯಾಶ್ ವರದಿಯನ್ನು ಲಗತ್ತಿಸುವುದು)

(ಹೆಸರು, ಪದನಾಮ ಮತ್ತು ಸಹಿ)

ದಿನಾಂಕ (DD/MM/YYYY):………….

ಸಮಯ (ಐಎಸ್‌ಟಿ)…………….. ಗಂಟೆಗಳು (24 ಗಂಟೆಗಳ ರೂಪದಲ್ಲಿ)

ಸ್ಥಳ: ………………….

-------------

ಡಾ. ರಾಜೀವ್ ಮಣಿ

ಭಾರತ ಸರ್ಕಾರದ ಕಾರ್ಯದರ್ಶಿ

Dr. Rajiv Mani
Secretary to Government of India

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH